ಹುಣ್ಣಿಮೆಯಿಂದ ಹುಣ್ಣಿಮೆಗೆ... ನವೆಂಬರ್-ಡಿಸೆಂಬರ್ 2011

ಆದಿಮ ಅಲಿಂಗ್ ಟೈಮ್ಸ್

.....ತಪ್ಪು ಚಿಕ್ಕದು ಮಾಡು ತೆಪ್ಪ ದೊಡ್ಡದು ಮಾಡು

ಸಂಪುಟ : 1 ಸಂಚಿಕೆ : 3 ಪುಟಗಳು: 24 ಬಿಡಿ ಪ್ರತಿ ಬೆಲೆ ರೂ. 10



ಈ ತಪ್ಪು ಮನ್ನಿಸು ಪ್ರಭುವೇ... ಎಚ್ಚೆತ್ತ ಓ ದಲಿತ ಚೇತನವೇ...

ಕಳೆದ ಮೂವತ್ತು ವರ್ಷಗಳ 'ದಲಿತ ಸಂಘರ್ಷ ಸಮಿತಿ'ಯ ಪ್ರಜ್ಞಾ ಪ್ರವಾಹಕ್ಕೆ ಸಿಕ್ಕಿ ಕೊಚ್ಚಿ ಹೋಗಿರುವ ಸಾವಿರಾರು ಜನರಲ್ಲಿ ನಾನೂ ಒಬ್ಬ. ಆದ್ದರಿಂದ ಭೌತಿಕ, ಭೌಗೋಳಿಕ ಗಡಿಗೆರೆಗಳಿಗಿಂತ ಮನಸ್ಸಿನ ಭಾಗವಾಗಿರುವ ತಿರಸ್ಕಾರವನ್ನು ಅರ್ಥಮಾಡಿಕೊಳ್ಳಬೇಕಾದ ಇದುವರೆಗಿನ ರೀತಿ ನೀತಿಗಳನ್ನು ಬಿಟ್ಟು ಬೇರೆಯದನ್ನೇ ಹುಡುಕಬೇಕೆಂಬುದು ನನ್ನ ನಮ್ರ ಬೇಡಿಕೆ. ಇದು ಹಲವು ಮನಸುಗಳು ಸೇರಿ ಆಗಬೇಕಾದ 'ಗುಡಿ' ಚಾಕರಿ.

ನಿದರ್ಶನಕ್ಕೆ 'ಬೆಂಡಿಗೇರಿ' ಮತ್ತು 'ಹರಟಿ' ಈ ಎರಡೂ ಊರುಗಳು ಕಾಲಯಾನದಲ್ಲಿ ಮ್ಯಾಗ್ನೆಟಿಕ್ ಪೀಲ್ಡ್‌ನಿಂದ ಹೊರಗಿದ್ದ ಊರುಗಳು ಒಂದು ದಿನ ದಿಢೀರನೆ ಜಾಗತಿಕ ರಾಜಕಾರಣಕ್ಕೆ ನೆಗೆಯಬಲ್ಲ ಸ್ಪ್ರಿಂಗ್ ಬೋರ್ಡ್ ಆಗುತ್ತವೆ ಎಂದರೆ ಅದೊಂದು ಸಾಧಾರಣ ಸಂಗತಿ ಯಾಕಾಗಬೇಕು? ಆದ್ದರಿಂದ ಯಾರೇ ಸಮಾಜ ಬದಲಾವಣೆಯಲ್ಲಿ ನಂಬಿಕೆ ಇಟ್ಟಿರುವವರು ಈ ಎರಡು ವೃತ್ತಾಂತಗಳನ್ನು ಚೆನ್ನಾಗಿ ಅರಿತಿರಬೇಕಾಗುತ್ತದೆ; ಯಾವುದೇ ತೀರ್ಮಾನಕ್ಕೆ ಬರುವ ಮುನ್ನ. ಯಾಕೆಂದರೆ ಏಷ್ಟೇ ಆಗಲಿ ನಾವು ಆ 'ಸಮುದಾಯ'ಕ್ಕೆ ಅನ್ಯರು, ಹೊರಗಿನವರು. ಹೊರಗಿನಿಂದ ನೋಡುವುದಕ್ಕೆ ಎಷ್ಟು ಸಾಧ್ಯವೋ ಅಷ್ಟೇ ನಮ್ಮ ಒಳಗೊಳ್ಳುವ ಮಿತಿ. ಅದರಾಚೆಯ ವಕ್ತಾರಿಕೆಯಾಗಲಿ, ದಿವ್ಯ ಮೌನಗಳಾಗಲಿ ನಮ್ಮ ಆತ್ಮಸಾಕ್ಷಿಗೆ ನ್ಯಾಯ ನೀಡಲಾರವು. ಇಂತಹ ಕರುಣೆಯ ಸಾಂತ್ವನದ ಹಂಗಿಲ್ಲದ, ಅನುಕಂಪದ ತಣ್ಣಗಿನ ವಿಷವಿಲ್ಲದ 'ಮುಟ್ಟುವಿಕೆ' ಈ ಹೊತ್ತಿನ ಎಲ್ಲರ ಉಳಿವು.

ಕಳೆದ ಇಪ್ಪತ್ತು ವರ್ಷಗಳಿಂದಲೂ ಈ ಜನಾಂಗಗಳನ್ನು ವಿಶೇಷ ಆದ್ಯತೆಯ ಪಟ್ಟಿಗೆ ತರುತ್ತಿರುವಂತೆ ನಾಟಕವಾಡಿ ನೂರಾರು ಅಧ್ಯಯನ ಯೋಜನೆಗಳಿಗೆ ಬಹುಪಾಲು ಸಂಪನ್ಮೂಲ ಪೋಲು ಮಾಡಿ.. ಕಂಡುಕೊಂಡಿರುವ ಅಸ್ತ್ರಗಳಲ್ಲಿ ಈ ಅನನ್ಯತೆಯ ಗುರುತು ರಾಜಕಾರಣವೂ ಒಂದು. ಇದನ್ನೇ ಇಂದ್ರ ಛಾಪದಂತೆ ಬಿಂಬಿಸಿ ಆ ಅನನ್ಯತೆಯನ್ನೇ ಅಸ್ತ್ರವಾಗಿಸಿಕೊಂಡು ಮುಂದೊಂದು ದಿನ 'ಯಾದವೀ ಕಲಹ'ದಲ್ಲಿ ಈ ಸಮುದಾಯಗಳು ಸರ್ವನಾಶವಾಗಲಿ ಎಂಬುದೇ 'ಪ್ರಭುತ್ವ' ಇಂಗಿತ. ಅದಕ್ಕೆ ಈ ಸಮುದಾಯಗಳು ತಕ್ಕಂತೆ ನವ ಆರ್ಥಿಕತೆ ಹೇಳುವ ಮಂತ್ರ 'ಸೋಷಿಯಲ್ ಜಸ್ಟೀಸ್ ಮತ್ತು ಎಂಪವರ್ಮೆಂಟ್' ಇತ್ಯಾದಿ... ಈ ನೆಲದ ಮೂಲ 'ಅಸ್ಪೃಶ್ಯ' ಕುಲಗಳನ್ನು ಜೀರ್ಣಿಸಿಕೊಂಡು ಬದುಕುವುದು ಅಷ್ಟೊಂದು ಸಲೀಸಲ್ಲ. ಯಾಕೆಂದರೆ ಅದು ಅವರೇ ಅವರ ಕೈಯಾರೇ ಮುಖಕ್ಕೆ ಬಳಿದುಕೊಂಡಿರುವ ಕಪ್ಪು ಚುಕ್ಕೆ. ಅಷ್ಟೇ ಅಲ್ಲ 'ಕಪ್ಪುರಂಧ್ರ' 'ಬ್ಲ್ಯಾಕ್‌ಹೋಲ್'.. ಇದೆಲ್ಲಾ ಅಂತಿಮವಾಗಿ ಈ ಅಸ್ಪೃಶ್ಯ ನೆಲೆಗಳನ್ನು ತಂದು ದೂಡುವುದು 'ಮ್ಯಾನ್‌ಹೋಲ್'ಗೇನೆ. ಬೆಂಡಿಗೇರಿ ಮತ್ತು ಹರಟಿ.. ಈ ಅಖಂಡ ಭಾರತವೆಂಬ ನಾಟಕದಲ್ಲಿ ಮನುಷ್ಯನೊಬ್ಬನಿಗೆ ಇನ್ನೊಬ್ಬ ಮನುಷ್ಯ ಮಲ ತಿನ್ನಿಸಿದ.. ಘೋರಾತಿ ಘೋರ ಪ್ರಕರಣಗಳು...

ಇಂಥ ಮ್ಯಾನ್‌ಹೋಲ್.. ಹಂತಕ್ಕೆ ತಳ್ಳಿಸಿಕೊಳ್ಳುವುದೇ ನಮ್ಮ ಹಣೆಬರಹವಾಗಿರುವಾಗ.. ನಾವು ಈ ನೆಲದ ಮಲಸಂಬಂಧದ ಮಾನಸಿಕ ಖಾಯಿಲೆಗಳನ್ನು ಅಧ್ಯಯನ ಹಿನ್ನೆಲೆಯಾಗಿ ನೋಡಬೇಕಾಗುತ್ತದೆ. ಅಂಥ ಸ್ಥಿತಿಗೆ ಯಾರೂ ಹೋಗದಂತೆ ಯಾರಿಗೂ ಬರದಂತೆ ನಮ್ಮನ್ನು ನಾವೇ ಹಿಡಿದಿಟ್ಟುಕೊಳ್ಳಬೇಕಾಗುತ್ತದೆ. ಇಲ್ಲದೆ ಹೋದಲ್ಲಿ ಉಣ್ಣಲು ಮುಂದಿಟ್ಟಿರುವ ಗಂಗಾಳದಲ್ಲಿ ಅನ್ನದ ಬದಲು...

ಮಲವೇ ಅನ್ನ ಬ್ರಹ್ಮ ಆಗುವ.. ಆ ಅನ್ನ ಬ್ರಹ್ಮವೇ ಮುಂದಿನ ಮಲವಾಗುವ ರಸವಿದ್ಯೆಗಿಂತ ಯಾವ ದೊಡ್ಡ ವಿದ್ಯೆ ಇದೆಯೋ ನಾನರಿಯೇ.. ಮಲವೆಂದರೆ ಮನುಷ್ಯನೊಳಗಿನ ನಿರ್ಮಾಲ್ಯವಲ್ಲದೆ ಮತ್ತೇನು? ಆದ್ದರಿಂದ ಈ ಮಲಸಂಬಂಧಿ ಪೋಸ್ಟ್‌ಮಾರ್ಟಂ ರಿಪೋರ್ಟನ್ನು ಒಪ್ಪುವುದು ಕಷ್ಟವಾದವರು... ಫೋರ್‌ಹ್ಯಾನ್ಸಿಕ್ ಪರೀಕ್ಷೆಗೆ ಒತ್ತಾಯಿಸಬಹುದು.

○

ತಿಕ್ಕಲುತನಕ್ಕಿದೆ

ನಮ್ಮ ಬೆಂಬಲ

ಜಾಗತಿಕ ಸಮಸ್ಯಾತ್ಮಕ ಸನ್ನಿವೇಶಗಳಿಗೆ ಪ್ರಾದೇಶಿಕ ನೆಲೆಯ ಉತ್ತರಗಳು ಸಾಕಾರಗೊಳ್ಳುವ ಕನಸಿನ ಕಿಡಿಯಾಗಿ 'ಆದಿಮ ಲಿವಿಂಗ್ ಟೈಮ್ಸ್' ಮೂಡಿ ಬಂದಿದೆ. ಇದು ಎರೆಹುಳಗಳ ತಾಣ. ಹಿರಿ-ಕಿರಿಯ ಮಿತಿಗಳಿಲ್ಲದೆ ಎಲ್ಲರೂ ಸೇರಿ ಎರೆಹುಳುವಿನ ಹಾಗೆ ನೆಲದ-ಮಣ್ಣಿನ ಉಳುಮೆಗೆ ಹುಣ್ಣಿಮೆಯ ತಪೋವನ. ಮಹಿಳಾ, ದಲಿತ, ವಿದ್ಯಾರ್ಥಿ ಮತ್ತು ಕಾರ್ಮಿಕ ಚಳುವಳಿಗಳು ನೆಲೆ, ದನಿ ಕಳೆದುಕೊಂಡಂತಿರುವ ಈ ವಿಷಮ ಪರಿಸ್ಥಿತಿಯಲ್ಲಿ, ವಸಾಹತುಶಾಹಿ ನಂತರದ ಕ್ರೌರ್ಯಗಳ ವಿರುದ್ಧ ನೆಲದೊಡಲ ಕಾರ್ಯಚಟುವಟಿಕೆಗಳ ಮುಖೇನ ಮುಖಾ-ಮುಖಿಯಾಗುತ್ತಿರುವ ಕೋಟಿಗಾನಹಳ್ಳಿ ರಾಮಯ್ಯನವರ ಎಲೆಬಳ್ಳಿ ತೋಟಮಾಡುವ ಕನಸನ್ನೊತ್ತಿರುವ ತಿಕ್ಕಲುತನಕ್ಕೆ ಜೀವಪರ ಮಿಡಿಯುವ ಹಲವು ಮನಸುಗಳಿಗೆ ರಾಮಯ್ಯನವರೊಡನೆ ಕೈ ಜೋಡಿಸಲು ಮನಸ್ಸಾದರೂ ತಟಸ್ಥವಾಗಿರುವುದಕ್ಕೂ ರಾಮಯ್ಯನವರೇ ಕಾರಣವೆಂಬುದು ಕನ್ನಡಿಯೊಳಗಿನ ಗಂಟು.

ಆದಿಮ 'ಲಿವಿಂಗ್ ಟೈಮ್ಸ್'ನ ಕನಸು ಬಹುಮುಖ್ಯವಾದ, ಮಾಡಲೇಬೇಕಾದ ತಿಕ್ಕಲುತನವಾಗಿದ್ದು, ಈ ನಿಟ್ಟಿನಲ್ಲಿ ಎಲೆಬಳ್ಳಿಯ ಒಂದೇ ಎಲೆಯನ್ನು ನೆಚ್ಚಿಕೊಳ್ಳದೆ, ಕೆಲವರ ನಿರ್ಮಿತ ಪೂರ್ವಗ್ರಹಗಳಿಗೂ ಸೋತು, ಬಳ್ಳಿಯ ಹಲವು ಎಲೆಗಳನ್ನು ಕಳೆದುಕೊಳ್ಳದೆ ಬಳ್ಳಿಯ ಎಲ್ಲಾ ಎಲೆಗಳೊಂದಿಗೆ ಜೊತೆಗೂಡಿದರೆ, ಬಳ್ಳಿ ಬಲವಾಗಿ, ಕನಸಿನ ಸಾಕಾರಕ್ಕೆ ಸಾಧ್ಯವಾದೀತೆನ್ನುವುದು ನನ್ನ ಕುಡಿಯಾಸೆ.

-ಮಂಜುನಾರಾಯಣ್ ಕೆ.ಎಲ್.

ನೋಡುವ ಕಣ್ಣು ಮನಸ್ಸು ನಮ್ಮದಾಗಲಿ

ಬನಶಂಕರಿಯ ಸುಚಿತ್ರ ಫಿಲಂ ಸೊಸೈಟಿಯಲ್ಲಿ ಕಿ.ರಂ.ರವರ ಕೊನೆಯ ಉಪನ್ಯಾಸವನ್ನು ಕೇಳಿ ಮನೆಗೆ ಮರಳಿದ್ದೆ. ಮೇಷ್ಟ್ರು ಮಾತಾಡಿದ್ದ ಬೇಂದ್ರೆ ಕಾವ್ಯ ಇನ್ನು ಕಿವಿಯಲ್ಲಿ ಗುನು ಗುನಿಸುತ್ತಿತ್ತು. ಅಷ್ಟರಲ್ಲಿ ಗೆಳೆಯ ಪ್ರದೀಪ್ ಫೋನ್ ಮಾಡಿ ಮೇಷ್ಟ್ರು ತೀರಿಕೊಂಡರು ಎಂದ. ಆಕಾಶವೇ ಕಳಚಿ ಬಿದ್ದಂತಾಯಿತು. ಕೂಡಲೇ ಸೌಥ್ ಎಂಡ್ ಸರ್ಕಲ್‌ನ ಬೆಂಗಳೂರು ಆಸ್ಪತ್ರೆಯ ಬಳಿಗೆ ಹೋದೆ. ತಡ ರಾತ್ರಿಯವರೆಗೂ ಮೇಷ್ಟ್ರು ಬಗ್ಗೆ ಎಲ್ಲರೂ ಮಾತನಾಡುತ್ತಿದ್ದೆವು. ಆಗ ಒಬ್ಬ ಗೆಳೆಯ ಮುಂದಿನ ತಲೆಮಾರಿನವರು ಮೇಷ್ಟ್ರನ್ನು ಕ್ಷಮಿಸುವುದಿಲ್ಲ ಎಂದು ಗಂಭೀರವಾಗಿ ಆಕ್ಷೇಪಿಸಿದ. ಅದಕ್ಕೆ ಕಾರಣವಾದರೂ ಮೇಷ್ಟ್ರು ಮಾತಾಡಿದ್ದೆ ಹೆಚ್ಚು, ಬರೆದದ್ದು ಕಡಿಮೆ.

ನಾನು ಕೋಲಾರಕ್ಕೆ ಕೆಲಸಕ್ಕೆ ಸೇರಿದ ಮೇಲೆ ಏನಾದರೂ ಸರಿಯೇ ಕಿ.ರಂ. ಮೇಷ್ಟ್ರನ್ನು ಕಾಲೇಜಿಗೆ ಕರೆಸಲೇಬೇಕೆಂಬ ಹಠ ತೊಟ್ಟವನಂತೆ ಕೋಲಾರಕ್ಕೆ ಕರೆತಂದೆ. ಅಂದಿನ ಸಮಾರಂಭದಲ್ಲಿ ಕೆ.ರಾಮಯ್ಯನವರು ಮುಖ್ಯ ಅತಿಥಿಗಳು. ಕಾರ್ಯಕ್ರಮ ಮುಗಿದ ಮೇಲೆ ಮೇಷ್ಟ್ರು ಮತ್ತು ರಾಮಯ್ಯನವರು ಪ್ರಭಾಕರ್‌ರವರ ಮನೆಗೆ ಬಂದರು. ಅಂದು ಸುದೀರ್ಘವಾಗಿ ಅದು-ಇದೂ ಮಾತನಾಡುತ್ತಿದ್ದರು. ಅಲ್ಲಿಯೇ ಅವರ ಮನೆಯಲ್ಲಿ ಮುದ್ದೆ ಮತ್ತು ಸೊಪ್ಪಿನ ಸಾರಿನ ಮಜಬೂತಾದ ಊಟವಾಯಿತು. ಸಂಜೆಯಷ್ಟೊತ್ತಿಗೆ ಆದಿಮದ ಜೀಪಿನಲ್ಲಿ ಮೇಷ್ಟ್ರು, ನಾನು ಮತ್ತು ಡೊಮಿನಿಕ್ ಹೋದೆವು. ಆದಿಮವನ್ನು ನೋಡಿ ಮೇಷ್ಟ್ರಿಗೆ ಅಂದು ಬಹಳ ಖುಷಿಯಾಯಿತು. ತುಂಬಾ ಹೊತ್ತು ಮೇಷ್ಟ್ರು ರಾಮಯ್ಯನವರು ಮಾತನಾಡಿದರು. ಶಿವರಾಮ್‌ರವರಂತೂ ನೀನು ಏನಾದರೂ ಮೇಷ್ಟ್ರನ್ನು ವಾಪಸ್ ಕರೆದರೆ ನಿನ್ನ ಕಾಲು ಮುರಿಯುತ್ತೇನೆ ಎಂದು ಬೆದರಿಸಿದರು. ಮತ್ತೊಮ್ಮೆ ಮೇಷ್ಟ್ರನ್ನು ಕರೆತರುತ್ತೇನೆ ಎಂದು ಹೇಳಿದ ನಾನು ಮೇಷ್ಟ್ರನ್ನು ಕರೆದುಕೊಂಡು ಹೊರಟೆ.

ಪತ್ರ ಸಂಚಿ

ಕಿ.ರಂ. ರವರ ನೆರಳಿನಲ್ಲೆ ಬೆಳದ ನಾನು ಮೇಷ್ಟ್ರು ಹೆಚ್ಚು ಬರೆಯಲಿಲ್ಲವಲ್ಲ ಎಂದು ನೊಂದುಕೊಂಡದ್ದುಂಟು. ಮೇಷ್ಟ್ರನ್ನು ಕಳೆದುಕೊಂಡ ಮೇಲೆ ಅಷ್ಟೇ ಘನತರದ ವ್ಯಕ್ತಿತ್ವ ರಾಮಯ್ಯನವರಲ್ಲಾಯಿತು. ಸುಮಾರು ವರ್ಷಗಳ ಮೇಲೆ ರಾಮಯ್ಯನವರು ಕವಿತೆ ಬರೆಯಲು ಪ್ರಾರಂಭಿಸಿದ್ದು ನಮಗೆಲ್ಲಾ ಸಂತೋಷವನ್ನುಂಟು ಮಾಡಿತು. ಅದ್ಯಾವುದೋ ಅಮೃತಘಳಿಗೆಯಲ್ಲಿ ಮಾತು ಮೂರ್ತಗೊಂಡ ಲೇಖನವಾಗಿ ಮೂಡಿದವು. ರಾಮಯ್ಯ ಅವುಗಳನ್ನು ಓದಲು ಕೆಲವರಿಗೆ ನೀಡುತ್ತಿದ್ದರು ಮತ್ತು ತಾವೇ ಸ್ವತಃ ಓದುತ್ತಿದ್ದರು. ಇಂತಹ ಲೇಖನಗಳಿಗೆ ಒಂದು ವೇದಿಕೆ ಬೇಕಲ್ಲಾ ಎಂಬ ಕೊರಗು ನನ್ನಂಥ ಹಲವರಿಗೆ ಕಾಡುತಿತ್ತು. ಪುಣ್ಯಕ್ಕೆ ನಿಂತುಹೋಗಿದ್ದ ಪತ್ರಿಕೆಯ ಕನಸೊಂದು ಮೊಳಕೆಯಾಗಿ ಮೂಡತೊಡಗಿತು. ಅದಕ್ಕೆ ಎಸಳು, ಕುಡಿ ಮೂಡಿದಂತೆ ಆದಿಮ ಲಿವಿಂಗ್ ಟೈಮ್ಸ್ ಪ್ರಾರಂಭವಾಗಿದೆ. ರಾಮಯ್ಯನವರ ಅಮೂರ್ತ ಚಿಂತನೆಗಳು ಲಿವಿಂಗ್ ಟೈಮ್ಸ್‌ನಲ್ಲಿ ಮೂರ್ತ ಸ್ವರೂಪವನ್ನು ಪಡೆಯುತ್ತಿವೆ. ಈ ಪತ್ರಿಕೆಯು ನಾಡಿನ ಸಾಂಸ್ಕೃತಿಕ ದಾಖಲೆಯಾಗಿ ಪ್ರಸಾರಗೊಳ್ಳುತ್ತಿದೆ. ಮೊದಲ ಸಂಚಿಕೆಗಿಂತ ಎರಡನೇ ಸಂಚಿಕೆ ಮತ್ತಷ್ಟು ಮುದ ನೀಡುವಂತಿದೆ, ಮೂರನೇ ಸಂಚಿಕೆ ಗರಿ ಬಿಚ್ಚಿ ತನ್ನ ಹರಹನ್ನು ಮುಗಿಲಗಲ ವ್ಯಾಪಿಸಿಕೊಳ್ಳುತ್ತಿದೆ. ಇದನ್ನು ನೋಡುವ ಕಣ್ಣು ಮನಸ್ಸು ನಮ್ಮದಾಗಲಿ. ನಾವು ಕಂಡದ್ದನ್ನು ಇತರರಿಗೆ ಹೇಳೋಣ. ನಮ್ಮ ಒಂದು ಮಾತು/ಪತ್ರ ಪತ್ರಿಕೆಗೆ ಮತ್ತಷ್ಟು ಚೈತನ್ಯವನ್ನು ತುಂಬುತ್ತದೆ.

-ರುದ್ರೇಶ್ ಅದರಂಗಿ

ಚಂದಾ ವಿವರ:

ಬಿಡಿ ಪ್ರತಿ	: 10.00
ಚಂದಾ ದ್ವೈವಾರ್ಷಿಕ	: 250.00
ಪೋಷಕ ಸದಸ್ಯತ್ವ	: 1000.00
ದಾನಿ	: 5000.00
ಮಹಾದಾನಿ	: 10000.00

ಪ್ರತಿಗಳಿಗೆ ಮತ್ತು ವಿವರಗಳಿಗೆ ಸಂಪರ್ಕಿಸಿ :

9972193392, 8147898101, 9448886069

ಹುಣ್ಣಿಮೆ ಹಾಡು -66

ನೈಜೀರಿಯಾ ದೇಶದ ಓಲಾಮೊ ಬಂಡೆಗಳ ನೆನಪು

ಕರ್ನಾಟಕ ಜಿಲ್ಲೆಯ ಇತರೆ ಗುಡ್ಡಗಾಡು ಪ್ರದೇಶಗಳಂತೆಯೇ, ಕೋಲಾರದ ಪರ್ವತಗಳು, ವನ್ಯಜೀವಿಗಳು ಬಹಳ ವಿರಳವೆನ್ನುವಂತೆ ಬೆತ್ತಲಾಗಿ ಕಾಣಿಸುತ್ತಿದ್ದವು. ನಾಗರಿಕತೆ, ಆಧುನಿಕ ಕೃಷಿ ವಿಧಾನಗಳು ಎಲ್ಲೆಡೆ ವಿಸ್ತಾರಗೊಳ್ಳುವ ಬಹುಹಿಂದೆಯೇ ಕೋಲಾರದ ಬೆಟ್ಟಗಳ ಜನತೆ ಕಾಡು ಪ್ರಾಣಿಗಳೊಂದಿಗೆ ಪ್ರತಿದಿನ ಕಾದಾಡಬೇಕಿತ್ತು. ಚಿರತೆ, ತೋಳ, ಹುಲಿಯಂತಹ ಬೆಕ್ಕುಗಳು, ಕಾಳಿಂಗ ಸರ್ಪ, ದಂತಯುತ ಆನೆ, ಜಿಂಕೆ, ನಾನಾ ಬಗೆಯ ಪಕ್ಷಿಗಳು, ಹತ್ತು ಹಲವು ವನ್ಯ ಕೀಟಗಳು ಜನರಿಗೆ ಪ್ರತಿದಿನ ಕಾಣಸಿಗುತ್ತಿದ್ದವಂತೆ... ಇವೆಲ್ಲಾ ಅಂಕಿ ಅಂಶಗಳನ್ನು ಸ್ಥಳೀಯರನ್ನು ಕೇಳಿಯೇ ಬರೆಯುತ್ತಿದ್ದೇನೆ.

ಆಗ ತಾನೇ ಪರೀಕ್ಷೆಗಳ ಜಂಜಾಟದಿಂದ ಹೊರಬಂದು ಕೋಲಾರಕ್ಕೆ ಬಸ್ ಹತ್ತಿ ಕುಳಿತಾಗ, ಕೋಲಾರ-ಆದಿಮದ ಬಗೆಗೆ ಹಲವಾರು ಊಹೆ, ಆಲೋಚನೆಗಳು ಹೊಳೆಯತೊಡಗಿದ್ದವು. ಈ ಸ್ಥಳದ ಬಗೆಗೆ ಕೇಳಿದ್ದೆ, ವೆಬ್‌ಸೈಟ್‌ನಲ್ಲಿ ನೋಡಿದ್ದೆ. ನಮಗೆ ಅನುಭವವಾಗಲಿದ್ದು ಸಾಹಸಮಯ ಪಯಣ ಇದಾಗಿದ್ದಿತ್ತಲ್ಲದೆ, ತಿಂಗಳ ಪೂರ್ಣ ಚಂದ್ರನ ಬೆಳಕಿನಲ್ಲಿ ಒಂದೇ ರೀತಿ ಆಲೋಚಿಸುವ ಮನಸುಗಳು ಒಂದೆಡೆ ಸೇರಿ ಹಾಡಿ, ನರ್ತಸಿ, ಸಹಭೋಜನವನ್ನು ಸ್ವೀಕರಿಸುವ ಪದ್ಧತಿ ನನಗೆ ರೋಚಕ ಮತ್ತು ಕುತೂಹಲದ ವಿಷಯಗಳಾಗಿದ್ದವು. ಈ ಪೂರ್ಣಚಂದ್ರ, ಹುಣ್ಣಿಮೆ ಹಾಡು, ಪರಂಪರೆ-ದೇವರು ಹಾಗೂ ಆ ಸಮುದಾಯದ ನಡುವೆ ಇರಬಹುದಾದ ಅಸ್ಪಷ್ಟ ಕೊಂಡಿಗಳನ್ನು ಮನದಲ್ಲೇ ಲೆಕ್ಕಹಾಕುತ್ತಾ ಹಾಗೇ ನಿದ್ರೆಗೆ ಜಾರಿದ್ದೆ. ನನ್ನ ಮೂಲದ ಆಫ್ರಿಕಾದಲ್ಲೂ, ಕಥೆಗಳ, ಜಾನಪದೀಯ ಹಾಡು-ನೃತ್ಯ, ನಾಟಕಗಳ ಪ್ರದರ್ಶನವಿರುತ್ತದೆ. ಅವು ಸಾಮಾನ್ಯವಾಗಿ ರಂಗ ಪ್ರದರ್ಶನ ಮಾತ್ರವೇ ಆಗಿದ್ದು, ಅವುಗಳ ಕರ್ತೃ, ಸಂಗೀತಗಾರ ಅಥವಾ ಸಿನಿಮಾ ಉದ್ಯಮಿ. ಈ ಎಲ್ಲ ಪ್ರಕಾರಗಳನ್ನೂ ಪ್ರದರ್ಶಿಸುವ ಉದ್ದೇಶ ಹಣ ಸಂಪಾದಿಸುವುದೇ ಆಗಿರುತ್ತದೆ. ಕೆಲವೊಮ್ಮೆ ಬೆಟ್ಟ ಅಥವಾ ಪರ್ವತ ಪ್ರದೇಶಗಳಲ್ಲೂ ಕೆಲವೊಂದು ಆಚರಣೆಗಳಿರುತ್ತವೆ. ಆದರೆ ಇವು ಸಾರ್ವಜನಿಕರಿಗೆ ನಿಷಿದ್ಧ. ಸಂಜೆಯ ಸಮಯ ನಡೆಯುವ ಈ ಕಾರ್ಯಕ್ರಮಗಳು ದೇವರ-ಸಮುದಾಯದ ನಡುವಣ ಸಂವಹನಕ್ಕೆಂದು ಪ್ರತೀತಿ ಇದೆ. ಮಕ್ಕಳಿಗೆ, ಹೆಂಗಸರಿಗೆ (ಋತು ಚಕ್ರದ ಸಮಯದಲ್ಲಿ) ಇಲ್ಲಿ ಅವಕಾಶವಿಲ್ಲವೇ ಇಲ್ಲ. ಅಂಥ ಆಚರಣೆಗಳನ್ನು ನಡೆಸುವ ಸಮುದಾಯದ 'ವೀರ್ಯವಂತ' ಗಂಡಸರು ಮಾತ್ರ ಭಾಗವಹಿಸಬಹುದು. ಈ ಎಲ್ಲ ಆಲೋಚನೆಗಳು ನನ್ನಲ್ಲಿ ತಾಕಲಾಡುತ್ತಿರುವಾಗ ಸ್ನೇಹಿತ ಅಬ್ರಾಂ ಮತ್ತು ನಮ್ಮನ್ನು ಆಹ್ವಾನಿಸಿದ. ನಮ್ಮ ಕಾಲೇಜಿನ ಶಿಕ್ಷಕರಾದ ಶಾಂತರಾಜು ನಿದ್ದೆಯಿಂದೆಬ್ಬಿಸಿ ಬಸ್ ಇಳಿಯುವಂತೆ ಮಾಡಿದರು.


ನಾವು ಬಸ್ ಇಳಿಯುವ ಹೊತ್ತಿಗೆ ಬೆಟ್ಟಕ್ಕೆ ಹೊರಡುವ ಬಸ್ ಹೊರಟುಹೋಗಿದ್ದರಿಂದ ನಡೆದು ಸಾಗುವುದೇ ನಮಗುಳಿದ ಉಪಾಯವಾಗಿತ್ತು. ಬೆಟ್ಟಗಳ ಪ್ರಕೃತಿ ಸೌಂದರ್ಯವನ್ನು ಸವಿಯುತ್ತಾ, ನಮಗೆ ತೃಪ್ತಿಯಾಗುವಷ್ಟು ಕ್ಯಾಮರಾ ಕ್ಲಿಕ್ಕಿಸುತ್ತಾ ಆದಿಮಕ್ಕೆ ತಲುಪಲು ಒಂದೂವರೆ ತಾಸು ತೆಗೆದುಕೊಂಡೆವು. ನನ್ನ ಸುತ್ತಲಿನ ಪರಿಸರವನ್ನು ಬಹಳ ಸೂಕ್ಷ್ಮವಾಗಿ ಗಮನಿಸುತ್ತಾ ಸಾಗುತ್ತಿದ್ದ ನನಗೆ ಒಂದಕ್ಕೊಂದು ಸುಂದರವಾಗಿ ಅಂಟಿಕೊಂಡಿರುವ ಕಲ್ಲುಗಳು, ಗುಹೆಯಂತೆ ಭಾಸವಾಗುತ್ತಿದ್ದ ಬಂಡೆಗಳು, ಅಲ್ಲಲ್ಲಿದ್ದ ಸಣ್ಣ ಕೊಳಗಳು, ಕೌಶಲ್ಯಯುತವಾಗಿ ಕೊರೆದ ನೀರಿನ ಸೆಲೆಗಳು (ಕಲ್ಯಾಣಿ), ಎಲ್ಲಿಂದೆಲ್ಲಿಗೂ ಕಣ್ಣಿಗೆ ಮುದನೀಡುವ ಕುರುಚಲು ಗಿಡಗಳು, ಪುರಾತನ ದೇವಾಲಯದ ಗುರುತುಗಳು, ಭೂಮಟ್ಟಕ್ಕಿಂತ ಸಾವಿರಾರು ಅಡಿ ಎತ್ತರದಲ್ಲಿರುವ ಹಳ್ಳಿಗಳು... ಎಲ್ಲವೂ ನನಗೆ ನೈಜೀರಿಯಾದ ಓಲಾಮೊ ಬಂಡೆಗಳನ್ನು ನೆನಪಿಸುತ್ತಿದ್ದವು.

ನಾವು ಸೇರುವ ಹೊತ್ತಿಗೆ ಪೂರ್ತಿ ಬೆಳದಿಂಗಳು ಹಬ್ಬಿತ್ತು. ಇದು ಪಶ್ಚಿಮ ಆಫ್ರಿಕಾವನ್ನು ನನ್ನ ಕಣ್ಮುಂದೆ ತಂದಿತು. ಆ ಸಂಜೆಯಲ್ಲಿ ನಮಗೆ ಮುಖ ತೊಳೆದು ವಿರಮಿಸುವಷ್ಟು ಸಮಯವಿರಲಿಲ್ಲ. ಕಾರ್ಯಕ್ರಮ ಇನ್ನೇನು ಆರಂಭವಾಗುವುದರಲ್ಲಿತ್ತು. ಕಲೆಯನ್ನು ಪ್ರೀತಿಸುವ ಜನರೆಲ್ಲಾ ತಿಂಗಳಿಗೊಮ್ಮೆ ಅಲ್ಲಿ ಸೇರಿದಂತಿತ್ತು. ಯುವಕರು, ವಿದ್ಯಾರ್ಥಿಗಳು, ಶಿಕ್ಷಕರು, ವೃತ್ತಿಪರರು, ಮುಖಂಡರು, ಶ್ರಮಿಕ ವರ್ಗದವರು ಎಲ್ಲ ರೀತಿಯ ವೀಕ್ಷಕರೂ ಅಲ್ಲಿ ನೆರೆದಿದ್ದರು. ಸಂಘಟಕರು ಉತ್ಸಾಹದಿಂದ ಅತ್ತಿಂದಿತ್ತ ಓಡಾಡುತಿದ್ದರು. 'ನಾನು' ಎನ್ನುವುದನ್ನು ಮರೆತು 'ನಾವು' ಎಂದುಕೊಂಡು ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸುತಿದ್ದರು. ಪ್ರೇಕ್ಷಕರಿಗೆ ಒಂದು ಪೈಸೆಯ ಟಿಕೇಟ್‌ನ್ನೂ ನಿಗದಿಸಿರಲಿಲ್ಲ ಎಂಬ ಸತ್ಯವನ್ನು ಅರಗಿಸಿಕೊಳ್ಳಲು ನನಗೆ ಕೆಲ ಸಮಯ ಹಿಡಿಯಿತು. ಆದರೆ ಅವರಲ್ಲಿ ಅನೇಕರು 'ಉಡುಗೊರೆ'ಯ ನೆಪದಲ್ಲಿ ಹಲವು ರೀತಿಯ ವಸ್ತುಗಳನ್ನು ತಂದಿದ್ದರು. ಕೆಲವೊಮ್ಮೆ ಹಣ, ಕೆಲವೊಮ್ಮೆ ಹಣಕ್ಕೂ ಮೀರಿದ ಪ್ರೀತಿಯ ಕಾಣಿಕೆಯೇ ಆದಿಮಕ್ಕೆ ಹರಿದು ಬರುತ್ತಿತ್ತು. ನನ್ನಿಂದ ಯಾವ ರೀತಿಯ ಸಹಾಯ ಮಾಡಬೇಕೆಂದು ತಿಳಿಯದೆ ಸುಮ್ಮನಾಗಿಬಿಟ್ಟೆ.

ರಂಗವೇದಿಕೆ ಬೆಳಕು ಮತ್ತು ಶಬ್ದದಿಂದ ಅಲಂಕೃತವಾಗಿತ್ತು. ಕಲಾವಿದರು ಒಬ್ಬರ ನಂತರ ಒಬ್ಬೊಬ್ಬರಾಗಿ ತಮ್ಮ ಕಲೆಯನ್ನು ಪ್ರದರ್ಶಿಸತೊಡಗಿದರು. ಮೊದಲಿಗೆ ಸಂಗೀತ ನಂತರ ಡೊಳ್ಳು, ಆಮೇಲೆ ನಾಟಕ. ಡೊಳ್ಳಿನ ವೇಷ ನನ್ನನ್ನು ಆಕರ್ಷಿಸಿತು. ಮರದಿಂದ ತಯಾರಾದ ವಾದ್ಯ, ಹುಲ್ಲಿನಂತಹ ಕಂಬಳಿ, ಹೂವಿನಿಂದ ಸಿಂಗರಿಸಿಕೊಂಡ ಕಲಾವಿದರು ನರ್ತಿಸುತ್ತಿದ್ದರೆ ನನಗೆ ಇನ್ನೊಂದು ಲೋಕದಂತೆ ಭಾಸವಾಗುತ್ತಿತ್ತು. ಹಾಸ್ಯಭರಿತ ನಾಟಕಕ್ಕೆ ಮಕ್ಕಳು, ಹೆಣ್ಣು ಗಂಡೆನ್ನದೆ ಸುಮಾರು 500ಕ್ಕೂ ಹೆಚ್ಚು ಪ್ರೇಕ್ಷಕರು ಸಾಕ್ಷಿಯಾಗಿದ್ದರು. ನನ್ನನ್ನು ಗಾಢವಾಗಿ ಸೆಳೆದ ಇನ್ನೊಂದು ಅಂಶವೆಂದರೆ ಕಾರ್ಯಕ್ರಮದ ನಂತರದ ಸಹಭೋಜನ. ಪ್ರೇಕ್ಷಕರೆಲ್ಲರೂ ಒಟ್ಟಿಗೆ ಕರಿದ ಅನ್ನ, ನೀರು, ಟೀಯನ್ನು ಸಾಂಘಿಕವಾಗಿ ಸವಿಯುತ್ತಿದ್ದದ್ದು. ಇದು ನಮ್ಮ ದೇಶದ ಯಾವುದೇ ಕಾರ್ಯಕ್ರಮಗಳಲ್ಲೂ ನಡೆದದ್ದನ್ನ ನಾನು ಕಂಡಿಲ್ಲ.

ಮರುದಿನ 'ಅಪರೂಪ'ದ ಅತಿಥಿಗಳಾದ ನಮಗೆ, ಕಾರ್ಯಕ್ರಮದ ಸಂಘಟಕರಲ್ಲೊಬ್ಬರಾದ ಮುನಿರೆಡ್ಡಿಯವರು ಮತ್ತು ಗೆಳೆಯರು ಹಲವಾರು ಜಾನಪದ ಹಾಡು, ನೃತ್ಯಗಳನ್ನು ನಮಗಾಗೇ ಪ್ರದರ್ಶಿಸಿದರು. ಅವರ ಆತ್ಮಿಯತೆ ನಮ್ಮನ್ನು ಮೂಕರನ್ನಾಗಿಸಿತು. ಅವರ ಪ್ರೀತಿಗೆ ನಮ್ಮ ಅಭಿನಂದನೆಗಳು. ಕೆಲವರು ನಮ್ಮಿಂದ ಸಹಿಯನ್ನೂ ಕೂಡ ತೆಗೆದುಕೊಂಡರು.

ಹೊರಡಲು ಸಿದ್ಧವಾಗುತ್ತಿದ್ದ ನನಗೆ, ದಿಢೀರನೆ ಇನ್ನೂ ಇಲ್ಲೇ ಇರಬೇಕೆನಿಸತೊಡಗಿತ್ತು. ಇದ್ದು ಮತ್ತಷ್ಟು ಖುಷಿಯನ್ನು ತುಂಬಿಕೊಂಡು ಹೋಗಬೇಕೆನಿಸಿತು. ಕೆಲವು ತೊಡಕುಗಳ ನಡುವೆಯೂ ನನಗೊಂದು ಹೊಸ ಮನೆ ದೊರೆತಂತೆ ಅನ್ನಿಸಿತು. ಬೆಟ್ಟದ ಮೇಲೆ. ಕೋಲಾರ ಜಿಲ್ಲೆಯಲ್ಲಿ.




-ವಿಲಿಯಮ್ಸ್. ಪಿ.ಸಿ. ವಾಡಿ
ಆಫ್ರಿಕಾದ ವಿದ್ಯಾರ್ಥಿ/ಪ್ರವಾಸಿಗ
ಅನುವಾದ: ಶಾಂತರಾಜು ಎಸ್.ಮಳವಳ್ಳಿ

ಟಾಗೂರ್ ಭಜನೆಯೂ... ನವೋದಯ ಕಾಲವೂ... ಹಿಸ್ಟರಿಯ ಫೇಡ್‌ಔಟೂ...! ಫೇಡ್ ಇನ್ನೂ...

ನೆಲ ಸಂಸ್ಕೃತಿಯ ನಡೆ.....

ಸಂಪಾದಕೀಯ ಟಿಪ್ಪಣಿಗಳು

'ಹಿಸ್ಟರಿ ಈಸ್ ಮೇಡ್ ಫಾರ್ ದಿ ಕನ್ವೀನಿಯನ್ಸ್ ಆಫ್ ಫೇಡ್ ಔಟ್ ಅಂಡ್ ಫೇಡ್ ಇನ್ಸ್'... ಸದ್ಯಕ್ಕೆ ಇದು ಯಾರು ಬೇಕಾದರೂ ಹೇಳಬಹುದಾದ ಕೊಟೇಶನ್. ಫೇಡ್ ಔಟ್ ಅಂಡ್ ಫೇಡ್ ಇನ್ ಸಿನಿಮಾದ ಪರಿಭಾಷೆ; ಕ್ಯಾಮರಾ ಕಣ್ಣಿಗೆ ಸಂಬಂಧಿಸಿದ್ದು. ಈ ಫೇಡ್ ಔಟ್ ಅಂಡ್ ಇನ್‌ಗಳ ರೀತಿ ಚಿತ್ರೀಕರಿಸಿರುವ ದೃಶ್ಯಾಂತ್ಯಗಳ ಸೊಗಸನ್ನು ನೋಡಿಯೇ ಅನುಭವಿಸಬೇಕು. ಇದುವರೆಗಿನ ನಮ್ಮ ಚರಿತ್ರೆ, ಸಾಂಸ್ಕೃತಿಕ ಚರಿತ್ರೆಗಳು ಇಂಥ ಸೊಗಸಿಗಾಗಿಯೇ ದಾಖಲುಗೊಂಡಿರುವಂತಿವೆ. ಈ ಫೇಡ್ ಇನ್ 'ಎನ್' ಔಟ್‌ಗಳು ಯಾಕಿಷ್ಟು ಸೊಗಸಾಗಿರುತ್ತವೆ ಎಂದರೆ, ಅವುಗಳಿಗಿರುವ ಗೋಚರದ ಪದರ ಪದರವನ್ನೂ ಮಾಸಿ ಮರುಳುಗೊಳಿಸುತ್ತ ಆ ದೃಶ್ಯದ ಪರಿಣಾಮ ಥಟ್ಟನೆ ಅನುಭವವೇಧ್ಯವಾಗುವಂತೆ ನಯಗೊಳಿಸುತ್ತವಾದ್ದರಿಂದ. ಫೇಡ್ ಔಟ್ ಮಾಸುತ್ತಾ ಮುಚ್ಚಿದರೆ ಫೇಡ್ ಇನ್‌ಗಳು ಪದರು ಪದರೂ ಬಿಡಿಸಿ ಗೋಚರಗೊಳಿಸುತ್ತಾ ಹೋಗುತ್ತವೆ. ಇದುವರೆಗಿನ ಚರಿತ್ರೆಯ ಪಲ್ಲಟ ಘಟ್ಟಗಳಾದ 'ನವೋದಯ' 'ಪುರುಜ್ಜೀವನ' ಇತ್ಯಾದಿಗಳನ್ನು ಈ ಹಿನ್ನೆಲೆಯಲ್ಲೇ ನೋಡುವುದು ಚೆನ್ನ. ಯೂರೋಪಿನಲ್ಲಿ 'ಕಾನ್‌ಸ್ಟಾಂಟಿನೋಪಲ್' ಪಥನ ಇಂಥದ್ದೊಂದು ನವೋದಯಕ್ಕೆ ತೊಟ್ಟಿಲು. ಭಾರತದ ಸಂದರ್ಭದಲ್ಲಿ ಇದು 'ಬಂಗಾಳದ ನವಜೀವನ'.



ಯೂರೋಪಿನ ನವಜೀವನಕ್ಕೆ ಕಾನ್‌ಸ್ಟಾಂಟಿನೋಪಲ್ 'ಹೆದ್ದಾರಿ' ಮುಚ್ಚಿಕೊಂಡಿದ್ದು ಕಾರಣ ಎನ್ನುವುದನ್ನು ಸಕಾರಣವೇ ಎಂದು ಭಾವಿಸೋಣ. ಆದರೆ 'ಬಂಗಾಳದ ನವಜೀವನ' ಯಾವ ಹೆದ್ದಾರಿ ಮುಚ್ಚಿದ್ದರ ಕಾರಣವೋ ಬಲ್ಲವರು ಹೇಳಬೇಕು? ನನಗೆ ಈ 'ಬಿಳಿ'ಯ ಮನಸ್ಸು ಲೋಕದ ಎದುರು ಮಂಡಿಸಿರುವ ಚರಿತ್ರೆಯ ಕ್ರಮ ಫೇಡ್ ಔಟ್ ಫೇಡ್ ಇನ್‌ಗಳ ಮಾಯಾಸೃಷ್ಟಿ ಯಾ ಮಾಯಾಸೃಷ್ಟಿ ಕೌತುಕದಂತೆ ಕಾಣುತ್ತದೆ.

ಈ ಹೊತ್ತು ನಡೆಯುತ್ತಿರುವ ಮಹರ್ಷಿ ಟಾಗೂರ್ ಭಜನೆಯನ್ನು ಈ ಹಿನ್ನೆಲೆಯಲ್ಲಿ ನೋಡಿದರೆ ಬಂಗಾಳದ ಪುನರುಜ್ಜೀವನವೆಂದರೆ, ಇಂಗ್ಲೆಂಡಿನ ಅರಿಸ್ಟೋಕ್ರಸಿಗೆ ದೇಸಿ ಹೆಸರಿನ ನಕಲಿ ಲೇಪ ಎಂಬುದು ಅರ್ಥವಾಗಬಹುದು. ಈ ಬಂಗಾಳ ಭಜನೆಗಳು ಹೇಗೆ ಕಲೋನಿಯಲ್ ಕೆಫೇಡಿ ಪ್ಯಾರಡೈಸ್‌ಗಳ 'ಐಟಂ' ಸಾಂಗ್‌ಗಳೆಂಬುದು ತಮಗೆ ತಿಳಿದೇ ಇದೆ. ನನಗೆ 'ಬಂಗಾಳ'ದ ಬೆಂಚ್‌ಮಾರ್ಕ್ ಮಾದರಿ 'ನವಜೀವನ' ಭಾರತದ ನಿಜಜೀವನ ಅಲ್ಲ. ಆ ಮಾದರಿಗೆ ಬಲಿಬಿದ್ದೇ ನಾವು ಕಾದಂಬರಿಗೆ ಬಂಕಿಮಚಂದ್ರ, ಸಂವೇದನೆಗೆ ಟಾಗೂರೋ ಮಾದರಿಗಳ ಮಿತಿಗೆ ಬಿದ್ದು ನಮ್ಮ ನೆಲದ ಅಗಣಿತ ಒರತೆಗಳನ್ನು ಬತ್ತಿಸಿಕೊಂಡು ಇತಿಹಾಸ ದಾಖಲಿನ ಫೇಡ್ ಔಟ್‌ಗೆ ಮರುಳಾಗಿರುವುದು ಎನ್ನುವುದು ನನ್ನ ಗ್ರಹಿಕೆ. ಚರಿತ್ರೆ ಎಂದರೆ ಈ ಹೊತ್ತಿನದು, ಈ ಗಳಿಗೆಯ ತುರ್ತಿನದು. ದೇಸಿ ಅರಿಸ್ಟೋಕ್ರಸಿಯ ಬಸಂತೋ ಧಾನ್ಯದಲ್ಲೂ ಅರಳಿದ ಅಪ್ಪಟ ನೆಲದ ಹೂಗಳು ಪರಮಹಂಸ, ವಿವೇಕಾನಂದ. ಅವರಿಗೂ ಮಠದ ಗೋರಿಗಳನ್ನು ಕಟ್ಟಿ ಭಜನಾಮಂದಿರಗಳನ್ನಾಗಿಸಿರುವ ದುರಂತ ಇಂದು ನಮ್ಮ ಕಣ್ಣೆದುರೇ ಇದೆ. ಇಂತಿಪ್ಪ ಬಂಗಾಳದ ಇನ್ನೂ ಇರುವ ಇತರೆ ಹೂಗಳಾದ ಅರಬಿಂದೋ, ರಾಜಾರಾಮ್ ಮೋಹನ್ ರಾಯ್, ಎಂ.ಎನ್.ರಾಯ್, ಚಟ್ಟೋಪಾಧ್ಯಾಯ... ಹೀಗೆ ಲೆಕ್ಕವಿಲ್ಲದಷ್ಟು ಹೂಗಳಿದ್ದರೂ ಐ.ಎಸ್.ಐ ಸೀಲು ಒತ್ತಿ ಟಾಗೂರ ಭಜನೆಯನ್ನು ಮಾತ್ರ ಮಾರುಕಟ್ಟೆಗೆ ಬಿಡುವುದರಲ್ಲಿ ಏನೋ ಒಂದು ಗಮ್ಮತ್ತಿರಬೇಕು.

ಸುತ್ತಲ ವಾತಾವರಣ ಇಂತಹ ಭಜನೆಗಳಿಂದ ತುಂಬಿರುವಾಗ ಕಲಾ ಸಂಸ್ಥೆಯ ಕೇಡರ್ಸ್ ಆಗಿರುವ ನಾವು ನೆನೆಯದಿರಲಾದೀತೆ. ಅದಕ್ಕೆ ಕ್ಷಮೆ ಕೋರಿ ಈ ಮಾತು. ಹಾಗೂ ಇಂತಹ 'ಶತಾಬ್ದಿಗಳು ಸಾಂಸ್ಕೃತಿಕ ರಾಜಕಾರಣ' ಕೋಟ್ಯಂತರ ರೂಪಾಯಿಗಳ ಬಡವರ ತೆರಿಗೆಯ ಹಣ ಬೇಡುವಂಥದ್ದು. ಟಾಗೂರಾಯಿತು. ಈಗ ಸ್ವಾಮಿ ವಿವೇಕಾನಂದರಿಗೂ ನೂರು ಕೋಟಿ ಮೀಸಲಂತೆ!

ನಾನು ಟಾಗೂರರನ್ನು ಒಳಗೆ ಇಳಿಸಿಕೊಂಡಿರುವುದು ಹೀಗೆ. ಹೀಗಾಗಿ ರಾಷ್ಟ್ರೀಯತೆಯ ಹಿನ್ನೆಲೆಯಲ್ಲಿ ಇವರು ಕಟ್ಟಿಕೊಡುವ ವಿಶ್ವಾತ್ಮಕತೆಯ ಪ್ರತೀಕವಾದ

'ಗೀತಾಂಜಲಿ' ಬೇಂದ್ರೆ ಓದಿದವರಿಗೆ ಯಾವ ಮಟ್ಟದ ಕಲೋನ್ನತಿ ಸಾಧಿಸಿದ ಕೃತಿ ಎಂಬ ಅರಿವಿದ್ದೇ ಇದೆ. ಇದು ತೌಲನಿಕ ತೂಕದ ಮಾತಿಗಿಂತ 'ಸತ್ವ'ವನ್ನು ಕುರಿತ ಮಾತು. ಈ ತೂಕವನ್ನು ಒಪ್ಪಿ ನೋಡಿದರೂ ಅವರ ಕಲಾತ್ಮಕ ಕೊಡುಗೆಗಳನ್ನು ಯಾರೂ ಕೂಡ ಕಡಿಮೆಯದು ಎಂದು ಎಣಿಸಲಾರರು. ಆದರೆ ಅವರು ಆ ಹೊತ್ತು ತಳೆದ ರಾಜಕೀಯ ಧೋರಣೆ ಅದನ್ನಂತೂ ಪ್ರತಿ ಕಾಲಘಟ್ಟದಲ್ಲೂ ಪ್ರಶ್ನಿಸುವ ಅಗತ್ಯವಿದೆ. ಹೀಗೆ ಠಾಗೂರರ ಬಗ್ಗೆ ನನಗೆ ಹಲವು ಪ್ರಶ್ನೆಗಳಿವೆ.

ಮೊಲದನೆಯದಾಗಿ ಅವರ ಶಾಂತಿನಿಕೇತನ ಯಾವ ಮಾದರಿಯ ಕಲಾಶಾಲೆ? ಅದಕ್ಕೂ ಸುತ್ತಲ ಬದುಕಿಗೂ ಇದ್ದ ಸಂಬಂಧದ ಸ್ವರೂಪ ಎಂಥದ್ದು? ಪಕ್ಕವೇ ಇದ್ದು ಮುದುವಯಸ್ಸಿನ ಠಾಗೂರರ ಕಾವ್ಯಚೇತನವನ್ನು ತಮ್ಮ ತುಂಬು ಯೌವ್ವನ ಮತ್ತು ಮಾದಕತೆಯಿಂದ ಬೆಚ್ಚಗಿರಿಸಿದ ಸಂತಾಲ್ ಹೆಣ್ಣುಮಕ್ಕಳ ಸೃಜನಶೀಲತೆ ದಿನಗೂಲಿ ಲೆಕ್ಕದಲ್ಲಿ ಬೆತ್ತಲೆ ರೂಪದರ್ಶಿಯರಾಗುವ ಮಟ್ಟದಲ್ಲೇ ನಿಂತುಬಿಟ್ಟಿದ್ದು ಯಾಕೆ? ಭೂಪಾಲ್ ರಂಗಮಂಡಲದಲ್ಲಿ ಸ್ವಾಮಿನಾಥನ್ ಇಂತಹ ಆದಿವಾಸಿ ಮಕ್ಕಳ ಸಗಣಿ ಸಾರಿಸುವ ವಿನ್ಯಾಸಗಳನ್ನೇ ಕಲಾತ್ಮಕತೆಯಾಗಿಸಿ ಸೃಷ್ಟಿಸಿದ ನೂತನ ಮಾರುಕಟ್ಟೆ ಸಾಧ್ಯತೆಯೊಂದು ಶಾಂತಿನಿಕೇತನದಲ್ಲಿ ಯಾಕೆ ಸಾಧ್ಯವಾಗದೆ ಹೋಯಿತು? ಇದಕ್ಕೂ ಠಾಗೂರರಲ್ಲಿದ್ದ ಜಮೀನುದಾರಿ ಮೌಲ್ಯಗಳಿಗೆ ಇದು ಮುಖ್ಯವೆಂಬುದು ಮನವರಿಕೆಯಾಗದೆ ಹೋಗಿರಬಹುದೇ? ಇಂತಹ ಮನೋಧರ್ಮಕ್ಕೆ 'ಸಾಮ್ರಾಜ್ಯಶಾಹಿ' ಯಾವತ್ತೂ ಎದುರಿಸಲೇಬೇಕಾದ ಕೇಡಿನದೆಂಬುದು ಮನವರಿಕೆಯಾಗದೆ ಹೋಯಿತೇ? ದೇಸೀ ಮಾದರಿ ಸಾಂಸ್ಕೃತಿಕ ನವಾಬಗಿರಿಗೂ ಸಾಮ್ರಾಜ್ಯಶಾಹಿಗೂ ಅನ್ಯೋನ್ಯತೆ ಬೆಳೆಯಲು ಏನು ಕಾರಣಗಳಿರಬಹುದು? ಇಂತಹ ಅಪವಿತ್ರ ಮೈತ್ರಿಯೇ 'ಬಿಳಿ ಸಾಮ್ರಾಟ'ನ ಸ್ವಾಗತಗೀತೆ 'ಜನಗಣಮನ' ಹಾಡುವುದಕ್ಕೆ ಕಾರಣವಾಗಿರಬಹುದೇ? ಇಂತಹ ಬೌದ್ಧಿಕತೆಯ ಮಾದರಿಯೇ ಬಂಗಾಳದ ನವಜೀವನದ ಜೀವಾಳವಾಗಿತ್ತೆ? ಹಾಗಿದ್ದ ಮೇಲೆ ಈ ಮಿತಿಯ ಮಾದರಿ ಬಂಗಾಳ ನವಜೀವನ ಭಾರತದ ನಿಜಜೀವನ ಆಗುವುದಾದರೂ ಹೇಗೆ? ಹೀಗೆ ಪ್ರಶ್ನೆಗಳು ಹುಟ್ಟುತ್ತಲೆ ಇರುತ್ತವೆ. ಹೀಗೆ ಅವರವರನ್ನ ಆಯಾ ಸಾಮಾಜಿಕ ಚೌಕಟ್ಟುಗಳ ಆರ್ಥಿಕ ಅಂತಸ್ತುಗಳಿಗೆ ಬಗ್ಗಿಸುತ್ತಾ ಬಂದಿರುವ ಚರಿತ್ರೆ ಫೇಡ್ ಇನ್ ಫೇಡ್ ಔಟ್ ಪದರುಗಳು ಅಂತರ್ಗತ ಜನದ್ರೋಹವನ್ನು ಪಶ್ಚಾತ್ತಾಪದ ಮೂಸೆಲೆಯಲ್ಲಿ ಕರಗಿಸಿಕೊಳ್ಳಲಾರದ ಅಪರಾಧಿಪ್ರಜ್ಞೆಯ ವಿಸ್ತರಣೆಗಳೇ? ಅಥವಾ ಕ್ರಿಸ್ತನನ್ನು ಶಿಲುಬೆಗೇರಿಸಿ ಕಟ್ಟಿಕೊಂಡ ಧರ್ಮ ಆಕ್ರಮಣಶೀಲ, ಯುದ್ಧ, ದರೋಡೆಗಳಿಂದ ದೋಚಿ ತಂದ ಸಂಪತ್ತಿನ ಚಿಗುರು ಜ್ಞಾನಶಿಸ್ತುಗಳ ನಕಲಿ ವಿಜೃಂಬಣೆಯೇ? ಘಾತುಕತನವೇ ಆತ್ಮವಾದ ಈ ಸಾಮ್ರಾಜ್ಯಶಾಹಿಯ ಪಾಲುದಾರಿಕೆಯನ್ನು ಈ ಹೊತ್ತು ಕೂಡ ಪ್ರಶ್ನಿಸದೆ ಇರಬೇಕೇ? ಅಥವಾ... ಠಾಗೂರರೆಂದರೆ ಇಷ್ಟೊಂದು ಉತ್ತರ ಕಾಣದ ಪ್ರಶ್ನೆಗಳು...



ಇರಲಿ ನಾನೇನೂ ಠಾಗೂರರನ್ನು ಸಮಗ್ರವಾಗಿ ಓದಿಕೊಂಡವನಲ್ಲ. ಠಾಗೂರರೆಂದರೆ ನನಗೆ ದಕ್ಕಿರುವುದು ಇಷ್ಟೆ. ಇನ್ನು ಅವರ ಸಂಗೀತವೆಂದರೆ ನಾನು ಕೇಳಿರುವ ಬೌಲ್, ಸೂಫಿ, ಅಲೆಮಾರಿ ಗಾಯಕ ಪರಂಪರೆಗಳ ಫೇಡ್‌ಔಟ್‌ಗೂ ರವೀಂದ್ರ ಸಂಗೀತದ ಫೇಡ್ ಇನ್ ಸೌಭಾಗ್ಯಕ್ಕೂ ಅವಿನಾಭಾವ ಸಂಬಂಧವಿದೆಯೆಂದೆ ನಂಬಿರುವವನು. ವಾತಾವರಣದಲ್ಲಿ ಠಾಗೂರ್ ಭಜನೆ ಇದೆ. ಭಜನೆಗೆ ತಕ್ಕಷ್ಟು ಬಜೆಟ್ ಇದೆ. ಅದು ಕೋಟಿಗಳಿಗೂ ಮೀರಿ. ಅದರ ಒಡೆತನ ಹೊಂದಿರುವ ಜ್ಞಾನಪೀಠ ಮಟ್ಟದ ಸಾಹಿತಿಯೊಬ್ಬರು ಶಿವಪ್ರಕಾಶರು ಎಸೆದ ಕೆಂಡದುಂಡೆಗಳಂತಹ ಮಾತುಗಳಿಗೆ ಅವರ ಕೈಯಲ್ಲೇ ನೀರುಯ್ಯಿಸಿ ಆರಿಸಿದ ಫೇಡ್‌ಔಟ್ ಸಮಕಾಲೀನ ಸಂದರ್ಭವಂತೂ ಡೀಪ್ ಫೋಕಸ್ಸಾಗಿ ಕಣ್ಣಲ್ಲಿದೆ.

ಇಷ್ಟಾಗಿಯೂ ಠಾಗೂರರು ವಿಶ್ವಮಾನ್ಯರೇ ಸರಿ. ಆ ಬಗ್ಗೆ ತಕರಾರಿಲ್ಲ. ಆದರೆ ಅವರು ವಿಶ್ವಮಾನವರಾಗಲು ಪೂರಕವಾದ ಸಾಂಸ್ಕೃತಿಕ ರಾಜಕಾರಣವನ್ನ ವಿಮರ್ಶಿಸಲು ಅವರ ನಿತ್ಯವಂದಿತ ರಾಷ್ಟ್ರಗೀತೆಯ ಹಿನ್ನೆಲೆಯೊಂದೇ ಸಾಲದೇ?

ನನಗಂತೂ ಜಮೀನುದಾರಿ ವರ್ಗಗಳ ಫ್ಯೂಡಲ್ ಮನೋಭಾವದಲ್ಲಿ ಎದ್ದುಕಾಣುವ ಕೊರತೆ ಅದರ ಮೃತ ಆತ್ಮ ಸಾಕ್ಷಿ ಎಂಬುದು ಮನವರಿಕೆಯಾಗಿದೆ. ಈ ಆತ್ಮಸಾಕ್ಷಿಹೀನತೆಯನ್ನು ಭಜನೆಗಳಿಂದ ತುಂಬಿಕೊಳ್ಳುವುದು ಕಷ್ಟ. ದೇವರೇ ಈ ಹೆಚ್.ಆರ್.ಡಿ ಸಂಪನ್ಮೂಲ ಪ್ರಣೀತ ಭಜನೆಗಳನ್ನು ಪ್ರಶ್ನಿಸುವವರೇ ಇಲ್ಲವೇ?

ಇಂತಹ ಭಜನೆಗಳಿಂದ ಆಗದಿರುವುದನ್ನು ಸಿನಿಮಾ ನಿರ್ದೇಶಕರನೇಕರು ಠಾಗೂರರನ್ನು, ಬಂಗಾಳವನ್ನು ಬಂಗಾಳೇತರ ಭಾರತೀಯರ ಮನಸ್ಸಿಗೆ ತಲುಪುವಂತೆ ಕಟ್ಟಿಕೊಟ್ಟಿದ್ದಾರೆ. ಇಂಥದ್ದೊಂದು 'ಘರೇ ಬಾಹಿರೇ'. ಸತ್ಯಜಿತ್ ರೇ ಮಾಡಿರುವ ಸಿನಿಮಾ.

ಈ ಚಿತ್ರದಲ್ಲಿ ಎರಡು ವಿರುದ್ಧ ಪ್ರಕೃತಿ ಪಾತ್ರಗಳು ಬರುತ್ತವೆ. ಒಬ್ಬ ಅರಿಸ್ಟೋಕ್ರಸಿಯ ತೊಟ್ಟಿಲಾದ ಫ್ಯೂಡಲ್ ಜಮೀನ್ದಾರ. ಉನ್ನತ ಶಿಕ್ಷಣಕ್ಕೊಂದು ಮಾದರಿ ಎನ್ನುವ ಸಂಭಾವಿತ. ಉದಾರಿ ಹೃದಯವಂತ ಒಂದು ರೀತಿ ಠಾಗೂರರ 'ಮಹರ್ಷಿತನ'ವಿಲ್ಲದ ಪರ್‌ಫೆಕ್ಟ್ ಜಂಟ್ಲಮನ್ ಟೈಪಿನವನು.

ಮುಂದಿನ ಪುಟಕ್ಕೆ

...ಹಿಂದಿನ ಪುಟದಿಂದ

ಇನ್ನೊಬ್ಬ ಬಂಡಾಯಗಾರ. ನೈತಿಕತೆಯನ್ನು ಮಧ್ಯಮವರ್ಗದ ಮೌಲ್ಯವೆಂದು ಬಗೆದು ಭಗ್ನಗೊಳಿಸುವುದಕ್ಕೆ ಸದಾ ಸಿದ್ಧ ಧಗಧಗಿಸುವ ಬಂಡಾಯದ ಬ್ರ್ಯಾಂಡ್. ಇಬ್ಬರೂ ಸಹಪಾಠಿಗಳು ಸ್ನೇಹಿತರು.

ಬಂಡಾಯಗಾರ ಪ್ರಭುತ್ವದ ವಿರುದ್ಧ, ಅದರ ಪ್ರತಿನಿಧಿಯಾದ ಜಮೀನುದಾರನ ವರ್ಗ ಹಿತಾಸಕ್ತಿಗಳ ವಿರುದ್ಧ ರೈತರನ್ನು ಎತ್ತಿಕಟ್ಟುವ ಕೆಲಸವನ್ನೆ ಕ್ರಾಂತಿ ಎಂದು ನಂಬಿದವನು. ಅದರ ಸಿದ್ಧತೆಗಾಗಿ ಈ ಜಮೀನುದಾರನ ಬುಡಕ್ಕೆ ಬರುತ್ತಾನೆ. ಈ ಅರಿಸ್ಟೋಕ್ರಸಿ ಎಂತಹ ಸಂಭಾವಿತ ಸೋಗಿನ ಮೋಡಿಗೆ ಸಿಕ್ಕಿಸುತ್ತದೆ ಎನ್ನುವುದಕ್ಕೆ ಈ ಜಮೀನುದಾರನ ಉದಾರತೆಯೇ ಸಾಕ್ಷಿ. ತನ್ನ ಗೆಳೆಯ ಕ್ರಾಂತಿಯ ಬಿರುಗಾಳಿಗೆ ಸಿಕ್ಕಿ ಬಸವಳಿದು ಸುಖಭೋಜನವನ್ನೂ ಕಂಡವನಲ್ಲವೆಂದು ಭಾವಿಸಿ ಅವನನ್ನು ಅತಿಥಿಯಾಗಿ ಆಹ್ವಾನಿಸುತ್ತಾನೆ. ಬಂದವನನ್ನು ಆ ಕಾಲಕ್ಕೆ ಅದೃಷ್ಟವಂತ ಕುಲೀನರು, ಜಮೀನುದಾರರು ಐರೋಪ್ಯರಿಂದ ಕಲಿತ ನಡಾವಳಿಗಳಂತೆ ಮನೆಯ ಪಕ್ಕವೇ ಇರುವ ಅತಿಥಿಗೃಹದಲ್ಲಿ ತಂಗುವಂತೆ ಮಾಡುತ್ತಾನೆ. ಆ ಮೂಲಕ ಅವನಿಗೂ ಕೊಂಚ ಜಮೀನುದಾರಿ ಕೆನೆಮೊಸರಿನ ಕವಳದ ರುಚಿ ಸಿಕ್ಕಲಿ ಎಂಬ ಆಸೆ. ಅಂತೆಯೇ ಅವನಿಗೆ ತನ್ನ ಹೆಂಡತಿಯನ್ನು ಒಳ ಅಂತಃಪುರದ ದಾರಂದ ದಾಟಿಸಿ ಅವನಲ್ಲಿಗೆ ಕರೆದೊಯ್ದು ಭೇಟಿ ಮಾಡಿಸುವ ಆಸೆ. ಅವಳು ದಾರಂದ ದಾಟಿ ಹೊರಗೆ ಬರುವ 'ದಾಟುವಿಕೆ'ಗೆ 'ಸ್ಲೋಮೋಷನ್' ತಾಂತ್ರಿಕತೆ ಅಳವಡಿಸಿದ್ದಾರೆ ರೇ. ಇದರಿಂದಾಗಿ ಈ ದಾಟುವಿಕೆ ವಿಳಂಬಿತಗೊಳ್ಳುತ್ತಾ ಕಾಲದೀರ್ಘತೆಯ ಅಸಹನೀಯತೆ ಅನುಭವಕ್ಕೆ ಬರುವಂತೆ ಮಾಡುತ್ತಾರೆ. ಇನ್ನು ಅವರಿಬ್ಬರ ಭೇಟಿಯ ನಂತರ ಏನೆಲ್ಲ ಸಂಭವಿಸಬಹುದೆಂಬುದನ್ನು ಯಾರು ಬೇಕಾದರೂ ಊಹಿಸಬಹುದು.

ಇಂತಹ ಹೊಸ್ತಿಲು ದಾಟುವ ಹೆಣ್ಣುಗಳ ಅಂತರಂಗ ತಲ್ಲಣ ಕಟ್ಟಿಕೊಡುವುದರಲ್ಲಿ ಠಾಗೂರ್ ಸಿದ್ಧಹಸ್ತರು ಹಾಗು ರೇ ಅದಕ್ಕೆ ದೃಶ್ಯ ಕಟ್ಟುವ ಕಲಾವಿದರು. ಹೆಣ್ಣಿನ ಈ ಹಂತದ ಮನಸ್ಥಿತಿಯನ್ನು 'ರೇ' ತಮ್ಮದೇ ಚಿತ್ರ 'ಚಾರುಲತಾ'ದಲ್ಲಿ ಬೈನಾಕ್ಯುಲರ್ ಪ್ರತಿಮೆ ಬಳಸಿ ಕಟ್ಟುತ್ತಾರೆ. ಎನ್.ಲಕ್ಷ್ಮೀನಾರಾಯಣ್‌ರ 'ಉಯ್ಯಾಲೆ'ಯಲ್ಲಿ ನಮ್ಮದೂ ಒಂದು ರೀತಿ ಇದೆ. ದ್ವೀಪಸ್ಥಿತಿಗಳ ಏಕತಾನ ಅಸಹನೀಯ ಅನ್ನಿಸುವಂತೆ ಇವರು ದೃಶ್ಯೀಕರಿಸಿದ್ದಾರೆ. ಬಹುತೇಕ ಠಾಗೂರರ ಲೇಖನಿ ಹೆಣ್ಣಿನ ಅಂತರಂಗಲೋಕಕ್ಕೆ ಕನ್ನಡಿ ಎಂದರೂ ಆದೀತು. ಅದರಲ್ಲೂ ಮಧ್ಯಮ ವರ್ಗದ ಅಥವಾ ಜಮೀನುದಾರೀ ವರ್ಗದ ಸಕಲ ಸುಖಭೋಗಗಳಿದ್ದೂ ತಣಿಯದ ಅಂತರಂಗ ಚಿಲುಮೆ ಬತ್ತಿಸಿಕೊಳ್ಳಲಾಗದ ಹೆಣ್ಣುಗಳ ತಾಕಲಾಟ ತಲ್ಲಣಗಳನ್ನು ಹಿಡಿದಿಟ್ಟಿರುವ ಅತ್ಯುನ್ನತ ಮಾದರಿ. ಉಳಿದಂತೆ ನಾ ಕಂಡಂತೆ ಆ ನೆಲೆಗಿಂತ ಕೆಳಗಿಳಿದು ಈ ಪಾತ್ರಗಳಿಗಿಂತ ನೂರು ಪಟ್ಟು ದಟ್ಟ ಇರಬಹುದಾದ ಹೆಣ್ಣಿನ ಪ್ರಪಂಚ ಠಾಗೂರರಿಗೆ ಎಟುಕದೆ ಇರುವಂತದ್ದು. ○

ಈ ಸಂಚಿಕೆಯನ್ನು ರೂಪಿಸಿದವರು

ಎಂ.ರಘುಪತಿ
ಚಂದ್ರಶೇಖರ್.ಪಿ ಅತ್ತಿಬೆಲೆ (ವಿನ್ಯಾಸ)
ಶಾಂತರಾಜು ಎಸ್., ರುದ್ರೇಶ್
ಸಿ.ವಿ ನಾಗರಾಜು, ವಿಜಯಕೃಷ್ಣ

ಕಳೆದ ಸಂಚಿಕೆಯಿಂದ

'ತಲಪರಿಗೆ'ಯಿಂದ ಆಯ್ದ ಸಂಕ್ಷಿಪ್ತ ಸಂದರ್ಶನದ ಭಾಗ

ಅಸ್ಪೃಶ್ಯತೆ: ಗಾಯ ಮಾಡಿದೋರ್ನ ಕೇಳಿ...

–ಕೆ.ಎಚ್.ರಂಗನಾಥ್

ಪ್ರ: ನಿಮ್ಮ ಅಭಿಪ್ರಾಯದಲ್ಲಿ ಅಸ್ಪೃಶ್ಯತೆ ಎಂದರೆ ಏನು?

ಉ: ಅಸ್ಪೃಶ್ಯತೆ ಅಂದ್ರೆ ಏನೂಂತ ನಾನ್ಯಾಕೆ ಹೇಳ್ಬೇಕು? ಅಸ್ಪೃಶ್ಯತೇನ ಆಚರಣೆ ಮಾಡ್ತಾ ಇರೋರು ಹೇಳ್ಬೇಕು, ಅಸ್ಪೃಶ್ಯತೆ ಅಂದ್ರೇನು ಅಂತ. ಅಸ್ಪೃಶ್ಯತೇನ ನಾನು ಆಚರಿಸದೆ ಇದ್ದಾಗ ನಾನೇನು ಹೇಳಕ್ಕಾಗುತ್ತೆ? ಗಾಯಗೊಂಡೋರ್ನ ಕೇಳೋದಕ್ಕಿಂತ, ಗಾಯ ಮಾಡಿದೋರ್ನ ಕೇಳಿ.

ಪ್ರ: ಅಸ್ಪೃಶ್ಯತೆ ಅನುಭವ ನಿಮಗಾಗಿದೆಯೇ?

ಉ: ನಿಜ ಹೇಳ್ಬೇಕಂದ್ರೆ ಅಸ್ಪೃಶ್ಯತೆ ಅನುಭವ ನನಗಾಗಿಲ್ಲ.

ಪ್ರ: ದಯವಿಟ್ಟು ನಿಮ್ಮ ಶಿಕ್ಷಣದ ಹಿನ್ನೆಲೆಯನ್ನು ಸ್ವಲ್ಪ ವಿವರಿಸುತ್ತೀರಾ?

ಉ: ನಾನು ಅಸ್ಪೃಶ್ಯರ ಮನೆಯಲ್ಲಿ ಹುಟ್ಟಿದ್ದೀನಿ. ನನ್ನದು ನಾಲ್ಕನೇ ತಲೆಮಾರು. ನಮ್ಮಜ್ಜ ಶಾಲೆಯಿಲ್ಲದ ಕಾಲದಲ್ಲಿ ಓದಿದ್ದು. ಹರಿಹರನ ರಗಳೆಗಳನ್ನ ಪೂರಾ ಕಂಠಪಾಠ ಮಾಡಿ ಹೇಳ್ತಿದ್ದರು. ಅದಕ್ಕೆ ನಮ್ಮ ತಂದೆಗೆ ಹರಿಹರಪ್ಪ ಅಂತ ಹೆಸರಿಟ್ಟಿದ್ರು. ಅಷ್ಟರಮಟ್ಟಿಗೆ ಆತನ ವಿದ್ಯೆಯ ಮೇಲೆ ಪ್ರಭಾವ ಇತ್ತು.

ಪ್ರ: ಅವರಿಗೆ ಪಾಠ ಹೇಳಿಕೊಟ್ಟವರು ಯಾರು?

ಉ: ಯಾರು ಹೇಳ್ಕೊಟ್ರೊ ಯಾವನಿಗೆ ಗೊತ್ತು? ಅದಕ್ಕೆ ನಾನು ಹೇಳೋದೀಗ ನಮ್ಮನೇಗೆ ಅಕ್ಷರ ಪ್ರವೇಶ ಯಾವಾಗಾಯ್ತು ಅಂದ್ರೆ ನಮ್ಮ ಅಜ್ಜನ ಕಾಲದಲ್ಲಾಯ್ತು. ನಮ್ಮಪ್ಪನ ಕಾಲ್ದಲ್ಲಾಯ್ತು. ನನ್ ಮಕ್ಳು ನಾಲ್ಕನೇ ವಂಶಸ್ಥರು.

ಪ್ರ: ಅಂಬೇಡ್ಕರ್ ಬಗ್ಗೆ ನಿಮ್ಮ ಗ್ರಹಿಕೆ ಏನು?

ಉ: ಹಿ ವಾಸ್ ಎ ಕ್ರೂಸೇಡರ್. ನಮ್ಮ ತಂದೆ ಕಟ್ಟಾ ಅಂಬೇಡ್ಕರ್‌ವಾದಿ. ಹೆಚ್ಚು ಜನ ನಮ್ಮ ಮನೇಲಿ ಸೇರ್ತಾ ಇದ್ರು. ನಮ್ಮ ತಂದೆ ಹೆಚ್ಚು ಅಂಬೇಡ್ಕರ್ ಬಗ್ಗೆ ಮಾತಾಡ್ತಾ ಇದ್ರು ಮತ್ತು ಅವರ ಪುಸ್ತಕಗಳನ್ನ ಓದ್ತಾ ಇದ್ರು. ನನಗೆ ಆ ಹಿನ್ನೆಲೆ ಇತ್ತು. ಆದ್ದರಿಂದ ಐ ವಾಸ್ ಅಟ್ರಾಕ್ಟೆಡ್ ಬೈ ಹಿಸ್ ಥಾಟ್ಸ್. ನಾನು ಮಿಡ್ಲ್ ಸ್ಕೂಲ್‌ನಲ್ಲಿದ್ದಾಗ ಅವರನ್ನ ನೋಡಿದ್ದೀನಿ. ಆದ್ರೆ ಅಂಬೇಡ್ಕರ್ ಅವರ ಪ್ರತಿಯೊಂದು ವಿಚಾರಾನೂ ಓದ್ತಾ ಇದ್ದೆ, ತಿಳ್ಕೋತಿದ್ದೆ. ಅವರು ಬರೆದ ಪ್ರಾಬ್ಲಮ್ಸ್ ಆಫ್ ರುಪಿ ಥಾಟ್ಸ್ ಆನ್ ಪಾಕಿಸ್ತಾನ್, ಪಾರ್ಟಿಸನ್ ಆಫ್ ಇಂಡಿಯ, ಅನ್‌ಹಿಲೇಶನ್ ಆಫ್ ಕ್ಯಾಸ್ಟ್ ಇವೆಲ್ಲಾ ಓದಿದ್ದೀನಿ. ಆದ್ರೆ ಕೆಲವು ಕಡೆ ಅವರ ವಿಚಾರ ನನ್ನ ಮನಸ್ಸಿಗೆ ಅಷ್ಟು ಸರಿ ಅನ್ನಿಸ್ಲಿಲ್ಲ. ಕೆಲವು ಸರಿ ಅನ್ನಿಸ್ತಿವೆ. ಇವತ್ತು ಬುದ್ಧಿಸಂ ಬಗ್ಗೆ ಅಂಬೇಡ್ಕರ್ ಅವರ ವಿಚಾರಗಳನ್ನ ವೈಯಕ್ತಿಕವಾಗಿ ಒಪ್ತೀನಿ. ನಾನು ಬುದ್ಧಿಸಂ ಪರ ಇದ್ದೀನಿ. ಯಾಕಂದರೆ ಅದೊಂದೇ ಧರ್ಮ ಅಸಮಾನತೆ ಬೇಡ ಅಂತ ಹೇಳಿರೋದು. ಅದೂ ಯಾವಾಗ... ಕ್ರಿಸ್ತ ಪೂರ್ವದಲ್ಲಿ. 'ಲವ್ ದಿ ಮ್ಯಾನ್ ಕೈಂಡ್' ಅಂತ ಹೇಳಿದೆ. ಮನುಷ್ಯ ಮಾನವ

ಪ್ರೇಮಿಯಾಗಿರ್ಬೇಕು. ಈ ಶೈವ ಧರ್ಮದಲ್ಲಿ ಬುದ್ಧಿಸಂನ ವಿಚಾರಗಳನ್ನ ಬಳಕೆ ಮಾಡಿದ್ದಾರೆ ಅನ್ನಬಹುದು. 'ಕಲಬೇಡ, ಕೊಲಬೇಡ, ಹುಸಿ ನುಡಿಯಲು ಬೇಡ', ಪಂಚೇಂದ್ರಿಯಗಳೂ ಕೂಡ ಅಲ್ಲಿ ಬರ್ತವೆ. ಅದರಿಂದ ತರ್ಕಕ್ಕೆ ಒಳಗಾಗೋವಷ್ಟು ವಿಚಾರಗಳು ಬೇಕಾದಷ್ಟು ಬಂದಿವೆ ಅನ್ನಿಸುತ್ತೆ ಅಲ್ಲಿ.



ಪ್ರ: ನೀವು ದಲಿತ ಜನಾಂಗದಿಂದ ಬಂದವರಾಗ್ದೆ ಹೋಗಿದ್ರೆ, ತುಂಬಾ ಹಿಂದೇನೆ ಮುಖ್ಯಮಂತ್ರಿ ಆಗಿರ್ತಿದ್ರಿ ಅಲ್ವಾ?

ಉ: ನಮಗ್ಯಾಕ್ ಬೇಕು, ಮನುಷ್ಯರಾಗಬೇಕು. ಮುಖ್ಯಮಂತ್ರಿಯಾಗ್ಬಿಟ್ರೆ ಮನುಷ್ಯತ್ವ ಗೋತ್ತಾಗ್ಬಿಡುತ್ತಾ? ಅವನೊಬ್ಬ ಉತ್ತಮವಾದ ಮನುಷ್ಯನಾಗ್ಬಿಡ್ತಾನಾ? ಈ ಹಿಂದೆ ಹಲ್ವಾ ಜನ ಯಾರೂ ಮುಖ್ಯಮಂತ್ರಿಗಳಾಗಿಲ್ವಾ?

ಪ್ರ: ಕೇವಲ ರಾಜಕೀಯ ಅಧಿಕಾರ ಸಿಕ್ಕಿದ್ರೆ ವಿಮೋಚನೆ ಆಗೋದಿಲ್ಲಾ ಅನ್ನೋದು ನಿಮ್ಮ ಅಭಿಪ್ರಾಯಾನ?

ಉ: ಮಾಡಿದ್ರೆ ಆಗ್ತದೆ. ಮಾಡ್ದೇ ಇದ್ರೆ ಆಗೊಲ್ಲ. ಈಗ ರಿಜರ್ವೇಶನ್ ಯಾವಾಗ ಬಂತು, ರಾಜ್ಯಾಂಗದ ಜೊತೆಗೇ ಬಂತು? ಎಷ್ಟು ದಿವಸಾಂತ ಕೊಟ್ಟಿದ್ದು. ಹತ್ತೇ ವರ್ಷ. ಆದ್ರೆ ಅಂಬೇಡ್ಕರ್ ಆಲೋಚನೆ ಏನಿತ್ತು? ಹತ್ತು ವರ್ಷದವರೆಗೆ ಇವ್ರಿಗೆ ರಿಜರ್ವೇಶನ್ ಕೊಡ್ಬೇಕೂಂತಿತ್ತು. ಅಂದರೆ ಕುಂಟನಿಗೆ ನಡ್ಯೂಕಾಗೋವರ್ಗೂ ಕೊಡ್ಬೇಕು. ಅದನ್ನ ನಿಷ್ಪಕ್ಷಪಾತವಾಗಿ ಕೊಡೋ ಮನಸ್ಸು ಮಾಡ್ಬೇಕು. ಈಗ ನಾನೊಂದು ಮಾತು ಹೇಳ್ತೀನಿ. ಅಸಿಸ್ಟೆಂಟ್ ಇಂಜಿನಿಯರ್ ಟು ಇಂಜಿನಿಯರ್, ಕ್ಲಾಸ್ ಒನ್, ಕ್ಲಾಸ್ ಟು ಅಂತಿದೆ. ಈತ ಮಿಸ್ಟರ್ ದೇವೇಗೌಡ ಒಂದು ನೂರುಪಾಯಿ ಸಂಬಳ ಜಾಸ್ತಿ ಮಾಡಿ ಅವರನ್ನ ಕ್ಲಾಸ್ ಒನ್ ಅಂತ ಕರೆದ ಹಿ ಡಿನೇಯ್ಡ್ ದೆಮ್ ಟು ಎಂಜಾಯ್ ದಿ ರಿಸರ್ವೇಶನ್ ಬೆನಿಫಿಟ್.

ಪ್ರ: ಮೀಸಲಾತಿಯನ್ನ ಹತ್ತು ವರ್ಷಕ್ಕೆ ಅಂತ ನಿಗದಿಗೊಳಿಸಿದ್ದು ಸರಿಯಾಗಿತ್ತೆ?

ಉ: ರಿಸರ್ವೇಶನ್‌ನಲ್ಲಿ ಎರಡು ವಿಧವಿದೆ. ಒಂದು ರಾಜಕೀಯ ರಿಸರ್ವೇಶನ್, ಇನ್ನೊಂದು ಅಧಿಕಾರ ರಿಸರ್ವೇಶನ್. ಪ್ರಮೋಶನ್‌ಗಳಿಗೆ ಅಪಾಯಿಂಟ್‌ಮೆಂಟ್‌ಗಳಿಗೆ ಅಂತ. ರಾಜಕೀಯ ರಿಸರ್ವೇಶನ್ ಯಾರಿಗೆ ಅಂದ್ರೆ ಅನ್‌ಟಚ್‌ಬಲ್ಸ್‌ಗೆ. ನಾಟ್ ಫಾರ್ ಆಲ್. ಎಲ್ಲರನ್ನೂ ಅನ್‌ಟಚಬಲ್ಸ್ ಅಂತ ಕರೆಯೋದಕ್ಕೆ ಆಗೊಲ್ಲ. ಈಗ ನಾನು ತಮಗೆ ಹೇಳುತ್ತೇನೆ– ಬೋವಿಗಳು, ಲಂಬಾಣಿಗಳು, ಕೊರಮರು, ಕೊರಚರು, ಇವರು ದೇವಸ್ಥಾನದ ಒಳಗಡೆ ಹೋಗಬಹುದು. ದೇವರಿಗೆ ಪೂಜೇನೂ ಮಾಡಬಹುದು. ಬಾವೀಲಿ ನೀರು ಸೇದಬಹುದು. ಆದ್ರೆ ಇವತ್ತು ಹಿ ಈಸ್ ಎಂಜಾಯಿಂಗ್ ದಿ ಬೆನಿಫಿಟ್ಸ್ ಆಫ್ ಶೆಡ್ಯೂಲ್ಡ್ ಕಾಸ್ಟ್, ಶೆಡ್ಯೂಲ್ಡ್ ಕಾಸ್ಟ್ ಅನ್ನೋ ಶಬ್ದ ಪೀಪಲ್ ಹು ಆರ್ ಸಫರಿಂಗ್ ಫ್ರಂ ಅನ್‌ಟಚಬಿಲಿಟಿ, ದೇ ಆರ್ ದೋಸ್ ಪೀಪಲ್ ಹೂ ಆರ್ ಶೆಡ್ಯೂಲ್ಡ್ ಇನ್ ದಿ ಕಾನ್ಸ್‌ಟಿಟ್ಯೂಶನ್.

ಪ್ರ: ಇವತ್ತು ಎಸ್‌ಸಿ, ಎಸ್‌ಟಿ ಹಾಸ್ಟೆಲ್‌ಗಳಲ್ಲೂ ತುಂಬಾ ಜಗಳಗಳಾಗ್ತವೆ. ಲಂಬಾಣಿ ಹುಡುಗ್ರು, ಬೋವಿ ಹುಡುಗ್ರು, ಹೊಲೆಯರ ಹುಡುಗ್ರು, ಎಲ್ಲಾ ಒಂದೇ ಹಾಸ್ಟಲ್‌ನಲ್ಲಿ ಇರ್ತಾರೆ. ಆದ್ರೆ ಇವ್ರಿವ್ರೆ ಜಗಳಕ್ಕೆ ನಿಂತ್ಕೊಂಡ್ಬಿಡ್ತಾರೆ...

ಉ: ನೋಡಿ ರಂಗನಾಥ ಅವ್ರು ಲಿಂಗಾಯಿತರ ಪರವಾಗಿ ಮಾತಾಡ್ತಾರೆ, ಒಕ್ಕಲಿಗರ ಪರವಾಗಿ ಮಾತಾಡ್ತಾರೆ ಅಂತ ಚಾಡಿ ಹೇಳಿದರು ಕಾಂಗ್ರೆಸ್‌ನವರ ಜೊತೆ. ಇವ್ರೇ ಹೇಳ್ದೋರು ನಮ್ಮೋರೇ... ಈ ಎನ್.ರಾಚಯ್ಯನಂತೋರು. ಬಟ್ ನಾನ್ ತಲೆ ಕೆಡಿಸಿಕೊಳ್ಳಲಿಲ್ಲ. ನಾನ್ ಎವಿಡೆನ್ಸ್ ಕೊಡೋಕೋಗಿದ್ದೆ. ದಿವಾಕರ ಅಂತಿದಾನಲ್ಲ, ಅವನು ಪಾರ್ಲಿಮೆಂಟ್ ಮೆಂಬರ್ ಆಗಿದ್ದ ಅದೇ ತಾನೆ. ಅವ್ನು ಬಂದು ಬೋವಿ ಜನಗಳನ್ನ ಎಸ್‌ಸಿ, ಎಸ್‌ಟಿಗೆ ಸೇರಿಸೋಕೆ. ಸೇರಿಸ್ಬಾರ್ದು ಅಂತ ವಾದ ಒಂದಿತ್ತು, ನಾನೂ ಸುಮ್ನೆ ಇದ್ದೆ, ಐ ಯಾಮ್ ನಾಟ್ ಇಂಟ್ರೆಸ್ಟೆಡ್ ಇನ್ ದಿಸ್. ಆಮೇಲೆ ಹಂಗಾಯ್ತು ಹಿಂಗಾಯ್ತು ವಡ್ಡರನ್ನೂ ಸೇರಿಸ್ಬೇಕು ಅಂತಾಯ್ತು. ನಾನು ಅವಾಗಿದ್ದೆ, 'ದೇ ಆರ್ ನಾಟ್ ಅನ್‌ಟಚಬಲ್ಸ್' ಎಂದೆ. ಇವರೇ ಪ್ರಾರಂಭ ಮಾಡಿದ ಕಮಿಟಿ ಬಂತು, ಗೌರ್ನಮೆಂಟ್ ಆಫ್ ಇಂಡಿಯ ಕಮಿಟಿ ಎವಿಡೆನ್ಸ್ ತಕೊಂಡು ಬಂತು. 'ಇಲ್ಲಾ ಇಲ್ಲಾ ಹಂಗೆ ಹಿಂಗೇಂದ್ರು', ಈಗ ಆಂಧ್ರದಿಂದ ಬಂದಂತಹ ಕೆಲವು ವಡ್ಡರಿದ್ದಾರೆ. ನಾನು ಎವಿಡೆನ್ಸ್ ಕೊಡೋವಾಗ ಹೇಳ್ದೆ, ಎಜುಕೇಶನ್‌ನಲ್ಲಿ ಸಮ್ ಆಫ್ ದೆಮ್ ಬ್ಯಾಕ್‌ವರ್ಡ್. ಎಕ್ಸ್‌ಟ್ರಾ ಕೊಡಿ, ಎಜುಕೇಶನ್ ಕೊಡಿ, ಅಪಾಯಿಂಟ್‌ಮೆಂಟ್ ಕೊಡಿ, ಬಟ್ ಡು ನಾಟ್ ಅಲೋ ದೆಮ್ ಟು ಗೆಟ್ ದಿ ಬೆನಿಫಿಟ್ಸ್ ಆಫ್ ಪೊಲಿಟಿಕಲ್ ರಿಜರ್ವೇಶನ್. ದೆ ಕಾಂಟ್ ರೆಪ್ರಸೆಂಟ್ ದಿ ಶೆಡ್ಯೂಲ್ಡ್ ಕಾಸ್ಟ್, ಪೀಪಲ್ ಆನ್ ದಿ ಫ್ಲೋರ್ ಆಫ್ ಹೌಸ್. ಕೆಲಸ ಕೊಡ್ಲಿ, ಇನ್ನೂ ಎರಡು ಪರ್ಸೆಂಟ್ ಜಾಸ್ತಿ ಓದ್ಲಿ. ಪರ್ಸೆಂಟೇಜ್ ಆಫ್ ಎಜುಕೇಶನ್ ಕಡಿಮೆ ಇದೆ.

ಪ್ರ: ಪ್ರಜಾಪ್ರಭುತ್ವ ಹಿಂದೂ ಮನಸ್ಸಿನ ಜಾತಿ ಆಟ ಅಂತೀರಾ? ಅದು ಎಲ್ಲರ ಮನಸ್ಸಲ್ಲೂ ಇದೆ ಅಂತೀರಾ?

ಉ: ಇದೆ ಇದೆ, ಅನ್‌ಟಚಬಲ್ಸ್ ಕೂಡ. ತಳವಾರಿಕೆ ಮಾಡೋನು ನಾನೊಂದು ಕ್ಯಾಟಗರಿ ಅಂತಾನೆ, ಅವನ್ ಕೆಳಗಡೆ ಇರೋನು ನಾನು ಮೇಲೆ ಅಂತಾನೆ, ಏನು ಮಾಡ್ತೀರಿ ಇದಕ್ಕೆ? ತಳವಾರಿಕೆ, ಏನಿಲ್ಲ ಅಂದ್ರೂನು ಅವನ ಮೇಲೆ ಜಬರ್‌ದಸ್ತು... ಆಕ್ಟ್‌ನಲ್ಲಿ 'ಗೌಡ' ಸುಪೀರಿಯರ್ ಟು ಶ್ಯಾನುಭೋಗ, ಶ್ಯಾನುಭೋಗ ಈಸ್ ಅಕೌಂಟೆಂಟ್ ಆಫ್ ಗೌಡ, ಆದ್ರೆ ಶ್ಯಾನುಭೋಗ... ಅಜ್ಞಾನ ಕಾರಣ ಇದಕ್ಕೆಲ್ಲ. ಅವನನ್ನ ಅಕ್ಷರ ಜ್ಞಾನದಿಂದ ವಂಚಿತನನ್ನಾಗಿ ಮಾಡಿ ಈ ತರಹ ಎಕ್ಸ್‌ಪ್ಲಾಯಿಟ್ ಮಾಡಿಕೊಂಡು ಅದಕ್ಕೆ ಬೇಕಾಗಿರತಕ್ಕಂತ ಪುಸ್ತಕಾನೂ ಬರೆದ್ರಲ್ಲ...

ಪ್ರ: ಅಂಬೇಡ್ಕರ್ ಅವರು ದಲಿತ ರಾಷ್ಟ್ರದ ಬಗ್ಗೆ ಮಾತನಾಡಿದ್ದಾರಂತೆ!

ಉ: ಐ ಡು ನಾಟ್ ಫೈಂಡ್. 'ನಾನು ಬಹಳಷ್ಟು ಅವರ ಪುಸ್ತಕಗಳನ್ನು ಓದಿದ್ದೀನಿ. ಸ್ವಲ್ಪ ಹೆಚ್ಚು ಓದಿರಬಹುದು ನೀವು. ಬಟ್ ಐ ಡೋಂಟ್ ಫೈಂಡ್ ಇಟ್ ಎನಿ ವೇ...!

ಸಂದರ್ಶಕರು: ಡಾ॥ ಕೆ.ವೈ. ನಾರಾಯಣಸ್ವಾಮಿ

ಡೊಮಿನಿಕ್

ಡಾ. ಸಿ.ಜಿ.ಲಕ್ಷ್ಮೀಪತಿ

ಕೃಪೆ : 'ತಲಪರಿಗೆ'

ಆ ಹುಣ್ಣಿಮೆಗಳೂ... ನಂದಿದ ಮಣ್ಣಿನ ಹಣತೆಗಳು

ಹುಣ್ಣಿಮೆ ಹಾಡು-21 21.03.2008

ಕಲೆ ಮತ್ತು ಸಂಸ್ಕೃತಿಗೆ ನಾಡಿಗೆ ದ್ರಾವಿಡ, ಹೊಯ್ಸಳ ಶೈಲಿಯ ಶಿಲ್ಪಕಲೆಗೆ ಕರ್ನಾಟಕ ಜಗತ್ತಿಗೆ ಹೆಸರು. ನೆಲಸಂಸ್ಕೃತಿಯ ನಡೆ ಭಾಗವೇ ಆಗಿರುವ ಶಿಲ್ಪಕಲಾ ಶಿಬಿರ ಮಾರ್ಚ್ 7ರಿಂದ 16ರವರೆಗೆ ನಡೆಸಲಾಯಿತು. ಜಾನ್ ದೇವರಾಜ್, ಕಮ್ಮಾರ, ವೆಂಕಟೇಶ್ ಹಾಗೂ ಇತರ ಕಲಾವಿದರು. ಆದಿಮದ ಬಯಲಲ್ಲಿ ನಿರ್ಮಿಸಿರುವ ಶಿಲ್ಪಗಳು ನೋಡುಗರ ಮನ ತಣಿಸುವಂಥಾದವು. ಹುಣ್ಣಿಮೆ ಹಾಡು ಕಾರ್ಯಕ್ರಮದಲ್ಲಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ಗಿರೀಶ್ ಕಾರ್ನಾಡರ ಜನಪದ 'ನಾಗಮಂಡಲ' ಪ್ರದರ್ಶಿಸಲಾಯಿತು. ನಿರ್ದೇಶನ ಮೈಕೋ ಚಂದ್ರು

ಹುಣ್ಣಿಮೆ ಹಾಡು-22 20.04.2008

ಮಕ್ಕಳ ಬೌದ್ಧಿಕ ಮಟ್ಟವನ್ನು ವಿಸ್ತಾರಗೊಳಿಸುವಂತಹ ಮಕ್ಕಳ ನಾಟಕ ರಚನಾ ಶಿಬಿರ ಏರ್ಪಡಿಸಲಾಗಿತ್ತು. ಮಂಜುನಾಥ್ ಬಡಿಗೇರ ನಿರ್ದೇಶನದ ನಾಟಕ "ಮಿಸ್ ಸದಾರಮೆ" ಪಿಂಡಿಪಾಪನಹಳ್ಳಿ ಮುನಿವೆಂಕಟಪ್ಪನವರಿಗೆ 2007 ಡಾ. ಎಲ್. ಬಸವರಾಜ್ ಪ್ರತಿಷ್ಠಾನ ಗೌರವ ಪ್ರಶಸ್ತಿ ಪ್ರದಾನ. ಇಂದು ಅವನತಿಯ ಹಂತ ಮುಟ್ಟಿರುವ ಜನಪದ ಕಲೆಯಾದ ತಮಟೆ ವಾದನ ಪ್ರದರ್ಶನ. ಆದಿಮ ಪ್ರತಿಷ್ಠಿತ "ಗದ್ದುಗೆ ಗೌರವ" ಸಮರ್ಪಿಸಲಾಯಿತು.

ಹುಣ್ಣಿಮೆ ಹಾಡು-23 18.05.2008 - 19.05.2008

ಚುಕ್ಕಿಮೇಳ/ ಬೇಸಿಗೆ ಶಿಬಿರ

ವಿಜ್ಞಾನ ಮತ್ತು ಗಣಿತ ಆಧಾರಿತ ಮಕ್ಕಳ ನಾಟಕ ಪ್ರದರ್ಶನ. ತಿಂಗಳ ಕಾಲ ಕಲಿತು ಪ್ರದರ್ಶಿಸಿದ 4 ನಾಟಕಗಳು. (1) ಸುಣ್ಣದ ಸುತ್ತು (2) ಆಪರೇಷನ್ ಅಪ್ಪು ಸರ್ಚ್ (3) ಅಲೆಮಾರಿ ಮುದುಕ (4) ಒಗಟಿನ ರಾಣಿ

ಜಿಲ್ಲೆಯ ಜನಪದ ಕಲೆಗಳಾದ ಕೋಲಾಟ, ಮತ್ತು ಡೊಳ್ಳು ಕುಣಿತ ಪ್ರದರ್ಶನ.

ಹುಣ್ಣಿಮೆ ಹಾಡು-24 18.06.2008

ಪಿ.ಲಂಕೇಶ್‌ರ ಮಹತ್ವದ "ಮುಸ್ಸಂಜೆ



ಕಥಾ ಪ್ರಸಂಗ" ನಾಟಕ, ತಂಡ ರೂಪಾಂತರ, ನಿರ್ದೇಶನ ಎಸ್.ಡಿ.ಎಲ್. ಚಂದ್ರು, 19-06-2008ರಿಂದ ರಂಗ ಸಂಗೀತ ಶಿಬಿರ. ಸಂಪನ್ಮೂಲ ವ್ಯಕ್ತಿಗಳಾಗಿ ಸಿ.ಬಸವಲಿಂಗಯ್ಯ, ಬಿ.ಜಯಶ್ರೀ, ಇಸ್ಮಾಯಿಲ್ ಗೋನಾಳ್ ಇವರಿಂದ ಜಿಲ್ಲೆಯ ಉದಯೋನ್ಮುಖ ಹಾಡುಗಾರರಿಗೆ ಸಂಗೀತದ ಬಗ್ಗೆ ತರಬೇತಿ ನೀಡಲಾಯಿತು. 25-06-2008 ಸಮಾರೋಪ ಸಮಾರಂಭ. ಮುಖ್ಯ ಅತಿಥಿಗಳು ಡಿ.ಕೆ.ಚೌಟ, ಶ್ರೀಮತಿ ಜಾನಕಿ ನಟರಾಜನ್, ಶ್ರೀರಾಮರೆಡ್ಡಿ.

ಹುಣ್ಣಿಮೆ ಹಾಡು-25 17.07.2008


ಚಿತ್ರನಟ ಮಂಡ್ಯರಮೇಶ್ ನಿರ್ದೇಶನದ "ಚೋರ ಚರಣದಾಸ" ನಾಟಕ, ನಟನಾ ತಂಡ, ಚರಣದಾಸ ತನ್ನ ಸಾಮಾನ್ಯ ಜ್ಞಾನದಿಂದ ನಾಲ್ಕು ತತ್ವಗಳನ್ನು ಉಳ್ಳವರ ಸಂಪತ್ತಿನ ಆ ಗೋಡೆಗಳನ್ನು ಒಡೆದು ಜನಸಮುದಾಯಕ್ಕೆ ಹಂಚುವ ಜನಪ್ರತಿನಿಧಿ ಪಾತ್ರದ ವಿನೂತನ ಕಥನ ಪ್ರದರ್ಶನ ನಾಟಕ. ಮರಾಠಿ ಮೂಲ ಕಥೆಯಾದರೂ ಕನ್ನಡ ಗೇಯತೆಯೊಂದಿಗೆ ಸಾಮಾನ್ಯ ಕೈಗಳು ಚಪ್ಪಾಳೆ ತಟ್ಟಿದ್ದು ಮರೆಯಲಾಗದ ದೃಶ್ಯ.

ಹುಣ್ಣಿಮೆ ಹಾಡು-26 16.08.2008

ಅಕಾಲಿಕವಾಗಿ ಗೆಳೆಯರನ್ನಗಲಿದ ಪರಿಸರಪ್ರೇಮಿ ಕವಿ ಕಲಾವಿದ ಜನಪರ ಚಳುವಳಿಗಾರ ಪ್ರಗತಿಪರ ಚಿಂತಕ ಸೋಮಶೇಖರಗೌಡರ ನೆನಪಿನಲ್ಲಿ "ಸೋಮು ನೆನಪಿನ ಹುಣ್ಣಿಮೆ". ಅಗಲಿದ ಗೆಳೆಯನ ಬಗ್ಗೆ ಗೆಳೆಯರು ನೆನಪುಗಳನ್ನು ಹಂಚಿಕೊಂಡರು. ಡಾ. ಕೆ.ವೈ.ನಾರಾಯಣಸ್ವಾಮಿಯವರ "ಕಳುವು" ನಾಟಕ. ಖ್ಯಾತನಟಿ ಉಮಾಶ್ರೀ, ಸುಂದರಶ್ರೀ ಮುಂತಾದವರ ಅಭಿನಯ. ನಿರ್ದೇಶನ ಪ್ರಮೋದ್ ಶಿಗ್ಗಾಂವ್ ತಂಡ, ರಂಗ ಸಂಪದ.

ಹುಣ್ಣಿಮೆ ಹಾಡು-27 15.09.2008

ಆದಿಮ ಕಲಾ ತಂಡದ ಹಾಡುಗಾರ ಕವಿ ಕಲಾವಿದ, ಹುದುಗೂರು ಮೋಹನ್ ನೆನಪಿನ ಹುಣ್ಣಿಮೆ. ಜಿಲ್ಲಾಧಿಕಾರಿ ಹೆಚ್. ಆರ್.ಶ್ರೀನಿವಾಸ್‌ರವರಿಂದ ಪುಸ್ತಕ ಬಿಡುಗಡೆ



"ಮೋಹನಗಾನ ಮೋಹನಗೊಂದು ನಮನ". ಗೆಳೆಯನ ನೆನಪಿನಲ್ಲಿ ಆದಿಮ ತಂಡದವರಿಂದ "ಕಿನ್ನೂರಿ ನುಡಿದೋ" ನೃತ್ಯರೂಪಕ ಜಿಲ್ಲೆ ಮತ್ತು ನಾಡಿನ ಹಾಡುಗಾರರಿಂದ ರಾತ್ರಿಯಿಡಿ ಹಾಡುಗಾರಿಕೆ.

ಹುಣ್ಣಿಮೆ ಹಾಡು-28 14.10.2008

ಪುರುಷ ಕೇಂದ್ರಿತ ಬಲೆಯಲ್ಲಿ ಸಿಕ್ಕು ಹೆಣ್ಣು ಅನುಭವಿಸುವ ಸಾಮಾಜಿಕ ಯಾತನೆಯನ್ನು ಪ್ರತಿಬಿಂಬಿಸುವ ಅಪರೂಪದ ನಾಟಕ "ಸಾವಿರದವಳು" ನಿರ್ದೇಶನ ಮಾಲತೇಶ್ ಬಡಿಗೇರ. ರಚನೆ ಸಿ.ವೀರಣ್ಣ, ತಂಡ: ಅದಮ್ಯ, ಬೆಂಗಳೂರು.



ಹುಣ್ಣಿಮೆ ಹಾಡು-29 13.11.2008

ಕೋಲಾರ ಜಿಲ್ಲೆ ಶ್ರೀನಿವಾಸಪುರದ ಶ್ರೀ ಬೈರವೇಶ್ವರ ವಿದ್ಯಾನಿಕೇತನ ಸಂಸ್ಥೆಯ ಶಾಲಾ ಮಕ್ಕಳಿಂದ 'ರತ್ನಪಕ್ಷಿ' ನಾಟಕ, ರಚನೆ: ಕೋಟಿಗಾನಹಳ್ಳಿ ರಾಮಯ್ಯ, ಯಶವಂತ್ ಸರದೇಶಪಾಂಡೆ ಅವರ "ಆಲ್‌ದ ಬೆಸ್ಟ್" ನಾಟಕ ನಿರ್ದೇಶನ: ಪ್ರಮೋದ್ ಶಿಗ್ಗಾಂವ್, ತಂಡ: ಗುರುಸಂಸ್ಥೆ ಹುಬ್ಬಳ್ಳಿ.


ಹುಣ್ಣಿಮೆ ಹಾಡು-30 12.12.2008

ಫಜಲ್ ಗಾರುಡಿ ಶಾಂತರಸ ಅವರ ಕಥೆಯಾಧಾರಿತ "ಬಡೇಸಾಬು ಪುರಾಣ" ಧರ್ಮಾಂಧ ರಜಾಕನು ದೆಹಲಿಯ ನವಾಬನ ಮಾಂಡಲೀಕನಾಗಿ ಹೈದರಾಬಾದ್ ಕರ್ನಾಟಕವನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡು ಸಾಮಾನ್ಯ ಜನರ ಮೇಲೆ ಆಕ್ರಮಣ ದಬ್ಬಾಳಿಕೆ ನಡೆಸಿ, ಹಿಂಸಿಸಿ ಕಡೆಗೆ ತನ್ನ ಅಧಿಪತ್ಯವನ್ನು ಭಾರತದಲ್ಲಿ ವಿಲೀನಗೊಳಿಸುವಂತಹ ಐತಿಹಾಸಿಕ ಸತ್ಯಘಟನೆ ಆಧಾರಿತ ನಾಟಕ. ಈ ನಾಟಕವನ್ನು ರೂಪಾಂತರ ತಂಡ ಪ್ರದರ್ಶಿಸಿತು. ನಿರ್ದೇಶನ: ಕೆಎಸ್‌ಡಿಎಲ್ ಚಂದ್ರು, ನಾಟಕರೂಪ: ಬಸವರಾಜ ಸೂಳೇರ ಪಾಳ್ಯ.

ಹುಣ್ಣಿಮೆ ಹಾಡು-31, 11-1-2009,

ಹಿಂದೂಸ್ತಾನಿ ಸಂಗೀತದ ಶಾರೀರಕ್ಕೆ ಮತ್ತೊಂದು ಹೆಸರು ವೆಂಕಟೇಶ್ ಕುಮಾರ್. ಮೂಲತಃ ಅತ್ಯಂತ ಹಿಂದುಳಿದ ಅಲೆಮಾರಿ ಜನಾಂಗದ ಇವರು ಬಾಲ್ಯಕಾಲದಿಂದಲೂ ಸಂಗೀತವನ್ನು ಆರಾಧಿಸಿ ಉಸಿರಾಗಿಸಿಕೊಂಡವರು. ಪಂಚಾಕ್ಷರಿ ಗವಾಯಿಗಳು ಸ್ಥಾಪಿಸಿರುವ ಬಿಜಾಪುರದ ಸಂಗೀತ ಶಾಲೆಯಲ್ಲಿ ಕಲಿತವರು. ಹುಣ್ಣಿಮೆ ಹಾಡು-31ಕ್ಕೆ ರಾತ್ರಿಯಿಡಿ ವಚನಗಾಯನ ನಡೆಸಿಕೊಟ್ಟರು. ಹಿಂದೂಸ್ತಾನಿ ರಾಗಗಳಿಗೆ ದೇಸಿತನದ ರಾಗಗಳನ್ನು ಬಳಸಿ ಬೆರೆಸಿ ಶಿಶುನಾಳಶರೀಫರ ತತ್ವಪದ, ವಚನಕಾರರ ವಚನ, ದಾಸರಗೀತೆ, ಕೀರ್ತನೆಗಳನ್ನು ಬೆಳಕರಿಯುವ ತನಕ ಹಾಡುವ ವಿದ್ವಾಂಸರು. ಇವರಿಗೆ ಆದಿಮ ಪ್ರತಿಷ್ಠಿತ "ಗದ್ದುಗೆ ಗೌರವ" ಸಮರ್ಪಿಸಿ ಗೌರವಿಸಲಾಯಿತು. ಇವರ ಗಾನಸುಧೆಗೆ ಜಿಲ್ಲೆ ಮತ್ತು ನಾಡಿನಾದ್ಯಂತ ಸಂಗೀತ ಪ್ರೇಮಿಗಳು ಆಗಮಿಸಿ ಇವರ ಗಾನಾಮೃತಕ್ಕೆ ಸಮ್ಮೋಹನಗೊಂಡು ಹುಣ್ಣಿಮೆ ಹಾಡು-31ಕ್ಕೆ ಅರ್ಥವಂತಿಕೆಯನ್ನು ತಂದು ಕೊಟ್ಟರು.

‘ಇನ್‌ಕ್ಲ್ಯುಸೀವ್ ಅಂಡ್ ಎಕ್ಸ್‌ಕ್ಲುಸೀವ್’ ಮೋಡಿಯೂ... ಟ್ರಾಫಿಕ್ ಜಾಮಿನಲ್ಲಿ ಸೂರ್ಯನೂ...





ಒಬ್ಬ ಸ್ವಾಮೀಜಿಗೂ ನನಗೂ ಆಗಾಗ ಒಂದು ವಿಡಂಬನಾತ್ಮಕ ಸಂವಾದ ನಡೆಯುತ್ತದೆ. ಅವರು ಈ ರಾಮಕೃಷ್ಣಾಶ್ರಮದ ‘ವೈಟ್‌ವಾಶ್ಡ್ ಸ್ಯಾಪ್ರನ್’ಗೊಂದು ಮಾದರಿ. ಮೊದಲು ಬಂದಾಗ ಅತ್ಯಂತ ಅದ್ದೂರಿತನದಲ್ಲಿ ಅದ್ದಿಬಂದವರಂತೆ ಇದ್ದರು. ನಾನು ದನಗಳ ಕೊಟ್ಟಿಗೆ ಕನಸಿನಲ್ಲಿದ್ದೆ. ಎರಡನೆಯ ಬಾರಿ ಬಂದಾಗ ದನದ ಕೊಟ್ಟಿಗೆಯಲ್ಲಿ ಅರೆರೋಗಿಯಾಗಿದ್ದರೂ ಪೂರ್ಣ ನೆಲಕ್ಕೆ ಕುಸಿದವನಂತೆ ನಾಟಕ ಆಡುವ ಸ್ಟ್ರಾಟಜಿ ಅಳವಡಿಸಿಕೊಂಡಿದ್ದೆ. ಹೀಗಾಗಿ ಸ್ವಾಮಿಗಳೇ ಖುದ್ದು ಕೊಟ್ಟಿಗೆಗೆ ಬಂದರು. ಸಗಣಿ, ಗಂಜಳದ ನೆಲದಲ್ಲಿ ಹೆಜ್ಜೆ ಮೂಡಿಸಿ ಹೋದರು. ಈಗ ಮೊನ್ನೆ ಬಂದು ಎಲ್ಲರಂತೆ ತಾವೂ ‘ಡೆಡ್‌ಎಂಡ್’ಗೆ ಬಂದಿರುವುದಾಗಿ ಹೊಟ್ಟೆ ಹುಣ್ಣಾಗುವಂತೆ ನಗುವಷ್ಟು ದೃಷ್ಟಾಂತಗಳನ್ನು ತೆರೆದಿಟ್ಟು ಹೋದರು. ಹೋಗುವ ಮುನ್ನ ಈ ‘ಸೀರೆ ಹಂಚುವುದರಿಂದ ಅವರ ಬದುಕಿನಲ್ಲಿ ಏನಾದರೂ ಕೊಂಚ ಮಾರ್ಪಾಡು ಕಾಣಬಹುದೇ? ಎಂದಿದ್ದಕ್ಕೆ, ನಮ್ಮದು ಹುಣ್ಣಿಗೆ ಮುಲಾಮು ತೀಡೋದಷ್ಟೆ. ಆಪರೇಷನ್ ಅಲ್ಲ’ ಎಂದು ಎದ್ದು ನಡೆದರು.

ಈ ‘ಡೆಡ್‌ಎಂಡ್’ ಪದ ಬಳಸುವುದಕ್ಕೆ ಕಾರಣವಾಗಿದ್ದು ಇತ್ತೀಚೆಗೆ ರಾಜಧಾನಿಯ ‘ನಯನ’ ಸಭಾಂಗಣದಲ್ಲಿ ನಡೆದ ಒಂದು ವಿಚಾರ ಸಂಕಿರಣ. ನ್ಯಾಷನಲ್ ಲಾ ಕಾಲೇಜಿನ ‘ಇನ್‌ಕ್ಲ್ಯುಸೀವ್ ಅಂಡ್ ಎಕ್ಸ್‌ಕ್ಲುಸೀವ್’ ಕೋಶ ಏರ್ಪಡಿಸಿದ್ದ ಸಾಮಾಜಿಕ ನ್ಯಾಯ’ದ ಬಗೆಗಿನ ರಾಷ್ಟ್ರೀಯ ವಿಚಾರ ಸಂಕಿರಣ ಅದು. ಈ ಸಂಕಿರಣದಲ್ಲಿ ಅಂತರರಾಷ್ಟ್ರೀಯ ಖ್ಯಾತಿಯ ರಾಜಕೀಯ ವಿಶ್ಲೇಷಕರಾದ ಯೋಗೇಂದ್ರ ಯಾದವ್ ಸಾಮಾಜಿಕ ನ್ಯಾಯಕ್ಕೆ ಸಂಬಂಧಪಟ್ಟಂತೆ ಈ ‘ಡೆಡ್‌ಎಂಡ್’ ನುಡಿಕಟ್ಟನ್ನು ಬಳಸಿದರು. ವಿದ್ವತ್‌ಪೂರ್ಣ ಭಾಷಣ ಅವರದು. ಎಲ್ಲಾ ದಿಕ್ಕುಗಳಿಂದಲೂ. ಎಲ್ಲಿ ನಿಂತು ನೋಡಿದರೂ ಕುಂದು ಕಾಣದಂತಹ ಚಿಂತನಾ ಹೆಣಿಗೆ. ಆ ಧ್ವನಿ, ನಿಲುವ, ಗಾಂಭೀರ್ಯ... ನಮ್ರತೆ, ಕರಾರುವಾಕ್ಕತೆ...ಬೆರಗು ಗೊಳ್ಳುವಷ್ಟು. ನನಗಿನ್ನೂ ಅವರ ಮಾತುಗಳು ಕಿವಿಯಲ್ಲೇ ಇವೆ. ಅರೇ! ಹರ್ಯಾಣದ ದನ-ಕುರಿಕಾಯುವ ಹಿನ್ನೆಲೆಯಿಂದ ಬಂದ ಈತನಿಗೆ ಇದೆಲ್ಲಾ ದಕ್ಕಿರುವುದಾದರೂ ಹೇಗೆ? ಎಲ್ಲಕ್ಕಿಂತ ಮಿಗಿಲಾಗಿ ಆ ಆತ್ಮವಿಶ್ವಾಸ! ಹೆಮ್ಮೆಪಡುವ ವ್ಯಕ್ತಿತ್ವ... ವಿದ್ವತ್ತು ಕೂಡ.

ಅವರು ಈ ಹೊತ್ತನ್ನು ತಾವು ರೂಢಿಸಿಕೊಂಡಿರುವ ಜ್ಞಾನಶಿಸ್ತುಗಳ ಮೂಲಕ ‘ಕ್ಲಿನಿಕಲ್ ಅನ್ಯಾಲಿಸಿಸ್’ಗೆ ಒಳಗು ಮಾಡಿದರು. ಇದು ಅವರಿಗೆ ಅವರ ‘ಅಕ್ಯಾಡೆಮಿಕ್ಸ್’ ಕೊಟ್ಟಿರುವ ಶಕ್ತಿ, ಸಾಮರ್ಥ್ಯ. ಆದರೆ... ಅವರ ಕಾಲಡಿಯೇ ಇರುವ ಮಣ್ಣಲ್ಲಿ ಮುಂದಿನ ಉಳಿವಿನ ದಾರಿಗಳೂ ಇದೆಯೆಂಬುದನ್ನು ಅವರ ‘ಅಕ್ಯಾಡೆಮಿಕ್ಸ್’ ಕಣ್ಣು ಕಾಣಿಸದಲ್ಲ! ಯಾಕೆ?... ಆದ್ದರಿಂದಲೇ ‘ಡೆಡ್ ಎಂಡ್’ಗೂ ಮಿಗಿಲಾಗಿ ಅದು ‘ಸೀಲ್ಡ್’ ಅಂತಾರಲ್ಲ ‘ಫೇಟ್ ಈಸ್ ಸೀಲ್ಡ್’ ಅರ್ಥದಲ್ಲಿ... ಅದು ಹಾಗೆ ಎನ್ನುವುದು ನನ್ನ ಗ್ರಹಿಕೆ. ಇದನ್ನು ಹೇಳುವುದಕ್ಕೆ ತಕ್ಕ ಪರಿಕರಗಳಿಲ್ಲದ ನಾನು ಪದ್ಯದ ಮೊರೆ ಹೋಗಿರುವೆ

ಟ್ರಾಫಿಕ್ ಜಾಮಿನಲಿ ಸೂರ್ಯ

ಸಿಕ್ಕಿಬಿದ್ದಿದ್ದಾನೆ ಸೂರ್ಯ
ಮಹಾನಗರದ ಟ್ರಾಫಿಕ್ ಜಾಮಿನಲಿ
ಕಕ್ಕಾಬಿಕ್ಕಿಯಾಗಿ
ಲಕ್ಷ್ಯವೇ ಇಲ್ಲ ಯಾರಿಗೂ
ಕಾರ್ಕೋಟಕ ಶಬ್ದ ಸುರಿಮಳೆ, ಮಂತ್ರಘೋಷ
ಮಡುವಾಗಿ ನಿಂತ ದಡದಿ ನಿಂತು
ಕುಂತಿ ಕನ್ಯೆ ಕರೆದಿದ್ದಾಳೆ;
ಕಂತುವ ಹೊತ್ತಿನಲ್ಲಿ.
ಹೊತ್ತುತ್ತಾ ನಿಯಾನ್ ದೀಪಗಳ ಬೂದಿಯಾಗದ ಬತ್ತಿ
ಕಣ್ಣ ಕುರುಡಾಗಿಸುತ್ತಿವೆ ಝುಳಕಿಸಿ
ಪ್ರಖಾಂಡ ಶಾಸ್ತ್ರ ಪಂಡಿತ ಸೂರ್ಯ, ಆದಿ ಆರ್ಯ
ಚಿಂತಿಸುತ್ತಿದ್ದಾನೆ ಸೆಮಿನಾರಿನಲಿ
ಮಂಡಿಸಲಿರುವ ತನ್ನ ಕಣ ಸಿದ್ಧಾಂತ,

ತತ್ವ ಪ್ರಣಾಲಿ ಸುತ್ತ.
ಅಲ್ಲಿ ಕುಂತಿ; ಇಲ್ಲಿ ಸಂತಿ
ಹೋಗುವುದು ಎತ್ತ ಕಂತುವ ಹೊತ್ತು
ಸುತ್ತ ವಾಲ್ಮೀಕ ವಾಹನ ಹುತ್ತ
ಮುತ್ತಿವೆ ಅಕ್ಷೋಹಿಣಿ ಗೆದ್ದಲ ಬಿತ್ತ.
ಮೋಡಗಳ ಮೆರವಣಿಗೆ ಹೊರತು
ಮತ್ತೇನೂ ಅಡ್ಡ ಹಾಯದ ಆಕಾಶದ ಆ ಅನಂತ ಪಥಗಳೆಲ್ಲಿ?
ಜುಜುಬಿ ಚತುರ್, ಷಟ್ಪಥಗಳು ಕೂಡಿ ವೃತ್ತ
ಯಾಕಿಂಥ ದಿಗ್ಭ್ರಾಂತ, ಅಂಧ ಕಿಷ್ಕಿಂಧ ಅಂತ
ಯೋಚಿಸುತ್ತಲೇ ಇದ್ದಾನೆ... ಬಗೆಹರಿಯದು ದ್ವಂದ್ವ
ಅತ್ತ ಕಾದಿದ್ದಾಳೆ ಕುಂತಿ
ಇತ್ತ ಸೆಮಿನಾರು ಬಾಜಾರು ಸಂತಿ
ಬಿದ್ದಿಲ್ಲ ಇನ್ನೂ ಸಿಗ್ನಲ್ಲು ಗ್ರೀನು
ಪೆಟ್ರೋಲು ಹೊಗೆಯೋ... ಆರೇಂಜು ಜ್ವರವೋ
ಇರಾಕು, ಇರಾನು, ಆಫ್ಘನ್ ಪಠಾಣ ರಥ ಕುದುರೆಗಳ
ಹೊಳ್ಳೆ ಉಗುಳ ಧಗೆಯೋ
ಕಣ್ಣುರಿ ತಡೆಯಲಾಗುತ್ತಿಲ್ಲ ಸೂರ್ಯನಂತ ಸೂರ್ಯನಿಗೂ
ಹೂತು ಹೋಗದ್ದೊಂದೇ ರಥ ಚಕ್ರ ಭಾಗ್ಯ
ಗೆದ್ದಲ ಅಕ್ಷೋಹಿಣಿಗಂತೂ
ದಿಗ್ವಿಜಯ ಯಾತ್ರೆಗಳ ರಕ್ತಫಲ ಪ್ರಾಪ್ತಿ
ಪಟಪಟನೆ ಹಾರಿವೆ ಪುಟ, ಖಿರ ಪುಟ
ಎದುರಿರುವ ಸಿಗ್ನಲ್ ಲೈಟ್ ಭಗವದ್ಗೀತಾ ಗ್ರಂಥದಲ್ಲಿ
ಕ್ಷಣಗಣನೆ ಕ್ಷೀಣಿಸಿ, ಕ್ಷೀಣಿಸಿ ಶೂನ್ಯದತ್ತಲ ನಡಿಗೆ
ಇನ್ನೇನು ಬೀಳಬಹುದು ಬೆಳಗಿ ಸಿಗ್ನಲ್ಲು ಗ್ರೀನು
ಮುಂದಿರುವ ಕವಲೋ ಟೂವೇ...
ಪಾಪ ಸೂರ್ಯನಿಗೆ ಇದಲ್ಲ ನಿತ್ಯದ ಹೈವೇ...
ಇಳಿದಿದೆ ಪದರು ಪದರು ತೆಳುಬೂದಿ ಮೋಡ
ಸುಟ್ಟ ಚಟ್ಟಗಳ ಹಿರೋಷಿಮಾ ನಾಗಸಾಕಿ
ಹಾರಿ ಕಣ್ಣವೆ ತೂರಿ ಉರಿ ಉರಿ ಕಣ್ಣುರಿ
ಪಾತಾಳಗತ್ತಲ ಮರಳ ಹುದುಲು ಮುಂದೆ ಮುಂದೆ...

ಮುಳುಗಿದ್ದಾನೆ ಸೂರ್ಯ ಚಿಂತಾಮಡುವಿನಲ್ಲಿ
ದಡದಿ ನಿಂತಿದ್ದಾಳೆ ಕುಂತಿ ಇನ್ನೂ ಕನ್ಯೆ
ಸೂರ್ಯನ ರಥ ಕುದುರೆಗಳ ಮರೀಚಿಕೆಯ ನಿರೀಕ್ಷೆಯಲ್ಲಿ
ಕರ್ಣ ಬಿಂಬದ ಗರ್ಭ ಸ್ವೀಕಾರಕೆ ತೆರೆದು
ಮತ್ತದೇ ಮಂತ್ರಘೋಷ
ಮಧುಚಂದ್ರ ಪಲ್ಲಂಗ ಚಟ್ಟ
ನವಜಾತ ಕರ್ಣ ಪಟ್ಟ
ಹೂತು ರಥಗಾಲಿ,
ಹರಿದು ಕುಂಡಲ ಕವಚ,
ಕಲಿತ ವಿದ್ಯೆ ಮರೆತು,
ಬಿಟ್ಟ ಬಾಣ ಬಿಡದಂತೆ ತಡೆದು ಮತ್ತೆ
ಹರಿಸಲು ಮೈನೆತ್ತರನು ಈ ಕುರುಕ್ಷೇತ್ರ ಕ್ಷಾತ್ರ ಭೂಮಿಗೆ.

ಘನತೆಯ ಅಸ್ತಿತ್ವಕ್ಕಾಗಿ ಹೋರಾಡುವ ಅಂತ್ಯಜನೊಬ್ಬನ ದುರಂತಗಾಥೆ ಹೀಗೆ ತಾನೆ ಕೊನೆಗೊಳ್ಳುವುದು? ಅದೂ ಹುಟ್ಟಿನಿಂದ ಕರ್ಣ ಒಡಹುಟ್ಟಾಗಿದ್ದರೂ ಇಂತಹ ದುರ್ಗತಿ ತಪ್ಪುವುದಿಲ್ಲ ಎಂದ ಮೇಲೆ ಅಂತ್ಯಜರಾಗಿಯೇ ಹುಟ್ಟಿದ ಏಕಲವ್ಯರಂಥವರ ಗತಿ ಇನ್ನೇನಾಗಬೇಡ? ಆಗ ಏಕಲವ್ಯ ಸಮಷ್ಟಿಯನ್ನು ಪ್ರತಿನಿಧಿಸಲಾಗದ ಪರಂಪರೆಯನ್ನು ಮುಂದೊಯ್ಯಲಾಗದ ವೈಯಕ್ತಿಕ ಹೆಗ್ಗುರುತಿನಲ್ಲೇ ಹೂತು ಹೋಗುತ್ತಾನೆ. ಕನ್ನಡದ ಮಣ್ಣನ್ನು ಡಿ.ಆರ್.ನಾಗರಾಜ್, ದೇವನೂರ ಮಹಾದೇವ ಹಾಗೂ 'ಸರ್ವೋದಯ' ಪಕ್ಷಗಳ ಗುರುತಿನಿಂದಷ್ಟೆ ಒಳಗೆ ತೆಗೆದುಕೊಂಡಿರುವ ಯಾದವ್‌ರಿಗೆ, ಅವರ 'ಪೊಲಿಟಿಕಲ್ ಕರೆಕ್ಟ್‌ನೆಸ್' ಇಲ್ಲದ ನಡೆಗಳನ್ನಾಗಲಿ, ರೈತ-ದಲಿತ ಕಾಂಬಿನೇಷನ್‌ನ ಸರ್ವೋದಯ ಪಕ್ಷದ ಅಪಕ್ವ ಮೆನುಗಳು ಸೃಷ್ಟಿಸಿರುವ ಅಜೀರ್ಣ, ಆಮಶಂಕೆಗಳ ಬಗ್ಗೆಯಾಗಲಿ ತಿಳುವಳಿಕೆಗಳಿರಲು ಸಾಧ್ಯವಿಲ್ಲ. ಆದ್ದರಿಂದಲೇ ಯೋಗೇಂದ್ರ ಯಾದವ್‌ರ ತಾತ್ವಿಕ ಶಾಲೆಯಾಗಿರುವ ಆಶೀಶ್ ನಂದಿ ಸ್ಕೂಲಿನ ಬಗ್ಗೆ ನನಗೆ ಆರಂಭದಿಂದಲೂ ಅನೇಕ ತಕರಾರುಗಳಿವೆ.

ಈ ಶಾಲೆಯ ತಾತ್ವಿಕತೆಯ ಆಚೆಗೂ ಡಿ.ಆರ್ ಮತ್ತು ಮಾದೇವ್ ಅವರು ಈ ಮಣ್ಣಿಗೆ ಕಳಸದಂತೆ ಸಲ್ಲುವವರೇ ಆಗಿದ್ದಾರೆ. ಆದ್ದರಿಂದ ಇಂತಹ ಹೆಗ್ಗುರುತುಗಳ ಆರಾಧನೆಗಿಂತ ಮರು ತಿರುಗಿ ಹಿಂದಣ ಹೆಜ್ಜೆಗಳತ್ತ ಕಣ್ಣು ಹಾಯಿಸಿ ನಮ್ಮೊಳಗೇ ನಾವು ನೋಡಿಕೊಳ್ಳುವುದು ಸೂಕ್ತ. ಆಗ ಯಾದವ್‌ರು 'ಡೆಡ್‌ಎಂಡ್'ಗೆ ಕೊಡುವ ಕಾರಣಗಳಲ್ಲಿ ಸೃಜನಶೀಲ ಪರಿಕರಗಳ ನಿರ್ಮಾಣ ಸ್ಥಗಿತಗೊಂಡಿರುವುದೂ ಒಂದೆಂಬುದಕ್ಕೆ ನ್ಯಾಯ ಸಲ್ಲುತ್ತದೆ. ಇಂತಹ ಬೌದ್ಧಿಕ ಕೊರತೆಯನ್ನು ನೀಗಿಸಿಕೊಳ್ಳುವ ಅನುಭಾವಿಕ ನೆಲೆಗಟ್ಟು ಕಟ್ಟುವ ಅವರ ಅಕ್ಯಾಡೆಮಿಕ್ ಬೌದ್ಧಿಕತೆ ಸಾರಾಸಗಟು ನಿರಾಕರಿಸಿರುವ ನಿರ್ಗತಿಕ ನೆಲೆಗಳನ್ನು ಕಣ್ಣಿಗೊತ್ತಿಕೊಂಡು ನೋಡುವ ರೀತಿಯಿಂದ. ಈ ರೀತಿಯೊಂದನ್ನು ದಕ್ಕಿಸಿಕೊಳ್ಳುವುದಕ್ಕಾಗಿ 'ಯು ಟರ್ನ್' ತೆಗೆದುಕೊಳ್ಳುವುದಷ್ಟೇ ಇಂದು ನಮಗಿರುವ ದಾರಿ. ಇದನ್ನೇ 'ಡಿಲರ್ನಿಂಗ್' 'ನೋಲರ್ನಿಂಗ್' ಮುಂತಾಗಿ ಅನ್ನುತ್ತಾರೆ ಅಂದುಕೊಂಡಿದ್ದೇನೆ. 'ಯಾದವ್ ಜೀ... ಸರಿಸುಮಾರು ಶೇ. 30ರಷ್ಟಿರುವ ನಿಮ್ಮ ಜಾತಿ ಸಂಖ್ಯಾಬಲವೊಂದು ನಿಮ್ಮ ಬೆನ್ನಿಗಿಲ್ಲದೆ ಹೋಗಿದ್ದರೆ... ಇಂತಹ ಆತ್ಮವಿಶ್ವಾಸ ನಿಮಗೆ ಇನ್ನೊಂದರಿಂದ ದಕ್ಕುವ ಸಾಧ್ಯತೆ ಇತ್ತೇ... ಅಥವಾ ಪಶುಪಾಲಕ ಸಮುದಾಯಗಳು ಕ್ಷತ್ರಿಯರೊಂದಿಗೆ ವೈವಾಹಿಕ ಸಂಬಂಧಗಳನ್ನು ಬೆಳೆಸುವುದರ ಮೂಲಕ ಆರ್ಯೀಕರಣ ಪ್ರಕ್ರಿಯೆಗೆ ಈಡಾಗದಿದ್ದಲ್ಲಿ ಇಂತಹ ಸಾಮಾಜಿಕ ಮೇಲ್ಮುಖ ಚಲನೆ ಸಾಧ್ಯವಾಗುತ್ತಿತ್ತೆ? ಪ್ರಾತಿನಿಧೀಕರಣ ವ್ಯಕ್ತಿಗತ ಕುರುಹುಗಳು ಬಹುದೊಡ್ಡ 'ಬಲಿ'ಗಳು ಎಂಬುದಲ್ಲವೇ ಇದರ ಪಾಠಾಂತರ. ಇದಿಷ್ಟೋ ಇದೆಲ್ಲದರ ಆಚೆಗೆ ನೇಣು ಕುಣಿಕೆಗಳಿಗೆ ಕೊರಳೊಡ್ಡದಂತೆ ಕಾಪಾಡಿಕೊಳ್ಳಬೇಕಾದ ಸಾಧ್ಯತೆಗಳ ಹುಡುಕಾಟ ಇದಕ್ಕೆ ಮೀರಿದ ಜೀವಂತ ದರ್ಶನಗಳ ತುರ್ತನ್ನ ಕೇಳುತ್ತದೆ.. ಅನಿಸುವುದಿಲ್ಲವೇನು ನಿಮಗೂ ಹೀಗೆ?

-ಕೋ.ರಾ

ಕಣ್ಣಪ್ಪನ ಸಾವು ಮತ್ತು 'ಮ್ಯಾನ್ ಆಫ್ ಮಾ

ಕಣ್ಣಪ್ಪ ತೀರಿಕೊಂಡ!

ಹೀಗೆಂದ ಕೂಡಲೆ ಯಾವ ಕಣ್ಣಪ್ಪ!?

ಬೇಡರ ಕಣ್ಣಪ್ಪನೋ? ಬೆಜವಾಡ ಕಣ್ಣಪ್ಪನೋ? ಬೆಣ್ಣೆ ಕಣ್ಣಪ್ಪನೋ? ಗೊಣ್ಣೆ ಕಣ್ಣಪ್ಪನೋ?

ಯಾರೇ ಇರಲಿ ಈ ಕಣ್ಣಪ್ಪನ ಸಾವು ಮುಖ್ಯ. ನಮಗೆಲ್ಲರಿಗೂ ಸುತ್ತಿಕೊಂಡಿರುವ ಸೂತಕ. ಕಣ್ಣಪ್ಪ ಯಾರೆಂಬುದನ್ನ ಆತ ಮಣ್ಣಾದ ಬಗೆಯೇ ಹೇಳುತ್ತದೆ.

ನಮ್ಮ ಜೀಪು ಸುಡುಗಾಡಿನ ಬಳಿ ಬರುವಾಗ ಅಲ್ಲಿ ಕಣ್ಣಪ್ಪ ಕುಡಿದು ಎಲ್ಲೆಲಕಲು ಬಿದ್ದಿದ್ದಾನೆ! ಪಂಚೆ, ಚೆಡ್ಡಿಗಳನ್ನೂ ಇರಬೇಕಾದ ಜಾಗದಲ್ಲಿ ಇರಗೊಡಿಸದೆ. ಅದೂ ದಾರಿಗೆ ಅಡ್ಡವಾಗಿ. ಒಂದು ಕ್ಷಣಕ್ಕೆ ಕಣ್ಣಪ್ಪ ಸತ್ತಿಲ್ಲವೆಂದೇ ಅನಿಸಿತು. ಈ ಸುಡುಗಾಡಲ್ಲಿ ಚಟ್ಟವನ್ನು ಇಳಿಸಿ, ತಿರುವೂ-ಮರವೂ ಮಾಡಿ, ಒಂದಷ್ಟು ಹಿಂಡಿಕೂಳು ಇಟ್ಟು, ಮುಂದೆ ಸಾಗಿ ಹೋಗಿರುವುದನ್ನ ಚೆಲ್ಲಿದ ಹೂಗಳೇ ಸಾಕ್ಷಿಯಾಗಿ ಗೋಣಗುತ್ತಿವೆ. ಆದರೂ ಅವನಿಗಾಗಿ ತೋಡಿರುವ ಗುಳಿಯ ಒಳಗೆ ಮಲಗದೆ ಇದೇಕೆ ಹೀಗೆ ಶಾಲೆಗೆ ಚಕ್ಕರ್ ಹೊಡೆದು ಬಂದ ಪೋಲಿ ವಿದ್ಯಾರ್ಥಿಯಂತೆ ಕುಡಿದು ಮಲಗಿದ್ದಾನೆ! ಹೀಗೆ ಫೇಡ್ಔಟ್ ಫೇಡ್ಇನ್‌ಗಳಲ್ಲಿ ಕಣ್ಣೆದುರಿನದನ್ನು ಜಾಲಾಡಿಸುತ್ತಿರುವಾಗ ಅದು ಕಣ್ಣಪ್ಪ ಅಲ್ಲವೆಂದು ಅವನ ಕುಲಬಳ್ಳಿ ಅಂಜಲಿ ಹೇಳಿದಳು. (ಮಸಣ ದಾಟಿ ಬರುವಾಗ ಅದು ಕಣ್ಣಪ್ಪನ ಅಣ್ಣನೆಂಬ ಖಚಿತ ಸುದ್ದಿ ತಂದಿದ್ದಳು) ಕಣ್ಣಪ್ಪ ಎಂದರೆ ಇದು. ನಿತ್ಯ ಚಿತ್ರ. ಕುಡಿದು ರಾದ್ಧಾಂತ ಮಾಡಿಕೊಂಡು ಬೀದಿಯಲ್ಲಿ ಬಟ್ಟೆ ಬಿಚ್ಚಿ ಜಗಳ ಕಾಯುವ ಚಿತ್ರ ಸೀಕ್ವೆನ್ಸುಗಳು...



ಕೋಟಿಗಾನಹಳ್ಳಿ ಊರ ದನಗಳ ಗೋವಿಂದಪ್ಪ-ತಾಯಮ್ಮ ದಂಪತಿಗಳ ಪುತ್ರರತ್ನ ಕಣ್ಣಪ್ಪ, ಲೋಕದ ಕಣ್ಣೆದುರು ಕಾಣಿಸಿದ್ದು 'ಹರಟಿ ಮಲಪ್ರಕರಣ'ದಿಂದ. ಬೆಂಡಿಗೇರಿಯ ಬೆನ್ನಲ್ಲೇ ಇದು ನಡೆದದ್ದರಿಂದ ಬೆಂಡಿಗೇರಿಗೂ ಮೇಲಾಗಿ ಇದು 'ನ್ಯೂಸ್‌ವರ್ತಿ' ಸ್ಟೋರಿಯಾಗಿ ಪ್ರಜಾವಾಣಿಯ ಮುಖಪುಟದಲ್ಲಿ ಐದು ಕಾಲಂ ಬೋಲ್ಡ್ ಹೆಡ್ಡಿಂಗ್‌ನ ಸುದ್ದಿಯಾಗಿತ್ತು. ಕರ್ನಾಟಕ ಕುಖ್ಯಾತಗೊಂಡಿರುವುದು ದಲಿತರಿಗೆ ಮಲ ತಿನ್ನಿಸಲಾದ ಪ್ರಕರಣಗಳಿಂದ. ಮೊದಲ ಪ್ರಕರಣ ಬೆಳಗಾವಿ ಜಿಲ್ಲೆಯ ಬೆಂಡಿಗೇರಿಯಲ್ಲಿ ನಡೆದಿದ್ದರೆ, ಕೋಲಾರ ಜಿಲ್ಲೆಗೆ ಖ್ಯಾತಿಯನ್ನೋ ಕುಖ್ಯಾತಿಯನ್ನೋ ತಂದದ್ದು ಆ ನಂತರದ್ದು ಎರಡನೆಯದು. ಇದು ಹರಟಿ ಮಲ ಪ್ರಕರಣದವೆಂದು ಚರಿತ್ರೆಯಲ್ಲಿ ಈಗಾಗಲೆ ದಾಖಲುಗೊಂಡಿದೆ. ಓದಿದ ತಕ್ಷಣವೇ ಜಿಗುಪ್ಸೆಯಾಯಿತು. ಬೈಲೈನಲ್ಲಿ ಮಿಂಚಿದ್ದ ವರದಿಗಾರ ಪೊಲೀಸ್ ಎಫ್.ಐ.ಆರ್‌ನ್ನೇ ಅಕ್ಷರಶಃ ಸುದ್ದಿ ಮಾಡಿದ್ದ. ಕನಿಷ್ಠ ಕೌಂಟರ್‌ಚೆಕ್ಕೂ ಮಾಡದೇನೆ. ಮುಂದಾಗಬಹುದಾದ ಪರಿಣಾಮಗಳನ್ನು ಊಹಿಸಿಯೇ ನಾನು ಆತನಿಗೆ ದೂರವಾಣಿ



ದೇವರೇ... ಈ ಹೊತ್ತು. ಎಂಥ ಇಕ್ಕಟ್ಟಿನ ಚಾರಿತ್ರಿಕ ಸಂಧರ್ಭಗಳು ಎದುರಿಗಿವೆ. ಒಂದು ಕಡೆ 'ಮಡೇಸ್ನಾನ'ದ ವ್ಯಾಸಪೀಠ ಠೇಂಕಾರ, ದಾಸಕೂಟದ ಆತ್ಮಗೌರವವನ್ನೂ 'ಉಚಿಷ್ಠ' ಪಟ್ಟಿಗೆ ಸೇರಿಸಿ ಗೆಲುವಿನ ನಾಚಿಕೆಯಿಲ್ಲದ ನಗೆ ಕೇಕೆಗಳ ಅಬ್ಬರದಲ್ಲಿ ಬೀಗುತ್ತಿದೆ. ಇನ್ನು ಯಾವುದಾದರೂ ಇಷ್ಯೂ ಸಿಕ್ಕಿದರೆ ಸಾಕಪ್ಪ ಎಂಗೇಜಾಗಿ ವಾರಕಾಲ ಹೇಳಿಕೆ, ಪ್ರತಿಹೇಳಿಕೆ, ಪ್ರತಿಭಟನೆ, ವಿಚಾರ ಸಂಕಿರಣ... ಹೀಗೆ ಕಾರ್ಯಕ್ರಮಗಳ ಸರಮಾಲೆ ಹೆಣೆಯುತ್ತಾ ಅದನ್ನೇ ನಿಜವಾದ 'ಪೊಲಿಟಿಕಲ್ ಆಕ್ಟಿವಿಸಂ' ಎಂದು ನಂಬಿರುವ ನಂಬುವುದಕ್ಕೆಂದೇ ಎವಿಡೇನ್ಸ್ ಕ್ರಿಯೇಟ್ ಆಗುತ್ತಾ ಹೋಗಲಿ ಎನ್ನುವ ರೀತಿಯ ಚಳುವಳಿ ಪರಂಪರೆಗಳ ಸಂತೃಪ್ತಿ ಹಕ್ಕುದಾರಿಕೆ. ಯಾವ ಅವಮಾನವನ್ನು ನಾವು ನಿತ್ಯ ಸಮಷ್ಟಿ ಅವಮಾನವೆಂದು ಭಾವಿಸಬೇಕಿತ್ತೋ ಅಂತದೆಲ್ಲ ಅವರಿಗೆ ರೋಮಕ್ಕೆ ಸಮಾನ. ಹಿರಿತನದ ಘನತೆಯ ಎಳೆಗಳು ಕಣ್ಣೆದುರಿಗಿದ್ದರೂ ಎಡಗಾಲ ಎಕ್ಕಡದಂತೆ ಕಾಣುವುದೇ ಅವರ ಸ್ವಾಭ ತತ್ವ ಪ್ರಣಾಲಿ. ಇಂತಲ್ಲಿ ಕರ್ಪೂರ ಉ ಉರಿದು ಬತ್ತಿ, ಎಣ್ಣೆಗಳೊಂದೂ ಬೆಳಗಿ, ಕರಗಿ, ಉರಿದು, ಬೂದಿಯ ಕು ಇಲ್ಲದಂತೆ, ಕಾಣದಂತೆ 'ಮಾಯವಾ ನಮ್ಮ ಶಿವ... ಕೈಲಾಸ ಕಂಡುಕೊಂಡ ಎಂಬಂತಾಗಿರುವ ಈ ಹೊತ್ತು... 'ಕು ಭವಿಷ್ಯದಲ್ಲಿ ಬದುಕಿಸಬಹುದೆಂದು ಹೊರಟಿರುವ ಗುರುತು ರಾಜಕಾ ವಕಾಲತ್ತಿಗರು ಉತ್ತರಿಸಬೇಕಾದ ಪ್ರಶ್ನೆಗಳಿವೆ. ಅಂಥ ಒಂದು ಪ್ರಶ್ನೆ, ಕಣ್ಣ

ಸಿನಿಮಾವೂ...



ಕಣ್ಣಪ್ಪ ಇಂದು ತೀರಿಕೊಂಡಿದ್ದಾನೆ. ಕೊನೇ ಪಕ್ಷ ಜ್ಯೂಲಿಯಸ್ ಸೀಸರ್‌ನಿಗೆ ಕೊನೆ ತಿವಿತಕ್ಕೆ ಒಬ್ಬ ಬ್ರೂಟಸ್ ಬೇಕಲ್ಲ. ಸೀಜ್ಜರನ ಸ್ನೇಹಕ್ಕಿಂತ ಅಂದು ಬ್ರೂಟಸ್ ಮುಂದಿದದ್ದು ಅವತ್ತಿನ ಸಮುಷ್ಟಿ. ಸಮುದಾಯದ ಹಿತ ಬಯಸುವುದಕ್ಕೆ ಎದೆಗಾರಿಕೆ ಇದ್ದವರು ಮಾತ್ರವೇ ಬ್ರೂಟಸ್ ಆಗುವುದಕ್ಕೆ ಲಾಯಕ್ಕಾದವರು. ನಾನು ಹರಟಿ ಮಲಪ್ರಕರಣದಲ್ಲಿ ...ಲ ತಿನ್ನಿಸಿಕೊಂಡವನಾದ್ದರಿಂದ... ನನ್ನ ...ತಿಗೆ ಕಿವಿಗೊಡುವ ಅಗತ್ಯವಿಲ್ಲವಾದರೂ ...ಷ್ಟ ನನ್ನೊಳಗಿನ ಆ ತಿಂದ ಮಲದ ...ರುಹುಗಳನ್ನು ಹೊರ ಹಾಕುವುದನ್ನು ...ತೆಯದಷ್ಟು ಘನತೆಯ ಡಾವಳಯನ್ನು ...ಲ್ಲರಿಂದಲೂ ನಿರೀಕ್ಷಿಸುತ್ತೇವೆ. ಈ 'ಹೊತ್ತಿ'ಗೆ ...ವೇ ನನ್ನ ತುತ್ತು... ಕೊಂಚವಾದರೂ ...ನತೆಯೊಂದಿಗೆ ಬದುಕುವುದಕ್ಕೆ.

-ಕೋಟಿಗಾನಹಳ್ಳಿ ರಾಮಯ್ಯ

ಕರೆಮಾಡಿ ನನ್ನ ಅಸಮಾಧಾನವನ್ನು ವ್ಯಕ್ತಪಡಿಸಿದೆ. ಆಗ ನಾನೊಂದು ಜಿಲ್ಲಾ ಪತ್ರಿಕೆಯ ಪ್ರಾಯೋಗಿಕ ಸಂಚಿಕೆಗಳನ್ನು ರೂಪಿಸುವ ಹೊಣೆ ಹೊತ್ತಿದ್ದೆ.

ನಾನು ಆ ಪತ್ರಿಕಾ ಕಚೇರಿ ತಲುಪಿದ ಕೂಡಲೇ ಅದಾಗಲೆ ಹತ್ತಾರು ಜನ ದಲಿತ ವಿದ್ಯಾರ್ಥಿ ಒಕ್ಕೂಟದ ಹುಡುಗರಿಂದ ಅದು ತುಂಬಿಹೋಗಿತ್ತು. ಅವರ ಮುಖಗಳಲ್ಲಿ ನಿರ್ಧಾರವೊಂದು ಉರಿಯುತ್ತಿತ್ತು. ಆ ಹೊತ್ತು ದ.ಸಂ.ಸದ ಬಹುಮುಖ್ಯ ನಾಯಕರಾಗಿದ್ದ ಸಿ.ಮುನಿಯಪ್ಪ ಆ ಗುಂಪು ತೆಗೆದುಕೊಂಡಿದ್ದ ನಿರ್ಧಾರವನ್ನು ತಿಳಿಸಿದರು. ಇವರು ಮಲತಿನ್ನಿಸಿದ 'ಆರೋಪಿ'ಗೇನೆ ಮಲ ತಿನ್ನಿಸಿ ಬರುವ ಪಣ ತೊಟ್ಟಿದ್ದರು. ನಾನು "ಅದು

ಪುಟ 14ಕ್ಕೆ...

ಕಣ್ಣಪ್ಪ ಯಾಕೆ ಹೀಗಾದ...?

ಕಣ್ಣಪ್ಪ ನಿಜಕ್ಕೂ ಒಳ್ಳೆಯವರ ಲಿಸ್ಟಿಗೆ ಸೇರುವವನು; ಕುಡಿತ ಮತ್ತು ಆ ಸಂಬಂಧದ ರಗಳೆ ರಾದ್ಧಾಂತಗಳನ್ನು ಹೊರತುಪಡಿಸಿದಲ್ಲಿ. ಅವರ ತಂದೆ ಗೋವಿಂದಪ್ಪ ಮತ್ತು ತಾಯಮ್ಮ ಊರ ದನ ಕಾಯುತ್ತಿದ್ದರು. ಗೋವಿಂದಪ್ಪನಿಗೆ ಊರ ದನ ಕಾಯುವುದನ್ನು ಬಿಟ್ಟು ಬೇರ್‍ಯಾವುದೂ ಬೇಕಾಗಿಯೇ ಇರಲಿಲ್ಲ. ಕುಸುಮಬಾಲೆಯ ಪಕಾಳಯ್ಯ ನೆನಪಾದಾಗಲೆಲ್ಲ ಈ ಗೋವಿಂದಪ್ಪನೇ ಪ್ರತ್ಯಕ್ಷವಾಗುತ್ತಾನೆ! ಇನ್ನು ತಾಯಮ್ಮನೋ ತನ್ನ ಬತ್ತಿ ಬರಡಾದ ಎದೆ ಮುಚ್ಚಲು ಸೀರೆಯ ಸೆರಗನ್ನು ಮಾತ್ರ ಸುತ್ತಿಕೊಳ್ಳುತ್ತಿದ್ದವಳು. ಬೆಂದಬೂದಿಯಲ್ಲಿ ಹೊರಳಿಸಿ ತಂದು ನೆಲದ ಮೇಲೆ ನಡೆಸುತ್ತಿರುವಂತೆ; ಸದಾ ಪೆಚ್ಚುನಗೆ ಅಥವಾ ಬೈಗುಳ ತುಟಿಗಳಲ್ಲಿ. ಇವರ ಮೂರೋ ನಾಲ್ಕೋ ಮಕ್ಕಳಲ್ಲಿ ಈ ಕಣ್ಣಪ್ಪನೂ ಒಬ್ಬ....

ಒಂದುಸಾರಿ ನಮ್ಮೂರಿನ ಹಬ್ಬಕ್ಕೆ ಉಟ್ಲುಮರ ನಿಲ್ಲಿಸಿ ತುದಿಯಲ್ಲಿ ಕೊಡೆಯಂತೆ ತಿರುಗುವ ಗೋಳದ ಮಾದರಿಯ ಮರದ ಗೂಡನ್ನು ಫಿಕ್ಸ್ ಮಾಡಿದ್ದರು. ಮರ ಏರುವುದಕ್ಕೆ ಅಲ್ಲಲ್ಲಿ ಗೇಣುದ್ದದ ಕಟ್ಟಿಗೆಯ ಮೆಟ್ಟಿಲು. ಆ ಮೆಟ್ಟಿಲು ಹತ್ತಿ ಹೋಗಿ ಆ ಗೂಡಿನಲ್ಲಿ ಎದುರಾ ಬದುರಾ ಕೂತು ಧೈರ್ಯವಂತರೆನಿಸಿಕೊಂಡವರು ಕಾಲ್ಬಲದ ಮೇಲೆ ಆ ಗೂಡನ್ನು ಸುತ್ತಿಸುತ್ತಿದ್ದರು. ಹಾಗೂ ಹಗ್ಗಕ್ಕೆ ಕಟ್ಟಿದ ಟೆಂಕಾಯಿ ಕಟ್ಟಿರುತ್ತಿದ್ದ ಹುಟ್ಟನ್ನು ಇಳಿಬಿಡುತ್ತಿದ್ದರು. ಕೆಳಗಿರುವವರು ದೊಣ್ಣೆಯಿಂದ ಅದನ್ನು ಹೊಡೆಯುತ್ತಿದ್ದರು. ಹೊಡೆಯಲಾಗದಂತೆ ಹೊಂಚಿ, ವಂಚಿಸುತ್ತಾ ಮೇಲಿನವರು ಕಾಯಿ ಇಳಿಬಿಡುವುದೂ ಇನ್ನೇನು ದೊಣ್ಣೆ ಏಟು ಬೀಳುತ್ತದೆ ಎನ್ನುವಾಗ ಮೇಲೆ ಎಳೆದುಕೊಳ್ಳುವುದನ್ನೂ ಮಾಡುತ್ತಿದ್ದರು. ಇದೊಂದು ಮೋಜಿನ ಆಟ.

ಹಬ್ಬಕ್ಕೆ ಇನ್ನೂ ಕೆಲವು ದಿನಗಳು ಬಾಕಿ ಇದ್ದವು. ಅಂಥ ಒಂದು ದಿನ ಸಂಜೆ ಮಬ್ಬುಗತ್ತಲು ಮುಸುಕುವಾಗ ಗೌಣ್ಣೋರ ಸೀನಪ್ಪ ತನ್ನ ತಮ್ಮನಾದ ಕರೇಗೌಡನನ್ನೂ ಇತರರನ್ನೂ ಗ್ಯಾಂಗ್ ಕಟ್ಟಿಕೊಂಡು ಕಣ್ಣಪ್ಪನ ತಲಾಷ್‌ನಲ್ಲಿದ್ದರು. ಯಾರೋ ಅವನು 'ಉಟ್ಲು ಮರ' ಏರುತ್ತಿದ್ದುದಾಗಿ ತಿಳಿಸಿದರು. ಗ್ಯಾಂಗ್ ಅಲ್ಲಿಗೆ ಧಾವಿಸಿತು. ಕಲ್ಲು ಬೀರುವುದಾಗಿ ಬೆದರಿಸಿ ಕೆಳಗಿಳಿಸಿ ಥಳಿಸಿದರು. ನಾನು ವಯಸ್ಸಿನಲ್ಲಿ ಚಿಕ್ಕವನಾದ್ದರಿಂದ ಅವರು ಹೊಡೆಯುವುದಕ್ಕೆ ಹೇಳುತ್ತಿದ್ದ ಕಾರಣ ಅರೆಬರೆ ಅರ್ಥವಾಗಿತ್ತು. ಆ ಪ್ರಕಾರ ಕಣ್ಣಪ್ಪ ಏನೋ ಒಂದು ಮಾಡಬಾರದ್ದನ್ನ ಮಾಡಿದ್ದ. ಕರೇಗೌಡ ಮತ್ತು ಕಣ್ಣಪ್ಪ ದನಮೇಯಿಸಲು ಹೋಗಿದ್ದಾಗ ಜಗಳ ಕಾಯ್ದು ಕೆಳಗೆ ಬೀಳಿಸಿಕೊಂಡು ಅವನ ಬಾಯಿಗೆ ಇಡಬಾರದ್ದೇನನ್ನೋ ಇಡಲು ಹೋಗಿದ್ದನಂತೆ.

ಈ ಇಡಬಾರದ್ದೇನೋ ಅಂದಿದ್ದೇನಲ್ಲ, ಅದೇ ನನಗೆ ಆಗ ಅರ್ಥವಾಗದೆ ಹೋದದ್ದು. ಮುಂದೆ ಅವನ ವಯಸ್ಸಿನ ಹುಡುಗರೆಲ್ಲಾ ಡಿಮ್ಯಾಂಡ್ ಮಾಡುವಾಗ ಅವನು ಅದನ್ನೇ ಎಕ್ಸಿಬಿಷನ್‌ಗೆ ಇಡುತ್ತಿದ್ದುದರಿಂದ ಅದು ಏನೆಂದು ಅರ್ಥವಾಗತೊಡಗಿತ್ತು. ಹೀಗೆ ಬಾಲ್ಯದ



ತನ್ನ ವಯಸ್ಸಲ್ಲದ ವಯಸ್ಸಿನಲ್ಲಿ ಇತರರ ಕಿಶೋರಸಹಜ ಕ್ರೌರ್ಯಕ್ಕೆ ಬಲಿಯಾಗಿ... ಮನೋವಿಕಾರಕ್ಕೆ ಒಳಗಾಗಿದ್ದ. ಮುಂದೆ ಬೆಳೆದು ದೊಡ್ಡವನಾಗುತ್ತಾ... ಕುಡಿತದಿಂದ ಇದನ್ನು ನೀಗಿಸಿಕೊಳ್ಳಲು ನೋಡಿದ. ಅದು ಮತ್ತಷ್ಟು ನಿರ್ಲಜ್ಜತನಕ್ಕೆ ತಳ್ಳಿತೆ ಹೊರತು ವಿಕಾರದಿಂದ ಮುಕ್ತನನ್ನಾಗಿಸದೆ ಹೋಯಿತು.

ಈ ನಿರ್ಲಜ್ಜತೆಯನ್ನೇ ಸಮಯಸಾಧಕರು ತಮ್ಮ ಅಸ್ತ್ರ ಮಾಡಿಕೊಳ್ಳುತ್ತಿದ್ದದ್ದು. ಯಥೇಚ್ಚ ಕುಡಿಸಿ ಹಗೆಗಳ ಮನೆಯಂಗಳಕ್ಕೆ ದೂಡುತ್ತಿದ್ದರು. ಅಲ್ಲಿ ಆತ ನೆಪ ಮುಂದಿಟ್ಟು ಇಡೀ ರಾತ್ರಿ ಕೆಟ್ಟ ಬೈಗುಳಗಳ ಮಳೆ ಸುರಿಸುತ್ತಿದ್ದ. ಆ ಇತರರು ಮಾಡುತ್ತಿದ್ದುದ್ದನ್ನೇ ಹರಟಿ ಮಲಪ್ರಕರಣದಲ್ಲಿ ಸ್ಥಳೀಯ ದಲಿತ ನಾಯಕರೂ ಕೂಡ ಮಾಡಿದ್ದು. ಹರಟಿಯ ಎರಡು ಮನೆಗಳ ಹಗೆತನದ ನಡುವೆ ಈ ಮೂರ್ಖ ಕಣ್ಣಪ್ಪ ದಾಳವಾಗಿದ್ದ. ಅನಂತರ


ಪುಟ 19ಕ್ಕೆ...

ಪುಟ 13ರಿಂದ

ನಿಮಗೆ ಬಿಟ್ಟಿದ್ದು ಆದರೆ 'ಪ್ರಜಾವಾಣಿ' ವರದಿಯೊಂದರಿಂದಲೇ ಯಾವುದನ್ನೂ ತೀರ್ಮಾನಿಸಬಾರದೆಂದೂ ಕಣ್ಣಪ್ಪ ಮಹಾಶಯ ನನ್ನ ಸೋದರಮಾವನೆಂದೂ ಆತನನ್ನು ಚಿಕ್ಕಂದಿನಿಂದಲೂ ನೋಡುತ್ತಾ ಬಂದಿರುವುದಾಗಿ ಹಾಗೂ ಒಬ್ಬ ಪತ್ರಕರ್ತನಿಗೆ ಸಾಧ್ಯವಿರುವ 'ಬಿಟ್ವೀನ್ ದಿ ಲೈನ್ಸ್' ಓದಿನಿಂದಲೇ ಇದು ಈ ವರದಿ ಹೇಳುವಂತೆ ಖಂಡಿತ ಇರಲಾರದೆಂದೂ, ಯಾವುದಕ್ಕೂ ಖುದ್ದು ಅಲ್ಲಿಗೇ ಹೋಗಿ ಅವರವರದೇ ಕಣ್ಣು ಕಿವಿಗಳ ಮೂಲಕ ನಡೆದದ್ದನ್ನು ಗ್ರಹಿಸಿ ತೀರ್ಮಾನಿಸುವಂತೆ ಹೇಳಿದೆ. ಅವರು ಎದ್ದು ಹೊರಟರು. ಅಂದು ಯಾವ ಕಾರಣಕ್ಕೋ ಏನೋ ದೇವನೂರ ಮಾದೇವರೂ ಕೋಲಾರಕ್ಕೆ ಬಂದವರಾಗಿದ್ದು ಅವರಿಗೆ ತುರ್ತು ಇದ್ದದ್ದರಿಂದ ಅಂದೇ ಅವರ ರಿಟರ್ನ್ ಜರ್ನಿಯೂ ಆಗಿತ್ತು.

ಮುಂದೆ ಒಂದೆರಡು ದಿನಗಳ ನಂತರ ಪತ್ರಿಕೆಗಳಲ್ಲಿ ಇನ್ನೊಂದು ದಲಿತ ಬಣದವರ ಆರೋಪ ಸುದ್ದಿಯಾಗಿತ್ತು. ಆ ಪ್ರಕಾರವಾಗಿ "ಘಟನೆಯ ಸತ್ಯಾಸತ್ಯತೆಯನ್ನು ಇನ್ನೂ ಮನವರಿಕೆ ಮಾಡಿಕೊಳ್ಳಬೇಕಾಗಿದೆ" ಎಂದ ಬಣವನ್ನು ಈ ಬಣ ಹೀನಾಮಾನ ಹೀಗಳೆದು 'ಅವರು ಮಲ ತಿನ್ನಿಸಿಕೊಂಡ ಪ್ರಕರಣವನ್ನು ಮುಚ್ಚಿಹಾಕುವುದಕ್ಕೆ 'ದುಡ್ಡು ತಿಂದಿ'ದ್ದಾರೆ ಎಂದು ಉಗ್ರವಾಗಿ ಖಂಡಿಸಿದ್ದರು. ಈ ದಲಿತ 'ಉಗ್ರ'ವಾದದ ಪ್ರಭಾವದಿಂದಾಗಿ ಗೆಳೆಯ ದ್ವಾರಕಾನಾಥ್ ಲಂಕೇಶ್‌ಪತ್ರಿಕೆಯಲ್ಲಿ ಸ್ಫೋಟಕ ಸಾಕ್ಷಾತ್ ವರದಿ ನೀಡಿದರು. ಅದರಲ್ಲಿ ಮೊದಲ ಬಣದವರಿಂದ ಜೀವಭಯ ಇರುವುದರಿಂದ ಕಣ್ಣಪ್ಪನನ್ನು ಗುಪ್ತ ಸ್ಥಳದಲ್ಲಿ ಸಂದರ್ಶಿಸಬೇಕಾಯಿತೆಂದೂ, ಹಾಗೂ ಅದನ್ನು ಸಾಕ್ಷೀಕರಿಸಲು ನೀಲಗಿರಿ ತೋಪಿನ ನಡುವೆ ನಡೆಸಿದ ಸಂದರ್ಶನದ ಫೋಟೋಗಳನ್ನೂ ಪ್ರಕಟಿಸಿದ್ದರು! ಆದರೆ ಅದು ನಿಜವಾಗಿರಲಿಲ್ಲ. ಅವನನ್ನು ಆ ಇನ್ನೊಂದು 'ನ್ಯಾಯಪರ'ಬಣ ಕೋಲಾರ ನಗರದಲ್ಲೇ ಇದ್ದ ಅಂಬೇಡ್ಕರ್ ಹಾಸ್ಪೆಲಿನಲ್ಲಿ ಬಂಧನದಲ್ಲಿಟ್ಟಿತ್ತು. ಹಾಗೂ ತಮ್ಮ ಬಣದವರಲ್ಲದವರು ಯಾರೇ ಬಂದರೂ ಕೈಕಾಲು ಮುರಿಯುವುದಾಗಿ ಸರ್ಪಕಾವಲು ನಿಂತಿತ್ತು.

ಎಲ್ಲಕ್ಕಿಂತ ಹೆಚ್ಚಾಗಿ ಬೆಂಡಿಗೇರಿ ಮತ್ತು ಹರಟಿ ಮಲಪ್ರಕರಣಗಳ ಬಗ್ಗೆ ತಳೆದ ನಿಲುವಿನಿಂದಾಗಿ ನನಗೆ ಲಂಕೇಶ್‌ರ ಬಗ್ಗೆ



ಕೆಂಡದಷ್ಟು ಕೋಪ ಬಂದಿತ್ತು. ಬೆಂಡಿಗೇರಿ ಮಲ ಪ್ರಕರಣಕ್ಕೆ ಸಂಬಂಧಿಸಿದ ಮೊದಲ ವರದಿಯಲ್ಲಿ ಘಟನೆಯ ಸತ್ಯಾಸತ್ಯತೆಯನ್ನೇ ಅನುಮಾನಿಸಿದ್ದರೆ ಎರಡನೆಯ ಪ್ರಕರಣದಲ್ಲಿ ಸತ್ಯಾಸತ್ಯತೆಯನ್ನು ಕಿಂಚಿತ್ತೂ ಅನುಮಾನಿಸದೆ ತೀರ್ಮಾನಕ್ಕೆ ಬಂದಿದ್ದರು.

ಬೆಂಡಿಗೇರಿ ಮಲಪ್ರಕರಣದ ವಿರುದ್ಧ ನಡೆದ ಐತಿಹಾಸಿಕ ಬೃಹತ್ ರ್‍ಯಾಲಿಯ ದಿನ ಕಬ್ಬನ್ ಪಾರ್ಕಿನಿಂದ ವಿಧಾನಸೌಧಕ್ಕೆ ಹೋದ ತಂಡದಲ್ಲಿ ನಾನೂ ಇದ್ದೆ. ಉಳಿದಂತೆ ಬಿ.ಕೆ, ವೆಂಕಟೇಶ್, ತ್ಯಾಗಿ ಇದ್ದರು. ಇದ್ದ ಮಿಕ್ಕವರು ಗೆಪ್ತಿಗೆ ಬರುತ್ತಿಲ್ಲ. ಅವತ್ತು ಉರಿಯುತ್ತಿದ್ದ ನಮ್ಮ ಕಣ್ಣ ಬೆಂಕಿಯನ್ನು ಕಂಡೇ ಸದನಸಮಿತಿ ಅಧ್ಯಕ್ಷರಾಗಿದ್ದ ಡಾ॥ ತಿಪ್ಪೇಸ್ವಾಮಿಯವರು ಕಿಟಕಿಗಳನ್ನು ಮುಚ್ಚಿಸಿ ಗುಟ್ಟು ಹೇಳುವಂತೆ ಹೇಳಿದ ಅನುಭವವನ್ನೇ ನಾನು ಲಂಕೇಶ್ ಪತ್ರಿಕೆಗೆ ಹೋದಾಗ ಲಂಕೇಶರಿಗೆ ಹೇಳಿದ್ದು. ಅದಾಗಲೆ ಆ ಮಲಪ್ರಕರಣದ ಸತ್ಯಾಸತ್ಯತೆಯನ್ನು ಅನುಮಾನಿಸಿ ಕಳೆದುಕೊಂಡಿದ್ದ ಒಂದು ಕಣ್ಣಿನ ಬದಲು ಇನ್ನೊಂದನ್ನಾದರೂ ಲಂಕೇಶರು ಉಳಿಸಿಕೊಳ್ಳಲೆಂದು ಹೇಳಿದ್ದು. ಇದಿಷ್ಟನ್ನೂ ನಾನು ಆಗ ಸಂಪಾದಕನಾಗಿದ್ದ 'ಪಂಚಮ' ಪತ್ರಿಕೆಯ ಸಂಪಾದಕೀಯದಲ್ಲಿ ಬರೆದಿರುವೆ... ಆದರೆ ಲಂಕೇಶರು ಇದನ್ನು ಅಪರೂಪದ ಕತೆಯಾಗಿಸಿ ತಮಗೆ ಮೂರನೆಯ ಕಣ್ಣೂ ಇದೆಯೆಂದು ನಿರೂಪಿಸಿಕೊಂಡರು. ಆ ಕತೆ 'ಮುಟ್ಟಿಸಿಕೊಂಡವರು'.

ಈ ಹರಟಿ ಮಲಪ್ರಕರಣ ಫೋಕಸ್ ಮಾಡಿದ ರೀತಿಯಲ್ಲಿ ಮತ್ತೆ ಅವರು ಕಣ್ಣು ಕಳೆದುಕೊಳ್ಳುವುದನ್ನೇ ಮುಂದುವರೆಸುತ್ತಿದ್ದಾರೆಂದು ಅವರ ಕಚೇರಿಗೆ ಜಗಳ ಕಾಯಲು ನುಗ್ಗಿದ್ದೆ. ಅಂದು ಅವರಿರಲಿಲ್ಲ. ಒಂದು ಪತ್ರ ಬರೆದಿಟ್ಟು ಬಂದೆ. ಆ ಪತ್ರದ ಒಕ್ಕಣೆ ಹೀಗಿತ್ತು ಎನಿಸುತ್ತೆ. ತೆರೆದ ಅಂಚೆ ಕಾರ್ಡಿನಲ್ಲಿ ದ್ವಾರಕಾನಾಥ್‌ರಿಗೂ ಬರೆದಿದ್ದೆ.

ಆ ಪತ್ರದ ಒಕ್ಕಣೆ ಹೀಗಿತ್ತು

"....ನೀವು ನಿಮ್ಮ ಪತ್ರಿಕೆಯಲ್ಲಿ ಹರಟಿ ಮಲಪ್ರಕರಣಕ್ಕೆ ಸಂಬಂಧಿಸಿದಂತೆ ಓದುಗರ ಪತ್ರವೊಂದನ್ನು ಪ್ರಕಟಿಸಿದ್ದೀರಿ. ಅವರು 'ಮಲಪ್ರಕರಣ'ದಲ್ಲೂ ದುಡ್ಡು ತಿಂದ ದಲಿತ ಸಂಘರ್ಷ ಸಮಿತಿಯವರನ್ನು 'ಯಾವುದರಲ್ಲಿ ಹೊಡೆಯಬೇಕು?' ಎಂದು ಕೇಳಿದ್ದಾರೆ. ಯಾವುದರಲ್ಲಿ ಯಾಕೆ ಚಪ್ಪಲಿಯಿಂದಲೇ ಹೊಡೆಯಬೇಕು. ಹಾಗೆ ಹೊಡೆಯುವ ಮೊದಲು ನೀವೇ ನಿಮ್ಮನ್ನು ಅದೇ ಚಪ್ಪಲಿಯಿಂದಲೇ ಹೊಡೆದುಕೊಳ್ಳಬೇಕು. ಸತ್ಯಾಸತ್ಯತೆಯನ್ನು ಪರಿಶೀಲಿಸದೆ ಪ್ರಕಟಿಸುತ್ತಿರುವ ವರದಿಗಳಿಂದಾಗಿ" ಎಂದು ಕಾರಿಕೊಂಡಿದ್ದೆ. ಯಾಕೆಂದರೆ ಅದಾಗಲೆ ಈ ಪ್ರಕರಣ ಪಡೆಯುತ್ತಿದ್ದ ವೇಗ ಮತ್ತು ತಿರುವುಗಳಿಂದಾಗಿ ಜಿಲ್ಲೆಯಲ್ಲಿ ದಲಿತ ಸಮುದಾಯಕ್ಕೆ ಬಹುದೊಡ್ಡ ಕಳಂಕ ಅಂಟಿಕೊಳ್ಳುವುದು ನಿಶ್ಚಿತವಾಗಿತ್ತು. ಹಾಗೂ ಇಂಥ ವಿಚಿತ್ರ ತಿರುವು ಪಡೆಯುತ್ತಿರುವ ಪ್ರಕರಣವನ್ನು ನಾನೇ ಖುದ್ದು ತನಿಖೆ ಮಾಡಬೇಕೆಂದು ಅಂದು ಕಣ್ಣಪ್ಪನ ಜೊತೆ ಕುಡಿಯುವ ಗುಂಪಿನಲ್ಲಿದ್ದ ಮರಿಯಪ್ಪನ ಆದಿಯಾಗಿ ಕಣ್ಣಪ್ಪನ ಹೆಂಡತಿಯನ್ನೂ ಬಿಡದೆ ಹಲವರನ್ನು ಮಾತಾಡಿಸಿ ನಡೆದಿರಬಹುದಾದ ಘಟನೆಯ ಚಿತ್ರಣ ಕಟ್ಟಿಕೊಂಡಿದ್ದೆ.

ಈ ಹಿನ್ನೆಲೆಯಲ್ಲಿ ನಾನು ಹಾಸ್ಪೆಲಿನಲ್ಲಿ ಬಂಧಿಯಾಗಿದ್ದ ಕಣ್ಣಪ್ಪನನ್ನು ಭೇಟಿಮಾಡಲು ನಿರ್ಧರಿಸಿದೆ. ಸಿ.ಮುನಿಯಪ್ಪ ಮತ್ತು ಆತನ ಜೊತೆ ಇದ್ದವರು ನನ್ನನ್ನು ಹೋಗದಿರುವಂತೆ ಎಚ್ಚರಿಸಿದರೂ ನಿಲ್ಲದೆ ಭೇಟಿಮಾಡಲು ಹೊರಟೆ. ಹಾಸ್ಪೆಲಿನ ಮುಂದೆ ಕಾವಲು ನಿಂತವರು ಒಳಗೆ ಬಿಡದಂತೆ ತಡೆದರು. "ಅವನು ನನ್ನ ಮಾವ. ಅವನನ್ನೇ ಹೋಗಿ ಕೇಳಿ. ಅವನು ಬೇಡ ಅನ್ನುವುದಾದರೆ... ನಾನು ಹಿಂದಕ್ಕೆ ಹೋಗುತ್ತೇನೆ" ಎಂದೆ. ಅವರು ಒಳಗೆ ಹೋಗಿ ಬಂದರು. ನೋಡಲು ಕರೆದೊಯ್ದರು. ಅವರ ಎದುರಿಗೇನೆ "ಯೇ ಕಣ್ಣಪ್ಪಾ ನಿಜ ಹೇಳು... ಇದು ನಡೀತಾ?"

ಎಂದೆ. ಅವನು ಯಥಾಪ್ರಕರ ನಿರ್ಲಜ್ಜ 'ಕ್ಕೆ ಕ್ಕೆ ಕ್ಕೆ' ನಗೆ ನಕ್ಕ. ಪರ್ಸನಲ್ಲಾಗಿ ಮಾತಾಡುವ ಮಾತೆತ್ತಿದರೂ ಆ ಕಾವಲುಗಾರರು ಕೊಂಚ ದೂರ ಹೋದಂತೆ ಮಾಡಿ ಅಲ್ಲೇ ನಿಂತು ಆಲಿಸತೊಡಗಿದರು. ಕಣ್ಣಪ್ಪ ಹೇಳಿದ್ದಿಷ್ಟು... ಅದಾಗಲೆ ಅವನನ್ನು ದೆಹಲಿಗೆ ವಿಮಾನದಲ್ಲಿ ಕರೆದೊಯ್ದು ನಾಯಕರೊಬ್ಬರು ರಾಮವಿಲಾಸ್‌ಪಾಸ್ವಾನ್‌ರ ಜೊತೆ ಸೇರಿ ಈ ಅಮಾನುಷ ಘಟನೆಯ ವಿರುದ್ಧ ಪ್ರತಿಭಟನಾ ರ‍್ಯಾಲಿ ನಡೆಸಿದ್ದರು. ಆ ರ‍್ಯಾಲಿಯ ವೇದಿಕೆಯಲ್ಲಿ ಈ ಪ್ರತಿಷ್ಠಿತ ನಾಯಕರ ಜೊತೆ ಕಣ್ಣಪ್ಪನೂ ಇದ್ದ. ಅಥವಾ ಆ ರ‍್ಯಾಲಿಯ ಕೇಂದ್ರ ಬಿಂದುವೇ ಆತನಾಗಿದ್ದ. ಇಂತಹ ಗಾರುಡಿಬೊಂಬೆಯಾಗುವುದಕ್ಕೆ ಒಪ್ಪಿರುವುದರಿಂದ ತನಗೊಂದು ಮನೆ, ಹೊಲಕ್ಕೆ ಬೋರ್‌ವೆಲ್ ಮತ್ತು ಮಗಳ ಮದುವೆ ಬಾಬತ್ತೆಲ್ಲವನ್ನೂ ತಾವೇ ಹೊರುವುದಾಗಿ ಆ ನಾಯಕರು ಭರವಸೆ ಕೊಟ್ಟಿರುವುದಾಗಿ ಹೇಳಿದ.

ಈ ಎಲ್ಲ ಹಿನ್ನೆಲೆಯನ್ನೂ ಬಿಡಿಸಿ ಇವನ ಕುಡಿತದ ಉಪಟಳ ತಾಳಲಾರದೆ ಹಲ್ಲೆ ಮತ್ತು ದೌರ್ಜನ್ಯ ಕಾಯ್ದೆಯಡಿ ಶಿಕ್ಷಾರ್ಹವಾಗಬಹುದಾದ ಅಪರಾಧವನ್ನು ಮಲಪ್ರಕರಣವಾಗಿ ಪರಿವರ್ತಿಸಿದ ರೀತಿ, ಈ ವ್ಯೂಹದ ಹಿಂದೆ ಇದ್ದ 'ನಾಯಕ'ರ ಪಾತ್ರ, ದಲಿತ ನೌಕರರ ಅಮಾಯಕತೆ ಎಲ್ಲವನ್ನೂ ದಾಖಲಿಸಿ ಸುಮಾರು 20ಪುಟಗಳಿಗೂ ಮೀರಿದ ಧೀರ್ಘ ವೃತ್ತಾಂತವನ್ನು ಬರೆದು ಸಿಎಂ ಮತ್ತು ಗೆಳೆಯರ ಮುಂದೆ ಇಟ್ಟು, ದಲಿತ ಸಂಘರ್ಷ ಸಮಿತಿಯ ಮೂಲಕ ಪ್ರಕಟಿಸಲು ಕೋರಿದೆ. ಅದನ್ನು ಓದಿದ ಸಿಎಂ 'ಐದಾರು ಜನ ದಲಿತ ನೌಕರರು ಕೆಲಸ ಕಳೆದುಕೊಳ್ಳುತ್ತಾರೆ. ಆಗ ಆ ಗೋಳನ್ನೂ ನಾವೇ ನೋಡಬೇಕಾಗುತ್ತೆ ಸುಮ್ಮನಿದ್ದುಬಿಡೋಣ' ಎಂದರು. ನಾನಂತೂ ಈ ಹೊತ್ತಿಗೆ ಹೇಳಬೇಕಾದ್ದನ್ನ ಹೇಳಬೇಕಾದವರಿಗೆ ಹೇಳಿಯಾಗಿದೆ ಎಂಬ ಸಮಾಧಾನದಲ್ಲಿ ಆ ವರದಿಯನ್ನು ಅವರ ಸುಪರ್ದಿಗೇ ಬಿಟ್ಟು ನಡೆದೆ. ಇದಿಷ್ಟೂ ಈ ವಿದ್ಯಮಾನದ ಹಿಂದೆ ನಡೆದ ತೆರೆಮರೆ ಚಟುವಟಿಕೆಗಳು.


ಈ ಮಧ್ಯೆ ಬಾಬಯ್ಯನವರ "ನಾಗರಿಕ ಹಕ್ಕುಗಳ ಹೋರಾಟ ವೇದಿಕೆಯಿಂದ ಸತ್ಯಾನ್ವೇಷಣೆಗೆ ಸಮಿತಿಯೊಂದು ಹರಟಿ ಗ್ರಾಮಕ್ಕೆ ಭೇಟಿ ನೀಡಿತ್ತು. ಹಾಗೂ ಅಧ್ಯಯನ ವರದಿಯೊಂದನ್ನೂ ತಂದಿತ್ತು. ಅವರೂ ಕೂಡ ಸರಿಸುಮಾರು ಎರಡನೆಯ 'ನ್ಯಾಯಪರ ದಲಿತ ಬಣ'ದ ಅಭಿಪ್ರಾಯಗಳನ್ನೇ ಮಂಡಿಸಿರುವುದು ಪತ್ರಿಕೆಗಳಲ್ಲಿ ಬೆಳಕು ಕಂಡಿತು. ಲಂಕೇಶರ ಮೇಲೆ ಬಂದಿದ್ದಷ್ಟೇ ಸಿಟ್ಟು ಇವರ ಮೇಲೂ ಬಂತು. ಇದಕ್ಕೆ ಬಲಿಯಾದವರು ಸುಧಾ ಸೀತಾರಾಮನ್ (ಸಮಾಜಶಾಸ್ತ್ರ ಉಪನ್ಯಾಸಕಿ) ಇವರು ಇಂದಿರಾನಗರದ 'ಸಿಯೆಡ್ಸ್' ಸಂಸ್ಥೆಯ ಎದುರು ಸಿಕ್ಕಾಗ ಅತ್ಯಂತ ಒರಟಾಗಿ ಜಗಳ ಕಾದಿದ್ದೆ. ಇದಾಗಿ ಅದಾಗಿ ಆ ಹೊತ್ತು ಹರಟಿ ಗ್ರಾಮದ ರಸ್ತೆಗಳಲ್ಲಿ ಭೇಟಿಗೆ, ತನಿಖೆಗೆ, ಸಾಂತ್ವನ ಹೇಳುವುದಕ್ಕೆ ಬಂದು ಹೋದವರ ಕಾರುಗಳ ಚಕ್ರದಿಂದೆದ್ದ ಧೂಳು ಸುತ್ತಲ ವಾತಾವರಣವನ್ನೇ ಮುಚ್ಚಿತ್ತು.

ಈಗ ವಾತಾವರಣ ಅತ್ಯಂತ ಶುಭ್ರವಾಗಿದೆ. ಬೆಳೆದ ಹೊಲಗದ್ದೆಗಳ ಹಸಿರು ಗೋಧಿ ಬಣ್ಣಕ್ಕೆ ತಿರುಗುತ್ತಿದೆ. ಅಲ್ಲಲ್ಲಿ ಕುಯಿಲೂ ಆಗಿದೆ. ಕಣ್ಣಪ್ಪನೂ ಕಣ್ಮರೆಯಾಗಿ ಈಗ ಗುಳಿ ಸೇರಿದ್ದಾನೆ. ಅವನಿಗೆ ಏನೇನೋ ಮಾಡುವುದಾಗಿ ಭರವಸೆ ಕೊಟ್ಟ ನಾಯಕನ ನಗುಮುಖದ ಪೋಸ್ಟರು, ಫ್ಲೆಕ್ಸ್‌ಗಳು ರಾಜ್ಯದಾದ್ಯಂತ ಬೀದಿಬೀದಿಗಳ ಗೋಡೆ ಗೋಡೆಗಳನ್ನು ಅಲಂಕರಿಸಿವೆ. ಹೇಗೋ ಏನೋ ಕಣ್ಣಪ್ಪ ಮಗಳಿಗೂ, ಮಗನಿಗೂ ಮದುವೆ ಮಾಡಿದ್ದಾನೆ. ಹೊಲವೇನೋ ಉಳಿದಿರುವಂತಿದೆ. ಆದರೆ ಬೋರ್‌ವೆಲ್ ಹಾಕಿಸಿದ್ದರ ಬಗ್ಗೆ ಯಾವ ಸುಳಿವೂ ಇಲ್ಲ. ಇದನ್ನೆಲ್ಲಾ ನೋಡುತ್ತಾ ಬಂದಿರುವ ನನಗೆ 'ಆಂಡ್ರೆವಾಯ್ಡಾ'ನ 'ಮ್ಯಾನ್ ಆಫ್ ಮಾರ್ಬಲ್' ಸಿನಿಮಾ ನೆನಪಾಗುತ್ತಿದೆ.

'ಪೋಲೆಂಡ್' ದೇಶದಲ್ಲಿ ಆಗತಾನೆ ಕಮ್ಯುನಿಸ್ಟ್ ಪ್ರಭುತ್ವ ನೆಲೆಗೊಂಡಿದೆ. ಉತ್ಪಾದನೆ ಹೆಚ್ಚಿದರೇನೆ ಅದರ ಬುಡ ಭದ್ರವಾಗುವುದು. ಅದಕ್ಕಾಗಿ ಕಾರ್ಮಿಕರಲ್ಲಿ ಕರ್ತೃತ್ವ ಶಕ್ತಿಯ ಉದ್ದೀಪನವಾಗದೆ ಬೇರೆ ದಾರಿ ಇಲ್ಲ. ಆಗ ಸಿಕ್ಕಿದ ದಿಕ್ಕೇ 'ಬಿಲ್‌ಕೂತ್'.

'ಬಿಲ್‌ಕೂತ್' ಗಾರೆ ಮೇಸ್ತ್ರಿ. ಇವನು ಇಟ್ಟಿಗೆ ಇಡುವ ವೇಗ, ಗೋಡೆ ಕಟ್ಟುವ ಚಂದಕ್ಕೆ ಹೆಸರಾದವನು. ಇವನನ್ನ 'ಕಾರ್ಮಿಕ ಮಾದರಿ' ಮಾಡಿಕೊಳ್ಳುವ ಪ್ರಭುತ್ವ ತನ್ನ ಉದ್ದೇಶ ಸಾಧನೆಗಾಗಿ ಪ್ರಚಾರಕ್ಕೆ ಬಳಸಿಕೊಳ್ಳುತ್ತದೆ. ಕಾರ್ಮಿಕರ ನಡುವೆ ಅವನ ಪ್ರಶಂಸಾ ಭಿತ್ತಿಚಿತ್ರಗಳು ರಾರಾಜಿಸುತ್ತವೆ. ಅವನ ಪ್ರತಿಮೆಗಳನ್ನೂ ಪ್ರತಿಷ್ಠಾಪಿಸಲಾಗುತ್ತದೆ. ಅದನ್ನು ಆ ದೇಶದ ಹೆಮ್ಮೆಯಾದ ಹೆಸರಾಂತ ಮ್ಯೂಸಿಯಮ್ಮಿನಲ್ಲೂ ಇಡಲಾಗುತ್ತದೆ. ಕೊನೆಗೆ ತನ್ನ ಇಂಗಿತ ಈಡೇರಿದ ಮೇಲೆ ಅವನ ಅಮೃತಶಿಲೆಯ ವಿಗ್ರಹವನ್ನು ಗೋಣಿತಾಟಿನಲ್ಲಿ ಸುತ್ತಿಟ್ಟು ಮ್ಯೂಸಿಯಂನ ಹಳೆ ಗೋಡೌನಿನ ಮೂಲೆಗೆ ಬಿಸಾಡಲಾಗುತ್ತದೆ. ಚಿತ್ರ ಆರಂಭವಾಗುವುದೇ ಮ್ಯೂಸಿಯಂನ ಗೋಡೌನ್ ಮೂಲೆಯಿಂದ. ವಿದ್ಯಾರ್ಥಿನಿಯೊಬ್ಬಳು ಟಿ.ವಿಗಾಗಿ ಕುತೂಹಲಭರಿತ ಕಥಾವಸ್ತುವಿನ ಹುಡುಕಾಟದಲ್ಲಿರುವಾಗ, ಈ ಬಿಸಾಕಿಸಿಕೊಂಡಿದ್ದ ಪ್ರತಿಮೆ ಕಣ್ಣಿಗೆ ಬಿದ್ದು ಅಲ್ಲಿಂದ ಚಿತ್ರ ಆರಂಭವಾಗಿ... ಈ ಒಟ್ಟು ಕತೆಯನ್ನು ಆಕೆಯ ಕಣ್ಣಿಂದ ನಿರೂಪಿಸಲಾಗಿದೆ. ಪಾಪ ಕಣ್ಣಪ್ಪ... 'ಮ್ಯಾನ್ ಆಫ್ ಮಾರ್ಬಲ್' ಕೂಡ ಅಲ್ಲ. 'ಮ್ಯಾನ್ ಆಫ್ ಶಿಟ್' ಆಗಿರುವುದರಿಂದ ಯಾರೂ ಹತ್ತಿರ ಕೂಡ ಸುಳಿಯುವುದಿಲ್ಲ. ಅವನ ಸಾವಿನ ದಿನ ಮಲ ತಿನ್ನಿಸಿದ ದಲಿತ ನಾಯಕರಾಗಲಿ, ಸತ್ಯಾನ್ವೇಷಕರಾಗಲಿ... ಅಥವಾ ಸರ್ಕಾರದ ಪರ ಸಾಂತ್ವನಕಾರರಾಗಲಿ ಒಬ್ಬರ ಸುಳಿವೂ ಇರಲಿಲ್ಲ. ಅವನಿರಲಿ ಅವನ ಹೆಸರೂ ಕೂಡ ನೆನಪಿದೆಯೋ ಇಲ್ಲವೋ... ಆದರೆ ಕಣ್ಣಪ್ಪನ ನಿತ್ಯ ರೇಜಿಗೆಯನ್ನು ಸಹಿಸಿಕೊಂಡಿದ್ದ ಹಳ್ಳಿಯ ಎಲ್ಲ ಜಾತಿಗಳವರೂ ಮಣ್ಣಿಗೆ ಬಂದಿದ್ದನ್ನ ಕಂಡೆ. ನನಗಂತೂ ಅವನ ಮುಖದರ್ಶನವಾಗಲಿಲ್ಲ. ಅದಾಗಲೇ ಮಣ್ಣು ಮುಚ್ಚಿ ಗೋರಿ ಕಟ್ಟುತ್ತಿದ್ದರು. ಕೈಗಿತ್ತ ಸನಿಕೆಯಿಂದಲೇ ನಾನೂ ಮೂರು ಬಾರಿ ಮಣ್ಣು ಮುಚ್ಚಿ 'ಹೋಗಿ ಬಾ ಗುರುವೇ' ಎಂದು ಕೈ ಮುಗಿದು ಸರಣು ಮಾಡಿದೆ. ○

'ಬಿಲ್‌ಕೂತ್' ಗಾರೆ ಮೇಸ್ತ್ರಿ. ಇವನು ಇಟ್ಟಿಗೆ ಇಡುವ ವೇಗ, ಗೋಡೆ ಕಟ್ಟುವ ಚಂದಕ್ಕೆ ಹೆಸರಾದವನು. ಇವನನ್ನ 'ಕಾರ್ಮಿಕ ಮಾದರಿ' ಮಾಡಿಕೊಳ್ಳುವ ಪ್ರಭುತ್ವ ತನ್ನ ಉದ್ದೇಶ ಸಾಧನೆಗಾಗಿ ಪ್ರಚಾರಕ್ಕೆ ಬಳಸಿಕೊಳ್ಳುತ್ತದೆ. ಕಾರ್ಮಿಕರ ನಡುವೆ ಅವನ ಪ್ರಶಂಸಾ ಚಿತ್ತಿಚಿತ್ರಗಳು ರಾರಾಜಿಸುತ್ತವೆ. ಅವನ ಪ್ರತಿಮೆಗಳನ್ನೂ ಪ್ರತಿಷ್ಠಾಪಿಸಲಾಗುತ್ತದೆ. ಅದನ್ನು ಆ ದೇಶದ ಹೆಮ್ಮೆಯಾದ ಹೆಸರಾಂತ ಮ್ಯೂಸಿಯಮ್ಮಿನಲ್ಲೂ ಇಡಲಾಗುತ್ತದೆ.



ಕೊಲಂಬಿಯಾ... ದಡ ಸೇರಲಿಲ್ಲ, ಕಡ ತೀರಲಿಲ್ಲ...

ಇತ್ತೀಚಿನ ನಮ್ಮ 'ಕೊಲಂಬಿಯಾ... ಚಂಡಮಾರುತ'ದ ಬಗ್ಗೆ ಈಗಾಗಲೇ ತಮ್ಮಲ್ಲಿ ಬಹುತೇಕರಿಗೆ ತಿಳಿದೇ ಇದೆ. ಹೊಸದಾಗಿ ತಿಳಿಯಬಯಸುವವರಿಗಾಗಿ ಪುಟ್ಟ ಪೀಠಿಕೆ. ದಕ್ಷಿಣ ಅಮೆರಿಕಾ ಖಂಡದ ಕೊಲಂಬಿಯಾ ದೇಶದ ಒಂದು ಪ್ರತಿಷ್ಠಿತ ರಂಗಶಾಲೆ 'ಮಾಲೋಕ'. (ಮಾಲೋಕ ಎಂದರೆ ಮೂಲನಿವಾಸಿ ರೆಡ್ ಇಂಡಿಯನ್ನರ 'ಮಹಾಮನೆ', ಬೊಗೋಟಾ ನಗರದ ಸಮೀಪದ ಬೆಟ್ಟದ ನೆತ್ತಿಯ ಮೇಲೆ ಸ್ಥಾಪನೆಗೊಂಡಿರುವ ಈ ಶಾಲೆಯ ಮುಖ್ಯಸ್ಥೆ ಕಾಂತಾರ. ಕಾಂತಾರ ಮೂಲತಃ ಸ್ಪ್ಯಾನಿಷ್ ಮೂಲದವಳು. ಕೊಲಂಬಿಯಾ ದೇಶವನ್ನು ನುಚ್ಚುನೂರು ಮಾಡಿದ ಕುಖ್ಯಾತಿ ಸ್ಪೇನಿಗರದು. ಅದು ಎಲ್ಲಿಯವರೆಗೆ ಅಂದರೆ ಅಲ್ಲಿದ್ದ ಮೂಲ ನಿವಾಸಿ ಗಂಡಸರನ್ನೆಲ್ಲಾ ಹತ್ಯೆಗೈದು, ಆ ಗಂಡ ಕಳೆದುಕೊಂಡ ದುಃಖಿತರ ದೇಹಗಳನ್ನೇ ತೊತ್ತಾಗಿಸಿಕೊಳ್ಳುವವರೆಗೆ. ಇಂತಹ ಕೂಡಾವಳಿಗೆ ಹುಟ್ಟಿ, ದಮನಿ ದಮನಿಗಳಲ್ಲಿ ಆಕ್ರಮಣಶೀಲರ ನಡೆ ನುಡಿಗಳನ್ನು ತುಂಬಿಕೊಂಡಿರುವ ಕೊಲಂಬಿಗರಿಗೆ ಈ ಎಲ್ಲ ಚಾರಿತ್ರಿಕ ನೆನಪು ಸದಾ ಅಪಮಾನದಂತೆ ಚಿಗುರು. ತಮ್ಮದಲ್ಲದ ನೆಲದ ವೀರ್ಯಕ್ಕೆ, ತಮ್ಮದಲ್ಲದ ನುಡಿ-ನಡೆಗೆ ಬಲಿಪಶುಗಳಾಗಿರುವ ಹೊಸತಲೆಮಾರಿಗೆ ಈ ಎಚ್ಚರ ಇದೆ. ಆದ್ದರಿಂದಲೇ ನೆಲಮೂಲ ನೆಲೆಗಳ ಅನ್ವೇಷಣೆಯೇ ಬಿಡುಗಡೆಗೆ ದಾರಿ ಎಂಬ ಅರಿವಿದೆ. ಸ್ಪೇನಿನ ಸಾಮ್ರಾಜ್ಯಶಾಹಿ ಕ್ರೌರ್ಯಕ್ಕೆ ರೋಸಿ ಹೋದವರು ಕೊಲಂಬಿಯಾ ನೆಲಮೂಲದವರು ಮಾತ್ರವಲ್ಲ; ಸ್ಪೇನ್ ಮೂಲದ ಅಂತಃಕರಣಿಗಳೂ ಹಲವರಿದ್ದಾರೆ. ಇಂತಹವರ ಪೈಕಿ ಕಾಂತಾರ ಕೂಡ ಒಬ್ಬರು. ಇವರು ಅಂತರರಾಷ್ಟ್ರೀಯ ಖ್ಯಾತಿಯ ನಟಿ ಮತ್ತು ರಂಗಕರ್ಮಿ.

ಈ ಮೊದಲೇ ಹೇಳಿದಂತೆ ರಂಗಕುಟೀರವೊಂದನ್ನು ಕಟ್ಟಿಕೊಂಡು ಕಳೆದ ಮೂರು ದಶಕಗಳಿಂದ 'ಬಯೋಡ್ರಾಮ' (ಜೈವಿಕ ರಂಗಭೂಮಿ) ಎಂಬ ರಂಗಭೂಮಿಗೆ ಆಧ್ಯಾತ್ಮಿಕತೆಯ ಸ್ಪರ್ಶ ನೀಡುವ ಬಗೆಯೊಂದರ ಹುಡುಕಾಟದಲ್ಲಿದ್ದಾರೆ. ಈ ಸಂಸ್ಥೆಯ ಸಂಪರ್ಕ ಭೂಷಣ್‌ಭಟ್ ಎಂಬ ನಮ್ಮ ಕಾರಂತ ಶಿಷ್ಯಕೋಟಿಯಿಂದ ಹೈದರಾಬಾದಿನ ಸತ್ಯವ್ರತರಾವ್ ರಾವ್ರುತ್‌ರಿಗೆ ಕೊಂಡಿಬಿದ್ದು ಅಲ್ಲಿಂದ ಕೊಲಂಬಿಯಾ ತೀರದಲ್ಲಿ ಲಂಗರು ಬಿದ್ದಂತೆ ಈ ಕನಸು ಬಿತ್ತು.

ಇಪ್ಪತ್ತೈದು ದಿನಗಳ ಎಂಟು ದೇಶಗಳ ರಂಗತಜ್ಞರು ಒಂದುಗೂಡಿ ಪರಸ್ಪರ ತರಬೇತಿ ಪಡೆಯುವ ಹಾಗೂ ಎಂಟು ಹತ್ತು ಕಡೆ ಕಲಿತು ಒಯ್ದ ನಾಟಕದ ಪ್ರದರ್ಶನ ನೀಡುವ ಅವಕಾಶ ವೈಯಕ್ತಿಕವಾಗಿ ನನ್ನ ಮನ ಸೆಳೆಯಿತು. ಆದರೆ ಅದಕ್ಕಾಗಿ ತಗಲುತ್ತಿದ್ದ ವೆಚ್ಚ ಮಾತ್ರ ಎದೆ ನಡುಗಿಸುವಂತಿತ್ತು. ನಾಟಕದ ತಯಾರಿ ಹಾಗು ವಿಮಾನ ಪ್ರಯಾಣ ವೆಚ್ಚ ಸೇರಿ ಒಟ್ಟು ಹತ್ತುಲಕ್ಷ ರೂಪಾಯಿಗಳಷ್ಟಾಗುತ್ತಿತ್ತು! ಆದರೂ ಒಂದು ಸಮುದ್ರೋಲ್ಲಂಘನ ಸಾಹಸ. ಮುಂಬೈ ಬಾಲಿಹುಡ್ಡಿನಲ್ಲಿ ಚಿತ್ರ ಸಾಹಿತಿಯಾಗಿರುವ ಕುನಾಲ್‌ರಿಂದ 'ಏಕಲವ್ಯ ಉವಾಚ'... ನಾಟಕ ಬರೆಯಿಸಿ, ಹಿಂದಿ ಮತ್ತು ಕನ್ನಡ ಎರಡೂ ಭಾಷೆಗಳನ್ನ ಒಟ್ಟಿಗೆ ಇಟ್ಟು, ರಂಗಪಠ್ಯ ಸಿದ್ಧಪಡಿಸಬೇಕಾಯಿತು. ಅಯ್ಯೋ ಈ ಸಿದ್ಧಪಡಿಸುವ ವೇಳೆ ಎಷ್ಟೊಂದು ತಲೆನೋವು. ಸ್ವಾಮೀ ಆಚಾರ್ಯ ರಂಗಶಾಲೆಗಳು ಉತ್ಪಾದಿಸಿ ಕಳಿಸಿರುವ ದ್ರೋಣ ಪರಂಪರೆಯ ವಿರಾಟ್ ದರ್ಶನ. ಅದೇನು ಕ್ಷುದ್ರ ವಾಂಛೆಗಳು. ಅನಗತ್ಯ ಈಗೋಗಳು. ಕ್ಲ್ಯಾಷುಗಳು... ನಖರಾಗಳು... ಮೂರೂ ಮುಕ್ಕಾಲು ವೀಸೆ ರಂಗಪಠ್ಯಗಳನ್ನು ಅರೆದು ಕುಡಿದ ಮಾತ್ರಕ್ಕೆ ಇಂತಹ ಕಣ್ಮಂಜಾಗುವುದಾದರೆ... ಇನ್ನು

ಕತ್ತಲ ಕಣಿವೆಯ ಪಾತಾಳದಲ್ಲಿರುವವರ ಪಾಡೇನು?

ಕಡವೆಂಬುದು ಕೋಳ ಎಂದು ಸಂಕೇತಿಸಲೋ ಏನೋ 'ಕಡಕೋಳ' ಊರಿರಬಹುದೆಂಬುದು ನನ್ನ ಊಹೆ. ಇಂಥದ್ದೊಂದು ಹೊನ್ನಕೋಳವನ್ನು ಮುಂಗೈಗೆ ಕಟ್ಟಿಕೊಂಡು, ಗೊಣ್ಣೆವಾಚ ಮಾಡಿಕೊಂಡು ಹುಡುಕಿದರೂ ಸಕ್ಕರೆ ಹರಳು ಸಿಕ್ಕಿದ್ದು ಮಾತ್ರ ಅಷ್ಟಕ್ಕಷ್ಟೆ. 'ಒಂಬತ್ತು ತಣಿಗೆ ಬಿದರ'ಕ್ಕಿ ಜನಪದ ಕತೆಯಂಥದ್ದು. ಹೊಟ್ಟೆಗೆ ಸಾಲದೆ ಒಬ್ಬನನ್ನು ಮುಗಿಸಿದರೆ ಅವನದಾದರೂ ಉಳಿದವರಿಗೆ ಹಂಚಿ ಹಸಿವಿನ ಕೊರೆ ತುಂಬಬಹುದೆಂದು ಅಪ್ಪ-ಅಮ್ಮನದು ಹಂಚಿಕೆ. ಕೊಂದರೂ, ಒಂದು ತೊಟ್ಟು ಗಂಜಿಯೂ ಹೆಚ್ಚು ಸಿಗದೆಹೋದ ದುರಂತ ಕಥನ... ಅವರದು. ನಮ್ಮ ಇತ್ತೀಚಿನ ಕೊಲಂಬಿಯಾ ಸಾಹಸ ಯಾನ ಕುರಿತಂತೆ ಯೋಚಿಸುವಾಗೆಲ್ಲಾ ಈ ಕತೆ ನೆನಪಾಗುತ್ತದೆ.

ನಿಜಕ್ಕೂ ನನಗೆ ಸಾಧ್ಯವಿರುವ ನನ್ನ ವೈಯುಕ್ತಿಕ ಸಾಮರ್ಥ್ಯವೆಂದರೆ ಕುಸುಮಬಾಲೆಯ ಬಾಲ ಯಾಡನಂತೆ ಕೈಗೆ ಗೊಣ್ಣೆ ವಾಚ್ ಕಟ್ಟಿಕೊಂಡು ಇರುವೆ ಬಾಯಿಂದ ಸಕ್ಕರೆ ಹರಳು ಬಿಡಿಸಿಕೊಳ್ಳುವುದಷ್ಟೆ. ಆದರೆ 'ಒಡಲಾಳ'ದ ಗುರುಸಿದ್ದನೂ ಒಬ್ಬ ಒಳಗಿದ್ದಾನಲ್ಲ... ಗುದ್ದಿಕೊಂಡು ಹೊರಬರದೆ ಇರುತ್ತಾನೆಯೇ? ಆಗ ಕದ್ದ ಕಡಲೆಕಾಯಿ ತಿನ್ನುವ ಸೀನಿನಲ್ಲಿ ಹುಸಿ ಧಿಮಾಕಿನ ಬಲೂನು ಊದಿಬಿಡುತ್ತಾನೆ. ಕಣ್ಣೆದುರಿರುವ ನಿರ್ಗತಿಕ ಸ್ಥಿತಿಯನ್ನು ತಿನ್ನುವುದೇ ಸಾಕ್ಷಿ ಹೇಳುತ್ತಿರುವಾಗಲೂ ಕೂಡ. ಅವರ ಮುಂದೆ ಈ ನವ ಆರ್ಥಿಕತೆಯ ಢೋಂಗಿ ವಾಚು ನಡೆಯುತ್ತದೆಯೇನು? ಬಲೂನಿಗೆ ಸೂಜಿಮೊನೆ ತಾಕಿಸುತ್ತಾರೆ. 'ಇವನದರಂತೆ ಇನ್ನೂ ಯಾರೋ ಒಬ್ಬನದು ಇಸ್ಪೀಟಾಟದಲ್ಲಿ ವಜಾ ಆಗಿ ಬಂದದೆ ತಗಾ'... ಸೇಮ್ ಟು ಸೇಮ್ ದ್ಯಾನ್ ಮೋರ್ ಬೆಟರ್ ಸ್ಥಿತಿ ಇದು. ಅವರ‍್ಯಾರಿಗೂ ಹೊತ್ತಿಗೆ ಬಾರದ ಈ ವಾಚನ್ನು, ಅದೂ ಜುಗಾರಿ ಆಟದ ಭಾಗವಾಗಿ ಕೊಡಮಾಡಿರುವುದು ಇವತ್ತಿನ ನವ ಆರ್ಥಿಕತೆಯ ವರಪ್ರಸಾದ ಎಂಬುದನ್ನು ಧ್ವನಿಸುತ್ತದೆ ಅಂದುಕೊಂಡಿದ್ದೇನೆ. ಹೀಗೆ ಕೊಲಂಬಿಯಾ ಜುಗಾರಿ ಆಟದ ಅಂಕಕ್ಕೆ ನಾನು ಕತ್ತಿ ಕಟ್ಟಿಕೊಂಡು ದುಮುಕಬೇಕಾದ ದುರಂತ ಬಿಚ್ಚಿಕೊಂಡಿದ್ದು ಇಂಥ ಹಿನ್ನೆಲೆಯಲ್ಲಿ.

ಐದು ವರ್ಷಗಳಾದರೂ ಬದಲಾಗದ ಚಿತ್ರ, ಕಣ್ಣೆದುರೇ ಕಲಿಯುವ ತಾಣ, ಕಲಿಸುವವರೂ ಕಾದು ಕೂತಿದ್ದರೂ ಕಲಿಕೆಗೆ ಮಾತ್ರ ಒಲ್ಲದೆ ಕಲಿಕೆಗಿಂತ ಗಳಿಕೆಯೇ ಮೂಲಮಂತ್ರವಾಗಿರುವ ಈ ಹೊತ್ತಿದು. ಈ 'ಅಗ್ನಿದಿವ್ಯ' ದಾಟುವುದರ ಭಾಗವಾಗಿಯೇ ನಾನು ಕೊಲಂಬಿಯಾ ಕಡಲಿಗೆ ದುಮುಕಿದ್ದು. ಈ 'ಸಮುದ್ರೋಲ್ಲಂಘನ'ದಿಂದಾದರೂ ರಾಗಿ ಕಾಳಷ್ಟು ಕಲಿಯುವ ದಾಹ ಚಿಗುರುವುದಕ್ಕೆ ದಾರಿಯಾಗಬಹುದೆಂದು. ಅದು ಬಿಟ್ಟು ಬುಡ್ಡಿ ದೀಪಗಳಾಗಿಯೇ ಬೆಳಗಬೇಕಾದ ಕತ್ತಲು ಮನೆಗಳೇ ಎಷ್ಟೋ ಇರುವಾಗ ಕಡಲದಂಡೆಗಳ ಸರ್ಚ್‌ಲೈಟ್ ಆಗಿಬಿಡುವ ಆಸೆಯಂತೂ ಇರಲಿಲ್ಲ.

ತಂಡದಲ್ಲಿ ಐದು ಜನರಿಗಷ್ಟೇ ಅವಕಾಶ. ಅದರಲ್ಲಿ ಒಬ್ಬರು ನಿರ್ದೇಶಕರು ಹಾಗೂ ಅವರೇ ಈ ಯೋಜನೆಯ ಕೇಂದ್ರಬಿಂದು. ಮತ್ತೊಬ್ಬರು ಸಂಗೀತ ತಜ್ಞರು ಮತ್ತು ನಟರು. ಇನ್ನುಳಿದ ಮೂವರು ಯಾರಾಗಬೇಕು? ಇದು ಪ್ರಶ್ನೆ. ಸತ್ಯವ್ರತರಾವ್‌ರಾವುತರೇನೋ 'ನೀವು ಹಸಿಮಣ್ಣು ಕೊಡಿ ಬೊಂಬೆ ಮಾಡುತ್ತೇನೆ' ಎಂದರು. ಆದರೆ ಸಂಗೀತ ತಜ್ಞರು ವೃತ್ತಿಪರರೇ ಬೇಕೆಂದರು. ಅವರ ವೃತ್ತಿಪರತೆಯನ್ನು ಮಾನದಂಡ ಮಾಡಿಕೊಂಡರೆ 'ಆದಿಮ'ದ ಮೂಲ ನಿವಾಸಿ ಕಲಾವಿದರು ಹೊರಗುಳಿಯಬೇಕಾಗುವ ಅನಿವಾರ್ಯತೆ. ಕೊನೆಗೆ 'ಆದಿಮ'ದ ಮೂವರನ್ನು ಪಾಸ್‌ಪೋರ್ಟ್ ಹಂತಕ್ಕೆ ಸಿದ್ಧಗೊಳಿಸಿದೆವು. ಮುನಿರೆಡ್ಡಿ, ರಾಜಪ್ಪ, ಮತ್ತು ಅಂಜಲಿ ಹೋಗುವುದೆಂದು ತೀರ್ಮಾನವಾಯಿತು. ಇದನ್ನು ಸಹಿಸದ ಸಂಗೀತ ಸಾಮ್ರಾಟರು 'ಬಂಡಾಯ' ಎದ್ದರು. ನೇರವಾಗಿ ಅಲ್ಲ. ಅಸಹಕಾರ ರೂಪದಲ್ಲಿ. ಕೊನೆಗೆ ನಾವಿಕನ ಮಾತೂ ಧಿಕ್ಕಾರಗೊಂಡಿದ್ದರಿಂದ ಅನಿವಾರ್ಯವಾಗಿ ಅವರನ್ನು ಬಿಟ್ಟು ತೀರ್ಮಾನಿಸಬೇಕಾಯಿತು. ಈ ಮಧ್ಯೆ ಯಥಾಪ್ರಕಾರ ಕೊನೆಯ ನಿಮಿಷದಲ್ಲಿ ಕೈಕೊಟ್ಟು ಹಿಂದೆ ಸರಿಯುವುದನ್ನೇ ಕಲೆಯಾಗಿಸಿಕೊಂಡಿರುವ ಮುನಿರೆಡ್ಡಿ ನುಣುಚು ನರಿಯಂತೆ ಬಿಲ ಸೇರಿಕೊಂಡರು. ಹೀಗೆ ಇವರಿಬ್ಬರ ಬದಲಿಗೆ ರಾಜೇಶ್ ಮತ್ತು ಶರಣ್ ಜೊತೆಗೂಡಿದರು. ಇವರೂ ಕೂಡ ಆದಿಮಕ್ಕೆ ಹೊರಗಿನವರೇನೂ ಆಗಿರಲಿಲ್ಲ. ಒಟ್ಟಾರೆ ಇದೆಲ್ಲಾ ಕುರುಕ್ಷೇತ್ರ ಯುದ್ಧಕ್ಕೂ ಮೊದಲು ನಡೆದ ಪರ್ಮುಟೇಷನ್, ಕಾಂಬಿನೇಷನ್‌ಗಳ ಕಣ್ಣಾಮುಚ್ಚಾಲೆ ಆಟ. ಅಂತೂ ಕೊಲಂಬಿಯಾ ತೆಪ್ಪ ಸಿದ್ಧವಾಯಿತು.

ಇದೆಲ್ಲವನ್ನೂ ವಿವರಿಸಿ ಈ ಪ್ರಯೋಗಕ್ಕೆ



ತಗಲಬಹುದಾದ ಅಂದಾಜು ವೆಚ್ಚ ಹತ್ತು ಲಕ್ಷಗಳೆಂದು, 'ಸಂಸ್ಕೃತಿ ಇಲಾಖೆ' ಈ ಬಾಬತ್ತಿನ ನೆರವು ನೀಡಬೇಕೆಂದು ಈ ಹಿಂದೆಯೇ ಮನವಿ ಮಾಡಿಕೊಂಡಿದ್ದೂ ಆಯಿತು. ಯಾಕೆಂದರೆ ಕಲಾವಿದರ 'ಅಕ್ಕಾ' ಯಾತ್ರೆಗಾಗಿ ಕೋಟ್ಯಂತರ ರೂಪಾಯಿ ವೆಚ್ಚಮಾಡುವ ಸಂಸ್ಕೃತಿ ಇಲಾಖೆಗೆ ಈ ಮೊತ್ತ ನೀಡುವುದು ನ್ಯಾಯಸಮ್ಮತವೆಂದು ಭಾವಿಸಿದ್ದೆವು. ಅದೂ ಬೇರೆ ಇಂಥದ್ದೇ ಮೂರು ನಾಟಕಗಳನ್ನು ಹಿಂದಿ ರಂಗರೂಪಕ್ಕೆ ಅಳವಡಿಸಿ ಭಾರತಯಾನ ಹೊರಟಿದ್ದ ಸಾಣೇಹಳ್ಳಿ ಸ್ವಾಮಿಗಳ ಪಾದಕ್ಕೆ ಸ್ವಯಂ ಮುಖ್ಯಮಂತ್ರಿಯಾಗಿದ್ದ ಸನ್ಮಾನ್ಯ ಯಡಿಯೂರಪ್ಪನವರೇ ಖುದ್ದು ಒಯ್ದು ಇಪ್ಪತ್ತೈದು ಲಕ್ಷ ರೂಪಾಯಿಗಳ ಅನುದಾನದ ಚೆಕ್ಕನ್ನು ಅರ್ಪಿಸಿದ್ದ ಚಿತ್ರ ಪತ್ರಿಕೆಗಳಲ್ಲಿ ಅಚ್ಚಾಗಿತ್ತು.

ಒಂದೂವರೆ ತಿಂಗಳ ಕಾಲ ಯಾವುದೇ ಪ್ರತಿಕ್ರಿಯೆ ನೀಡದೆ ಮೌನವಹಿಸಿದ್ದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಹೊರಡುವುದು ಇನ್ನೆರಡು ದಿನ ಬಾಕಿ ಇರುವಾಗ 'ನೀಡಲು ಬರುವುದಿಲ್ಲ'ವೆಂಬ ಆದೇಶ ನೀಡಿತು. ಇಲಾಖೆ ನೀಡುವ ಧನಾತ್ಮಕ ಪ್ರತಿಕ್ರಿಯೆಯ ಮೇಲೆ ನಮ್ಮ ಪ್ರವಾಸ ನಿಂತಿತ್ತು. ಇಲಾಖೆ ಸಮಾಜದ ಕೆಳಸ್ತರಗಳ ಸಾಂಸ್ಕೃತಿಕ ನೆಲೆಗಟ್ಟುಗಳಿಗೆ ಆದ್ಯತೆ ನೀಡಬೇಕಾದ್ದು ಅದರ ಸಂವಿಧಾನಿಕ ಬದ್ಧತೆಯಾಗಿರುವುದರಿಂದ ಇಂತಹ ನಿರೀಕ್ಷೆ ಸಹಜವೇ ಆಗಿತ್ತು. ಅಂಥ ಆದೇಶ ಪತ್ರವನ್ನೇ ಆಧಾರ ಭೋಗ್ಯಕ್ಕೆ ಇಟ್ಟು ಪ್ರವಾಸಕ್ಕೆ ಟಿಕೇಟುಗಳನ್ನು

'ಬುಕ್' ಮಾಡಿಸಿಕೊಳ್ಳುವುದು ನಮ್ಮ ಯೋಜನೆಯಾಗಿತ್ತು. ಇದು ನಮ್ಮ ಪಾಲಿಗೆ ಜುಗಾರಿ ಆಟವೇ ಸರಿ.

ನಾಳೆ ಹೊರಡಬೇಕು... ಇವತ್ತು ಪ್ರವಾಸದ ಟಿಕೇಟುಗಳಿಗೆ ವ್ಯವಸ್ಥೆಯಾಗಬೇಕು. ಈ ಮಧ್ಯೆ ಹೀಗೊಂದು ವೇಳೆ ಆಗಬಹುದೇನೋ ಎನ್ನುವ ಅನುಮಾನವೂ ಆಗುವಂತಹ ಒಂದೆರಡು ಪ್ರಸಂಗಗಳು ನಡೆದುಹೋಗಿದ್ದವು. ಅದರಲ್ಲಿ ಮೊದಲಿಗೆ 'ನಯನ ಸಭಾಂಗಣ'ದಲ್ಲಿ ತತ್ವಪದಕಾರರ ರಾಜ್ಯಮಟ್ಟದ ಸಮಾವೇಶ. ವೀರೇಶಬಳ್ಳಾರಿ ಅತಿಥಿಯಾಗಿ ಆಹ್ವಾನಿಸಿದ್ದರು. ನಾನೂ ನಾಲ್ಕು ನುಡಿ ತತ್ವಪದ ಕೇಳಲು ಸಿಗುವ ಆಸೆಯಿಂದ ಹೋಗಿದ್ದೆ. ಮನುಬಳಿಗಾರರು ಉದ್ಘಾಟಕರು. ನಾನು ಅತಿಥಿ. ವೇದಿಕೆಯ ಬದಿಯಲ್ಲಿ ತತ್ವಪದಕಾರರು ಹಾಡುತ್ತಿದ್ದಾರೆ 'ದಿಟದಂತೆ ತೋರುವ ಹುಸಿಯ' ನಂಬಿ ಎಂಬ ತತ್ವಪದ. ಅದನ್ನು ಕೇಳಿಯೂ ಉದ್ಘಾಟನೆ ನೆರವೇರಿಸಿದ ಬಳಿಗಾರರು ಆಡಿದ ಮಾತಿಗೆ ದಿಟದ ನೆಲಗಟ್ಟಿರಲಿಲ್ಲ. ಅವರು ಇಲಾಖೆಗೆ ಇನ್ನೂರು ಚಿಲ್ಲರೆ ಕೋಟಿಗಳನ್ನು ಸರ್ಕಾರ ಉದಾರವಾಗಿ ನೀಡಲಿದೆಯೆಂದೂ ಆ ಹಣದಿಂದ ಜನಪದ ಹಾಗೂ ತತ್ವಪದಕಾರರಿಗೆ ಸುಭದ್ರ ನೆಲೆಗಟ್ಟು ಕಟ್ಟುವುದಾಗಿ ಹೇಳಿದರು. ಅಲ್ಲದೆ ಏಕತಾರಿಯನ್ನು ಐವತ್ತು ಸಾವಿರ ಜನರಿಗೂ ಕೇಳಿಸುವಂತಹ ಕೌಶಲ್ಯಗಳನ್ನು ಕರಗತಮಾಡಿಕೊಳ್ಳುವಂತೆ ಕರೆ ನೀಡಿದರು. ನನಗೆ ಅದು ಇವತ್ತಿನ ವಾಸ್ತವದಲ್ಲಿ ಅಸಂಗತದಂತೆ ಕಂಡಿತು. ಮುಂದೆ ನನ್ನ ಮಾತಿನಲ್ಲಿದ್ದದ್ದೂ ಅದೇನೆ. 'ಹಣದಿಂದ ದಲ್ಲಾಳಿಗಳು ಸೃಷ್ಟಿಯಾಗಬಹುದೇ ಹೊರತು ಕಲಾವಿದರಲ್ಲವೆಂದೂ, ಏಕತಾರಿಯು ಈ ನೆಲದ ಸಂತರ ಕೈಸೇರಿ ಬಂದೂಕು, ಕತ್ತಿಗಳಿಂದಲೂ ಆಗದೆ ಇರುವುದನ್ನು ಆಗುಮಾಡಿದೆಯೆಂದೂ ಆ ಪರಂಪರೆಗೆ ಅದರದೇ ಆದ ಘನತೆ ಇರುವುದೆಂದೂ, ಅದು ಅತ್ಯಂತ ಆಪ್ತಕೂಟಕ್ಕಾಗಿ ರೂಪಿತವಾಗಿದೆಯೆಂದೂ ಐವತ್ತು ಸಾವಿರ ಜನರಿಗೆ ಅಂದೊಡನೆ ಆ ಘನತೆ ಮರೆಯಾಗುತ್ತದೆಯೆಂದು ಹೇಳಿದೆ. ಅದನ್ನವರು ಹೇಗೆ ಗ್ರಹಿಸಿದರೋ ತಿಳಿಯದು. ಆದರೆ ಅದಕ್ಕೆ ಅವರು ಸರ್ಕಾರಿ ಸಮಜಾಯಿಷಿಯಂಥ ರೀತಿಯಲ್ಲಿ ಪ್ರತಿಕ್ರಿಯಿಸಿದರು. ಈ ಮಧ್ಯೆ ಇಲಾಖೆಯಿಂದ ನನಗಾದ ವೈಯಕ್ತಿಕ ಅವಮಾನಗಳನ್ನೂ ಅದಕ್ಕೆ ನಾನು ಕೇಳಿದ ಸಮರ್ಥನೆಯನ್ನೂ ಪ್ರಸ್ತಾಪಿಸಿದ್ದೆ. ಅದು ಹೀಗಿದೆ.

'ಬೆಳಗಾವಿಯಲ್ಲಿ ನಡೆದ ವಿಶ್ವಕನ್ನಡ ಸಮ್ಮೇಳನದ 'ರಂಗಭೂಮಿ'ಗೆ ಸಂಬಂಧಿಸಿದ ವಿಚಾರ ಸಂಕಿರಣಕ್ಕೆ ನನ್ನನ್ನು ಆಹ್ವಾನಿಸಿ ಹಳೆಯ ನನ್ನ ವಿಳಾಸಕ್ಕೆ ಬರೆದ ಪತ್ರ ಉದ್ಘಾಟನೆಯಾದ ಮರುದಿನ ನನಗೆ ಸಿಕ್ಕಿತು. ಇದಕ್ಕೂ ಮೊದಲೇ ಪತ್ರಿಕೆಗಳಲ್ಲಿ ನಾನು ಉದ್ಘಾಟಿಸಲಿರುವ 'ಕಾರ್ಯಕ್ರಮ ಪಟ್ಟಿ ಕಂಡು' ಒಂದು ಪತ್ರ ಬರೆದಿದ್ದೆ. 'ಗಣಿ ಬಗೆಯುವ ರಾಜಕಾರಣದಲ್ಲಿ ಇರುವೆಯ ಮಾತಿಗೆ ಬೆಲೆ ಇಲ್ಲವೇ?' ಎಂದು

ಪತ್ರದ ಆಶಯದಂತೆ ಸಂಸ್ಕೃತಿ ನೀತಿಯ ಬಣ್ಣ ಬಯಲಾಗಿತ್ತು. ಹೀಗಾಗಿ ಮನುಬಳಿಗಾರರ ಮೌನದ ಹಿಂದೆ ಈ ಕಹಿ ಇತ್ತೆಂಬುದು ಮುಂದಿನ ಅವರ ನಡಾವಳಿಗಳಿಂದ ತಿಳಿದು ಬಂತು. ಅಲ್ಲದೆ ಈ ಹಿಂದೆ ಎರಡು ಬಾರಿ ಉದಾರ ನೆರವು ನೀಡಿದ್ದರೂ ನಾನು ಮಾತನಾಡುವ ಧಾಟಿ ಉಪಕಾರಸ್ಮರಣೆ ಇಲ್ಲದವನನ್ನಾಗಿ ಚಿತ್ರಿಸಿ, ಅದರ ಹಿಂದಿನ ನೋವಿನ ಮುಖ ಅವರಿಗೆ ತಿಳಿಯದೆ ಹೋಯಿತು. ಮನುಬಳಿಗಾರರು ವೈಯಕ್ತಿಕವಾಗಿ ನನಗೆ ಪರಿಚಿತರಲ್ಲ. ನಮ್ಮ ಟ್ರಸ್ಟಿಗಳಲ್ಲಿ ಒಬ್ಬರಾಗಿದ್ದ ಡಾ॥ ಕೆ.ವೈ.ನಾರಾಯಣಸ್ವಾಮಿ ಮತ್ತು ಎಸ್.ಜಿ.ಸಿದ್ಧರಾಮಯ್ಯನವರ ಕಾಳಜಿಯಿಂದ, ಅವರಿಬ್ಬರೂ ನನ್ನನ್ನು ಮನುಬಳಿಗಾರರ ಬಳಿ ಕರೆದೊಯ್ದು ಪರಿಚಯಿಸಿ, 'ಆದಿಮ'ಕ್ಕೆ ಸಾಕಷ್ಟು ಅನುದಾನ ನೀಡುವಂತೆ ಕೋರಿದರು. ಅದು ಹತ್ತು ಲಕ್ಷಕ್ಕೆ ಬಂದು ಮುಟ್ಟಿತು. ಮುಂದೆ 'ಇದು ಔದಾರ್ಯ'ದ ಫಲ ಎಂಬುದನ್ನು ನೆನಪಿಸುತ್ತಾ ಹೋದಾಗ ನಾನು 'ಅಷ್ಟೇ ಅಲ್ಲ ಅದು ಅಂಥ ಔದಾರ್ಯಕ್ಕೆ ಅರ್ಹವಾಗಿಲ್ಲವೇನು?' ಎಂದದ್ದು ಹುಡುಗಾಟಕ್ಕೆ ತಿರುಗಿ 'ಅರ್ಹತೆ ಇದ್ದಿದ್ದಲ್ಲಿ ಇದುವರೆಗೂ ಯಾಕೆ ತೆಗೆದುಕೊಳ್ಳಲಾಗಲಿಲ್ಲ' ಎಂಬಲ್ಲಿಗೆ ಬಂತು. ನಾನು ಕಳೆದ ವರ್ಷ ಅಂತಹ ಇಲಾಖೆಯ ಯಾವ ನೆರವನ್ನೂ ಯಾಚಿಸದೆ ನಮ್ಮ ಸಂಪನ್ಮೂಲ ಮಿತಿಯಲ್ಲೇ ಶಿಬಿರ ನಡೆಸಿ ಯಶಸ್ವಿಗೊಳಿಸಿದೆವು. ಇದನ್ನೂ ಬಿಡದೆ ಅಲ್ಲಿ ಪ್ರಸ್ತಾಪಿಸಿದ್ದೆ. ಇದೆಲ್ಲದರ ಪರಿಣಾಮ ಬಳಿಗಾರರ ಮೌನವ್ರತಕ್ಕೆ ಕಾರಣವಾಯಿತು. ಮಾಜಿ ಸಭಾಪತಿ ವಿ.ಆರ್.ಸುದರ್ಶನ್ ಅವರು ಏನಾಯಿತೆಂದು ಕೇಳಲು ಫೋನು ಮಾಡಿದಾಗ 'ನಾವು ಎಷ್ಟೇ ಸಹಾಯ ಮಾಡಿದರೂ ನಮ್ಮನ್ನೇ ಬಾಯಿಗೆ ಬಂದಂತೆ ಬಯ್ಯುವುದಾಗಿ' ನನ್ನ ಹೆಗಲಿಗೆ ದೋಷದ ಮೂಟೆ ಹೊರೆಸಿದ್ದರು. ನನ್ನ ಬಾಧೆಗಳಿಗೆ ಹಗಲಿರುಳೂ ಸಾಲದು ಅನ್ನುವಂತೆ ಈ ಹೊತ್ತು ನನಗೆ ಇನ್ನೊಬ್ಬರ ಮೇಲೆ ನಿಂದೆ ಹೊರಿಸುತ್ತಾ ತಿರುಗುವಷ್ಟು ಪುರುಸೊತ್ತಿಲ್ಲ ಎಂಬುದು ಒಂದೆರಡು ಗಳಿಗೆ ಜತೆಗಿದ್ದರೇನೆ ತಿಳಿಯಬಹುದಾದ ಸಂಗತಿ. ಹೀಗಿದ್ದೂ ನಾನು ಬಳಿಗಾರರ ವೈಯಕ್ತಿಕ ತೀರ್ಮಾನದ ಕೃಪೆಯನ್ನಷ್ಟೇ ಅವಲಂಭಿಸುವಂತಹ ಸಂದರ್ಭ ಸೃಷ್ಟಿಯಾಯಿತು. ಅದರ ಪ್ರತಿಫಲನ ಅವರ ನಿರಾಕರಣೆ ಪತ್ರ, ಅದನ್ನ ಕಂಡು ಮರುಗಿದ ಕೆಲವು ಸಂವೇದನಾಶೀಲರು ಅದನ್ನೇ ಮುಂದೆ ಮಾಡಿ ನಾಡಿನ ಹೆಸರಾಂತ ಪದ್ಮಶ್ರೀ ಖ್ಯಾತಿಯ ದೇವನೂರ ಮಹಾದೇವರಂಥವರ ಆದಿಯಾಗಿ, ನೂರಕ್ಕೂ ಹೆಚ್ಚು ಸಾಂಸ್ಕೃತಿಕ ಗಣ್ಯರು ಸಹಿಮಾಡಿ ಮನವಿ ಕೊಟ್ಟು ಮರುಪರಿಶೀಲನೆಗೆ ಒತ್ತಾಯಿಸಿದರು. ನಾನೂ ಮರುಪರಿಶೀಲಿಸಿ ಸಹಾಯ ಮಾಡಬೇಕೆಂದು ಕೋರಿರುವೆ. ಹತ್ತುಲಕ್ಷಕ್ಕೆ ಬದಲು ಎರಡು ಲಕ್ಷ ರೂಪಾಯಿಗಳಿಗೆ



ಮಿತಿಗೊಳಿಸಿ ಶಿಪಾರಸ್ಸುಗೊಂಡಿರುವ ಆ ಕಡತ ಕನ್ನಡ ಭವನ ದಾಟಿ ವಿಕಾಸಸೌಧದ ಮೆಟ್ಟಿಲೇರಿದೆಯಂತೆ! ಬಂದರೆ ಆ ಎರಡು ಲಕ್ಷ ಗ್ಯಾರಂಟಿ. ಇದೀಗ ಹೇಗೋ ಮಾಡಿ ಹಲವರ ಸಾಲ ಸಹಕಾರಗಳಿಂದ ಕೊಲಂಬಿಯಾ ಪ್ರವಾಸ ವೆಚ್ಚದ ಅರ್ಧದಷ್ಟು ಕಡ ತೀರಿದೆ. ಮಿಕ್ಕಿದ್ದು ತೀರುವ ಭರವಸೆ ಸಿಕ್ಕಿದೆ. ಆದರೆ ಈ ಮಧ್ಯೆ ಎಂಟು ಲಕ್ಷದ ಮೊತ್ತದ ಸಾಲದಲ್ಲಿ ನಾಳೆ ಹೋಗಲಿದ್ದ ವಿಮಾನಕ್ಕೆ ಇಂದು ಟಿಕೇಟು ತೆಗೆದುಕೊಟ್ಟ ನಂಬಿಗಸ್ಥರಿಗೆ ಕೊಟ್ಟಿದ್ದ ಮಾತೊಂದು ನೆರವೇರದೆ ಹೋಯಿತು. ಕೊಟ್ಟ ಮಾತಿಗೆ ತಪ್ಪಿ ನಡೆಯಬೇಕಾಯಿತು.

ಇದೆಲ್ಲದರಿಂದ ಒಂದು ಅಮೂಲ್ಯ ಪಾಠವನ್ನಂತೂ ಕಲಿತಾಗಿದೆ. ನಿಜದ್ರೋಣನಾದವನೇ ಕಲಿಸಲು ಬಂದರೂ ಏಕಲವ್ಯ ಆಗುವ ಬದಲಿಗೆ ಏಕಲವ್ಯರಾದವರೂ ಅರ್ಜುನರೂ ದ್ರೋಣರೂ ಆಗಿಬಿಟ್ಟಿತು. ಹೊರಗಿನವರಲ್ಲವೆಂದು ಭಾವಿಸಿದವರು 'ಕೊಲಂಬಿಯಾ' ನೆಲದಲ್ಲೂ ತಾವು 'ಆದಿಮ'ದ ಭಾಗವಲ್ಲವೆಂದು ಹೊರಗಿನವರೆಂದೂ ಸಾರಿಬಿಟ್ಟರು. ಅದಕ್ಕಿಂತಲೂ ಉನ್ನತ ಕೌಶಲ್ಯ ಕಲಿತ ನೆಲೆಗಳೇ ನಮ್ಮ ಗುರುಕುಲಗಳೆಂದು ಸಾರಿದ್ದರಿಂದ ನಮ್ಮ ತಂಡಕ್ಕೆ ಮತ್ತೊಂದು ಸಂಕಟದ ಸನ್ನಿವೇಶ. ಅಂತಿಮವಾಗಿ ಈ ಸಾಲದ ಸವಾಲನ್ನು ಕಾರ್ಯಕ್ರಮ ನೀಡಿ ಸಂಗ್ರಹಿಸಿ ತೀರಿಸುವುದಾಗಿ ಮಾಧ್ಯಮಗಳಲ್ಲೂ ಘೋಷಿಸಿಕೊಂಡವರೂ ಎರಡು ಗಳಿಗೆ ಮಾತಿಗೂ ಟೈಮಿಲ್ಲದಷ್ಟು ಬ್ಯುಸಿಯಾಗಿ ಹೋದರು. ಪಾಪ ಅವರು ಹಿಂತಿರುಗುವ ವೇಳೆಗಾಗಲೆ ಅವರ ಬುಡಕ್ಕೆ ಬತ್ತಿ ಇಟ್ಟು ಸ್ಥಾನಪಲ್ಲಟಗೊಳಿಸಿದ್ದರು. ಅವರು ತಾನೇ ಏನು ಮಾಡಿಯಾರು?

ಈಗ ಕೊಲಂಬಿಯಾ ತೇಲುತೆಪ್ಪ ಮುರಿದುಬಿದ್ದು ಚೆಲ್ಲಾಪಿಲ್ಲಿಯಾಗಿದೆ. ಸಾಲದ ಹೊರೆ ಇನ್ನೂ ಇಳಿದಿಲ್ಲ. ಈ ತೆಪ್ಪದ ಕಳಸವಾದ 'ಏಕಲವ್ಯ ಉವಾಚ' ನಾಡಿನ ಪ್ರತಿ ಹಳ್ಳಿಗೂ ತಲುಪುವುದು ಆಗಲೇಬೇಕಾದ ನಮ್ಮ ಆದ್ಯತೆಯ ಕೆಲಸ. ಆದರೇನು ಮಾಡುವುದು ಸಾಲದ ಹೊರೆ ಇನ್ನೂ ಇಳಿದಿಲ್ಲವಲ್ಲ... ಯಾರು ಇಳಿಸುತ್ತೀರಿ ಈ ಹೊರೆ ಎಂದಾಗ 'ನಾನು' ಎಂದು ಮುಂದೆ ಬಂದವಳು 'ಅಂಜಲಿ'. ಕೂಲಿ ಮಾಡುವ ಅವರ ತಂದೆ ತಾಯಿ 9,500 ರೂಪಾಯಿ ತಂದು ಕೊಟ್ಟಿದ್ದಾರೆ. ಇನ್ನು ಮಿಕ್ಕಿದ್ದನ್ನು ಅಂಜಲಿ ತೀರಿಸುತ್ತಾಳಂತೆ. ಹೌದು ಅಂಥ ಕಲಿಕೆಗೆ ತನ್ನನ್ನೇ

ಏಕಲವ್ಯ ಆಗುವ ಬದಲಿಗೆ ಏಕಲವ್ಯರಾದವರೂ ಅರ್ಜುನರೂ ದ್ರೋಣರೂ ಆಗಿಬಿಟ್ಟಿತು. ಹೊರಗಿನವರಲ್ಲವೆಂದು ಭಾವಿಸಿದವರು 'ಕೊಲಂಬಿಯಾ' ನೆಲದಲ್ಲೂ ತಾವು 'ಆದಿಮ'ದ ಭಾಗವಲ್ಲವೆಂದು ಹೊರಗಿನವರೊಂದೂ ಸಾರಿಬಿಟ್ಟರು. ಅದಕ್ಕಿಂತಲೂ ಉನ್ನತ ಕೌಶಲ್ಯ ಕಲಿತ ನೆಲೆಗಳೇ ನಮ್ಮ ಗುರುಕುಲಗಳೆಂದು ಸಾರಿದ್ದರಿಂದ ನಮ್ಮ ತಂಡಕ್ಕೆ ಮತ್ತೊಂದು ಸಂಕಟದ ಸನ್ನಿವೇಶ. ಅಂತಿಮವಾಗಿ ಈ ಸಾಲದ ಸವಾಲನ್ನು ಕಾರ್ಯಕ್ರಮ ನೀಡಿ ಸಂಗ್ರಹಿಸಿ ತೀರಿಸುವುದಾಗಿ ಮಾಧ್ಯಮಗಳಲ್ಲೂ ಘೋಷಿಸಿಕೊಂಡವರೂ ಎರಡು ಗಳಿಗೆ ಮಾತಿಗೂ ಟೈಮಿಲ್ಲದಷ್ಟು ಬ್ಯುಸಿಯಾಗಿ ಹೋದರು.

ಒಡ್ಡಿಕೊಂಡಿರುವವಳು ಅಂಜಲಿ. ಅವಳಿಗೆ ಈ 10 ಲಕ್ಷ ಸ್ಕಾಲರ್‌ಶಿಪ್. ಸಾಲದ ಲೆಕ್ಕದಲ್ಲಿ. ಹೇಗೆ ಹಿಂತಿರುಗಿಸುವಳೋ ಕಾಣೆ. ಅಂತೂ ತೀರಿಸಿಯೇ ತೀರಿಸುತ್ತಾಳೆ. ಇನ್ನೊಬ್ಬರ ಮನೆಯಲ್ಲಿ ಜೀತಕ್ಕಿದ್ದಾದರೂ... ನನ್ನ ನಂಬಿಕೆ ಇದು. ಇಂಥದ್ದೇ ಸಂದರ್ಭದಲ್ಲಿ ಟ್ರಸ್ಟಿಗಳ ಸಭೆಯೊಂದರಲ್ಲಿ ನಾನೂ ಕೂಡ ಕೋಟಿ ಇದ್ದರೂ ಜೀತ ಮಾಡಿ ತೀರಿಸುವುದಾಗಿ ಹೇಳಿದೆ. ಕೇಳಿದವರು "ಕಾಸ್ಟ್ಲೀ ಆಯಿತಲ್ಲ, ಜೀತಕ್ಕೆ ಕೋಟಿ ಕೊಡೋದನ್ನ ನಾವೆಲ್ಲೂ ಕೇಳಿಲ್ಲ" ಅಂದರು. ನನಗೆ ಹಾಗೆ ಹೇಳುವುದು ಕಷ್ಟ. ನಂಬುವುದರ ಹೊರತು. ಹುಲ್ಲುಕಡ್ಡಿ ಎತ್ತಲು ಬಗ್ಗಿದವನು ಬ್ರಹ್ಮಾಂಡವನ್ನೇ ಹೊರಬಲ್ಲ. ಇದು ನನ್ನ ನಂಬಿಕೆ. ಇದೇ ನನ್ನ ತಾಯಿ.

ಕೊಲಂಬಿಯಾದ ಮುರಿದ ತೆಪ್ಪ ಇದೀಗ ರೆಡಿಯಾಗುತ್ತಾ 'ಕರ್ನಾಟಕಕ್ಕೊಂದು ಹೂಹಾರ' ಹಾಕಲು... ಗಾರ್ಲ್ಯಾಂಡಿಂಗ್ ಕರ್ನಾಟಕದ ಆರಂಭ ಹೆಜ್ಜೆ ಇಟ್ಟಾಗಿದೆ. ಕಲಿಸುವರಿರಲಿ-ಇಲ್ಲದಿರಲಿ, ಕಲಿಯುವರಿರಲಿ-ಇಲ್ಲದಿರಲಿ... ಈ ನಡೆ ಈ ಹೊತ್ತಿನದಿದ್ದಲ್ಲಿ ನಡೆಯುತ್ತದೆ. ಇಲ್ಲವಾದಲ್ಲಿ ಇಲ್ಲ. ಪ್ರಯತ್ನಿಸದೇನೆ ತೀರ್ಮಾನಿಸಿಬಿಡುವಷ್ಟು ಗಟ್ಟಿಗರಲ್ಲ ನಾವು. ಲಿವಿಂಗ್ ಟೈಮ್ಸ್‌ನ ಸವಾಲೇ ಇದು. 'ಬದುಕು... ಬದುಕಗೊಡು'. ಇದೇ ಅದರ ತಿರುಳು.

–ಕೋ.ರಾ

ಪುಟ 13ರಿಂದ

ಕಣ್ಣಪ್ಪ ಯಾಕೆ ಹೀಗಾದ...?

ಗ್ಯಾನಗೆಟ್ಟು ಎಲ್ಲವನ್ನೂ ಪಂಚೆಯಲ್ಲೇ ವಿಸರ್ಜಿಸಿಕೊಳ್ಳುವ ಮಟ್ಟ ಮುಟ್ಟಿದ್ದ ಅವತ್ತಿನ ತನ್ನ ಕುಡಿತ ಮತ್ತು ಜಗಳದಲ್ಲಿ ಆತ ವಿಸರ್ಜಿಸಿದ್ದನ್ನೆ ಅವನ ಮೈ, ಕೈ, ತಲೆಗೂ ಬಳಿದು ನಾಯಕರು ಮಲಪ್ರಕರಣಕ್ಕೆ ನಾಂದಿಗೀತೆ ಹಾಡಿದರು.

ನನಗೆ ಅದು ಹರಟೆ, ಕೋಟಿಗಾನಹಳ್ಳಿ ಆಗಿರದೆ ಬೇರೆ ಇನ್ನ್ಯಾವುದಾದರೂ ಊರಾಗಿದ್ದಿದ್ದರೆ... ಎಂಥ ನರಕ ಸೃಷ್ಟಿಯಾಗುತ್ತಿತ್ತೋ ನೆನೆದರೆ ಈಗಲೂ ಭಯವಾಗುತ್ತದೆ. ಆದರೆ ನಮ್ಮೂರು ಎಷ್ಟೇ ಭೇದ, ತಾರತಮ್ಯಗಳ ಭೌತಿಕ ಗೋಡೆಗಳು ಇದ್ದಾಗ್ಯೂ... ಒಬ್ಬರನ್ನೊಬ್ಬರು ಸಹಿಸಿ ಬಾಳುವುದರಲ್ಲಿ ಒಂದು ಮಾದರಿ. ಕಣ್ಣಪ್ಪನನ್ನೂ ಸಹಿಸಿಕೊಂಡಿತ್ತು ಎಂದ ಮೇಲೆ ಅದಷ್ಟೇ ಸಾಕಲ್ಲವೇ? ನಿಜಕ್ಕೂ ನನಗೆ ಕಣ್ಣಪ್ಪನ ಮೇಲೆ ಎಳ್ಳಷ್ಟೂ ಸಿಟ್ಟಾಗಲಿ, ಜಿಗುಪ್ಸೆಯಾಗಲಿ ಇಲ್ಲ. ಎಂದೋ ಒಮ್ಮೆ ಊರಿಗೆ ಹೋದಾಗ ದಾರಿ ಅಡ್ಡಗಟ್ಟಿ...


"ಅಪ್ಪಯ್ಯಾ ನನಗೆ ಕುಡಿಯೋಕೆ ಕಾಸು ಬೇಕು ಕೊಟ್ಟು ಹೋಗು..." ಎಂದೋ ನಮ್ಮಮ್ಮ ಜೊತೆಗಿದ್ದಲ್ಲಿ "ಮಾವಳ್ಳಕ್ಕಾ (ನಮ್ಮಮ್ಮನನ್ನು ಕಣ್ಣಪ್ಪ ಕರೆಯುತ್ತಿದ್ದದ್ದು 'ಮಾವಳ್ಳಕ್ಕ' ಎಂದೇ. ನಮ್ಮಮ್ಮನ ತವರು ಮಾವಹಳ್ಳಿ. ಅದಕ್ಕೆ ಆ ಹೆಸರು) ನಿನಮಗನಿಗೆ ಹೇಳಿ ಕೊಡುಸು" ಎಂದೋ ದುಂಬಾಲು ಬಿದ್ದು ವಸೂಲಿ ಮಾಡುತ್ತಿದ್ದ. ಅದಕ್ಕಿಂತ ಹೆಚ್ಚಿನ ವಸೂಲಿ ಮೂಲಗಳು ಆ ಹೊತ್ತಿನ ಚಳುವಳಿಯಲ್ಲಿ ಇನ್ನೂ ಮಾದರಿಗಳಾಗಿ ರೂಪುಗೊಂಡಿರಲಿಲ್ಲ. ರೂಪಗೊಂಡಿದ್ದರೂ ಅವನ್ನು ಇವನಿಂದಂತೂ ದಕ್ಕಿಸಿಕೊಳ್ಳಲಾಗುತ್ತಿರಲಿಲ್ಲ. ನಾನೇನಾದರೂ ಇಲ್ಲಸಲ್ಲದ್ದನ್ನ ಬರೆದಿದ್ದರೆ ಖಂಡಿತ ಅವನು ಗೋರಿಯಿಂದಲೂ ಎದ್ದು ಬಂದು ಜಗಳಕ್ಕೆ ನಿಲ್ಲುತ್ತಾನೆಂದು ಗೊತ್ತು. ಅದಕ್ಕೆ ಡಿಯರ್ ಕಣ್ಣಪ್ಪ... ನಿನ್ನನ್ನು ಬ್ರದರ್ಸೂ, ಕಾಮ್ರೇಡ್ಸೂ 'ಶಿಟ್‌ಮ್ಯಾನ್' ಆಗಿಸಿದ್ದರೂ, ನೀನು ನನ್ನ ಪಾಲಿಗೆ 'ಹಿಟ್‌ಮ್ಯಾನೇ ಕಣಾ...' ಇನ್ನೊಂದು ಜನ್ಮ ಎತ್ತಿ ಬರುವಂತಿದ್ದಲ್ಲಿ ಖಂಡಿತ ಇಂತಹ ಚಳುವಳಿ ನಾಯಕರ ಗಾಳಕ್ಕೆ ಎರೆಹುಳುವಾಗದಂತೆ ಜಾಗ್ರತೆವಹಿಸು. ಅಲ್ಲಿಯವರೆಗೂ ಗೋರಿಯಲ್ಲಾದರೂ ತಣ್ಣಗಿರು...!

ಗುರುತು ರಾಜಕಾರಣದ ಹೆಜ್ಜೆ ಗುರುತುಗಳು "ನಾನೂಕ್ ಆಫ್ ದಿ ನಾರ್ತ್"ನಿಂದ ನವೀನ್ ಯಾಲಯ 'ಸಿಂಧೊಳ್ಳು'ವರೆಗೆ

ನಾನು ನೋಡಿದ ಸಿನಿಮಾ



ಈ ಅಂಕಣದಡಿ ಇಬ್ಬರು ಬರೆಯುವುದಾಗಿ ಮಾತು ಕೊಟ್ಟು ಮುರಿದುಕೊಂಡರು.. ಒಬ್ಬರು ಡಾ.ಕೆ.ಪುಟ್ಟಸ್ವಾಮಿ ಮತ್ತೊಬ್ಬರು ಭಾಗ್ಯಲಕ್ಷ್ಮಿ. ಇಬ್ಬರೂ ಕೂಡ 'ಕವಿಶೈಲ'ದಲ್ಲಿ ಡಾ.ಬೆಸಗರಹಳ್ಳಿ ರಾಮಣ್ಣ ಟ್ರಸ್ಟ್ ನಡೆಸಿದ ಕಥಾ ಕಮ್ಮಟದಲ್ಲಿ ಪ್ರದರ್ಶಿಸಲಾದ ಎರಡು ಚಲನಚಿತ್ರಗಳ ಸಂವಾದ ಕುರಿತಂತೆ ಬರೆಯುವುದಾಗಿ ಹೇಳಿದ್ದರು. ಅಲ್ಲಿ ನಡೆದ ಮಹತ್ವದ ಚರ್ಚೆಯೊಂದರ ಭಾಗಗಳನ್ನು ಬಣ್ಣಿಸಿದ್ದರು ಕೂಡ. ಬರೆಯುವಂತೆ ಒತ್ತಾಯಿಸಿದರೂ ಇಬ್ಬರೂ ಬರೆಯಲಿಲ್ಲ. ಈ ಅಂಕಣ ನಿಭಾಯಿಸುವುದು 'ದಿ ಅದರ್ ಐ'ನ ಹೊಣೆಯಾಗಿರುವುದರಿಂದ ತ್ರಿವಿಕ್ರಮನಂತೆ ಹೆಣಕ್ಕೆ ಹೆಗಲು ಕೊಡುವ ಅವಕಾಶವನ್ನು ವಾರ್ತಾ ಇಲಾಖೆ ಒದಗಿಸಿಕೊಟ್ಟಿತು. ಇಲಾಖೆ ಪರಿಶಿಷ್ಟ ಜಾತಿ/ಪಂಗಡಗಳ ಆತ್ಮಗೌರವವನ್ನು, ಅಸ್ತಿತ್ವದ ಘನತೆಯನ್ನೂ ಸಾಕ್ಷ್ಯಚಿತ್ರಗಳ ಮೂಲಕ ವಿಸ್ತರಿಸುವ ಮಹತ್ವದ ಸಾಕ್ಷ್ಯಚಿತ್ರ ನಿರ್ಮಾಣದ ಯೋಜನೆಯನ್ನು



ಕೈಗೆತ್ತಿಕೊಂಡಿದೆ. ಇದರ ಭಾಗವಾಗಿ ಇತ್ತೀಚೆಗೆ ಚಿತ್ರಕತೆ ರಚನಾ ಶಿಬಿರವನ್ನು ಏರ್ಪಡಿಸಿತ್ತು. ಚಿತ್ರಕತೆ ರಚನೆಗೆ ಸಂಬಂಧಿಸಿದಂತೆ ಕ್ಷಣಕ್ಷಣಕ್ಕೂ ಉದ್ಭವಿಸುತ್ತಿದ್ದ ಸಮಸ್ಯೆಗಳನ್ನು ಬಿಡಿಸಿಕೊಳ್ಳುವ ದಾರಿಯಲ್ಲಿ ಈ ಅಂಕಣದಲ್ಲಿ ಅದನ್ನೇ ಸೂಕ್ತವೆಂದು ದಾಖಲಿಸುತ್ತಿದ್ದೇನೆ. ಇದುವರೆಗೂ ಸಂಖ್ಯಾಬಲವಿಲ್ಲದ ಗುರುತಿಲ್ಲದ, ಮುಖವಿಲ್ಲದ, ದನಿ ಇಲ್ಲದ ನೂರಾರು ಮೂಲೆಗುಂಪಾದ ಸಮುದಾಯಗಳು... ಸಾಮಾಜಿಕ ನ್ಯಾಯದ ಅಂಗಡಿ ಬಾಗಿಲು ಮುಚ್ಚಿಕೊಳ್ಳುತ್ತಿರುವ ಹೊತ್ತಲ್ಲಿ ತಮ್ಮ ಹಕ್ಕಿನ ಪಾಲಿಗಾಗಿ ಎಚ್ಚೆತ್ತುಕೊಳ್ಳುತ್ತಿವೆ. ಆದರೆ ಪಾಲು ಹಂಚಿಕೆ ತಕರಾರಿನಲ್ಲಿ ಹಂಚಿಕೊಳ್ಳುವುದಕ್ಕಾಗಿ ಯಥೇಚ್ಚ ಏನೋ ಇರುವಂತಿದೆ ಎಂದು ಭಾವಿಸಿದ್ದಾರೆ. ಅದನ್ನೇ ಹಂಚಿಕೊಳ್ಳಲು ಹಾತೊರೆಯುತ್ತಿದ್ದಾರೆ. ಆದರೆ ಈ ಹಂಚಿಕೊಳ್ಳುವುದಾದರೂ ಏನನ್ನ? ಹೇಗೆ? ಎಲ್ಲಿಂದ? ಅದಕ್ಕಾಗಿ ಯಾರನ್ನ ಆಶ್ರಯಿಸಬೇಕು? ಯಾರು ನಮ್ಮ ದನಿ? ಇತ್ಯಾದಿ ತಳಮಳದಲ್ಲಿರುವ ಅಲೆಮಾರಿ ಸಮುದಾಯಗಳು ಅಂಚಿನಲ್ಲಿರಲಿ ಗೋಚರದಲ್ಲೂ ಇಲ್ಲದಂತೆ ಶತಶತಮಾನಗಳ ಕಾಲ ಅಗೋಚರಗೊಂಡಿದ್ದವು. ಅವರು ತಮ್ಮ ಇರುವನ್ನು ಪ್ರಜಾಪ್ರಭುತ್ವದ ನ್ಯಾಯ ದೇವತೆಯ ತಕ್ಕಡಿಯ ಪಾಲಿಗಾಗಿ ಸಾಬೀತುಪಡಿಸಿಕೊಳ್ಳುವುದಕ್ಕೂ ದಾದಿ ಇಲ್ಲದವರಾಗಿದ್ದರು. ಆ ಥರ್‌ಸ್ಟನ್ ಮಹಾಶಯನೋ ತನ್ನ ಬೌದ್ಧಿಕತೆಯ ಆತ್ಮವಿಶ್ವಾಸದಿಂದ ಇವರನ್ನು ಭಿಕ್ಷುಕರನ್ನು ನೋಡುವಂತಾದರೂ ನೋಡಿ ದಾಖಲಿಸಿದ. ಇನ್ನುಳಿದ ಗೆಜೆಟಿಯರ್, ಸರ್ವೆ ರಿಪೋರ್ಟು, ಪ್ರವಾಸ ಕಥನ, ಜನಪದ, ಆಚರಣೆ ಮತ್ತು ಮುಂತಾದ 'ಆಕರ'ಗಳಿಂದಾಗಿ ಅಷ್ಟಿಷ್ಟು ಗೋಚರದ ಗುಟುಕು ಜೀವ ಉಳಿಸಿಕೊಂಡಿದ್ದಾರೆ. ಇಂಥವರನ್ನು ಸಾಕ್ಷ್ಯಚಿತ್ರಗಳಲ್ಲಿ 'ಗೋಚರ'ಗೊಳಿಸುವ ಸಾಹಸಕ್ಕೆ ಇಳಿದಿದೆ ವಾರ್ತಾ ಇಲಾಖೆ. ಉದ್ದೇಶ, ಹಂಬಲಗಳಲ್ಲಿ ಯಾವ ಕಿಂಚಿತ್ ಕುಂದೂ ಕಾಣುತ್ತಿಲ್ಲ. ಆದರೆ ಇವರು ಸಮಾಜಶಾಸ್ತ್ರೀಯ ಸಿದ್ಧ ಅಪಕ್ವ ಮಾದರಿಗಳಿಂದಾಗಿ ಸಾಕ್ಷ್ಯಚಿತ್ರವೆನಿಸಿಕೊಳ್ಳುವುದ ತಕ್ಕ ಜನಾಂಗೀಯ ಗೋಚರಕ್ಕೆ ನ್ಯಾಯ ಒದಗಿಸಲಾರದಷ್ಟು ಅಸಹಾಯಕರಾಗಿದ್ದಾರೆ. ಹಾಗೂ ಈ ತಲ್ಲಣಗಳ ಹಿಂದಿರುವ 'ಪ್ರಭುತ್ವ' ಅನುಸಂಧಾನಗಳ ಕ್ರೌರ್ಯದ ಮುಖವನ್ನು ತಿಳಿಯದವರಾಗಿದ್ದಾರೆ. ಈಗ ಇವರು ಇಡಲಿರುವ ಹೆಜ್ಜೆಯಿಂದಾಗಿ ಆ 'ಕ್ರೌರ್ಯ'ಕ್ಕೆ ಮತ್ತೊಮ್ಮೆ ರಹದಾರಿ ತೆರೆದಂತಾಗಬಹುದೇ?' ಈ ಗೊಂದಲ ಅವರದೂ ಕೂಡ. ಅವರ ಈ ತಲ್ಲಣಗಳಿಂದಾಗಿಯೇ ಅದರ ಒಂದು ಸಣ್ಣ ಪಾಲುದಾರ ನಾನಾಗಿರುವುದರಿಂದ ಅವು ನನ್ನವೂ ಆಗಿವೆ. ಇಂಥದ್ದೇ ಹೊಣೆಗಾರಿಕೆಯನ್ನು ಅತ್ಯಂತ ಕಲಾತ್ಮಕವಾಗಿ ನಿಭಾಯಿಸಿರುವ ಅನೇಕ ಗುರುಗಳೂ, ಗುರುಕುಲ ಶಾಲೆಗಳೂ ಇನ್ನೂ ಜೀವಂತ ಉಳಿದಿವೆ. ಅಂಥ ಕುರುಹುಗಳ ಬಗ್ಗೆ ಸುದೀರ್ಘ ಚರ್ಚೆಯೊಂದನ್ನು ಆರಂಭಿಸುತ್ತಿದ್ದೇವೆ; ಸಾಕ್ಷ್ಯಚಿತ್ರದ ಪ್ರಭೇದವನ್ನು ಕುರಿತಂತೆ, ಮುಂದೆ ಈ ಅಂಕಣ ಮಹತ್ವ ಬೇಡಿದಲ್ಲಿ ಪುಟ ಸಂಖ್ಯೆಯೂ ಹೆಚ್ಚಬಲ್ಲದು. ಹಾಗೆ ಹೆಚ್ಚುವರಿ ಆಗಬಹುದಾದ ಪುಟಗಳಲ್ಲಿ ನಮ್ಮ ನಡುವೆಯೇ ಇರುವ ಸಾಕ್ಷ್ಯಚಿತ್ರದ ನಿರ್ದೇಶಕರು, ತಂತ್ರಜ್ಞರು ಮುಂತಾಗಿ... ಆ ಪ್ರಭೇದಕ್ಕೆ ತಕ್ಕ ಕೊಡುಗೆ ಕೊಟ್ಟವರ ಸಂದರ್ಶನಗಳನ್ನೂ ನಡೆಸಲಾಗುವುದು. ಅಲ್ಲದೆ ಈ ಬಗ್ಗೆ ಗಂಭೀರ ಹುಡುಕಾಟದಲ್ಲಿರುವವರು ಯಾರೂ ಬರೆಯಬಹುದು. ಈ ದಿಶೆಯಲ್ಲಿ ಇಟ್ಟಿರುವ ಮೊದಲ ಹೆಜ್ಜೆಗಳಾದ 'ನಾನೂಕ್ ಆಫ್ ದಿ ನಾರ್ತ್' ಮತ್ತು

'ಸಾಂಗ್ ಆಫ್ ಸಿಲೋನ್'ಗಳಿಂದಲೇ ಚರ್ಚೆಯನ್ನು ಆರಂಭಿಸೋಣ. ಯಾಕೆಂದರೆ ಈ ಎರಡೂ ಸಾಕ್ಷ್ಯಚಿತ್ರಗಳು ಒಂದು ಬೌಗೋಳಿಕ ಪರಿಸರದಲ್ಲಿ ಸ್ಥಳೀಯ ಜನಾಂಗಗಳ ಜ್ಞಾನಶಿಸ್ತುಗಳ ಬಲಾಬಲವನ್ನು ದಾಖಲಿಸುವ ಯತ್ನಗಳೇ ಆಗಿವೆ. ಅದಕ್ಕಿಂತ ಮೊದಲು ಈ ಹೊತ್ತಿನ ಇಂತಹ ಬಿಕ್ಕಟ್ಟೊಂದನ್ನು ಬಿಡಿಸಿಕೊಳ್ಳುವಲ್ಲಿ ನಡೆದಿರುವ ಚಿತ್ರಕಥಾ ರಚನಾ ಶಿಬಿರಗಳ ಚರ್ಚೆಯನ್ನು ಅವಲೋಕಿಸೋಣ.

ನಾನು ಈ ಕ್ಯಾಟಗರಿಯಲ್ಲಿ 'ಪಾಲುದಾರ'ನಾಗಿರುವ ಸುದ್ದಿಯನ್ನು ಕೇಳಿ ನನಗೇ ನಂಬಲಾಗಲಿಲ್ಲ. ಬಹುತೇಕ ಈ ಮೂರು ದಶಕಗಳಲ್ಲಿ ನಡೆದಿರುವ ಈ 'ಸಾಕ್ಷ್ಯಚಿತ್ರದ ಉದ್ಯಮ'ದ 'ಒಳ-ಹೊರಗು' ಬಲ್ಲ ನನಗೆ ಇಂಥದ್ದೊಂದು ಅವಕಾಶ ಒದಗಿ ಬಂದದ್ದೇ ಆಶ್ಚರ್ಯವಾಗಿ ಕಂಡಿತು. ಅತ್ಯಂತ ಉತ್ಸಾಹದಿಂದ ಭಾಗವಹಿಸಲು ಮುಂದಾದೆ. ಹಾಗೂ ಮೊದಲ ಶಿಬಿರದಲ್ಲೇ ಜನಾಂಗೀಯ ಅಧ್ಯಯನ ಆಕರಗಳನ್ನು ಹಿನ್ನೆಲೆಯಾಗಿ ಬಳಸಿಕೊಳ್ಳುವಾಗ ಉದ್ಭವಿಸುವ ಸಮಸ್ಯೆಗಳನ್ನೂ ಪ್ರಸ್ತಾಪಿಸಿದ್ದೆ. ಆ ಕಾರಣಕ್ಕಾಗಿಯೇ ನನಗೆ ಚಿತ್ರಕತೆ ರಚಿಸಲು ನೀಡಲಾದ ಪೂರಕ ಸಾಹಿತ್ಯ ಸಾಮಗ್ರಿಗಳ ಅಧ್ಯಯನ ಕೈಗೊಂಡೆ.

ಮೊನ್ನೆ ನಡೆದ ಎರಡನೆಯ ಚಿತ್ರಕಥಾ ರಚನೆಯ ಶಿಬಿರದಲ್ಲಿ ಭಾಗವಹಿಸುವ ಮೊದಲು ಈ ಬಗ್ಗೆ ಸಾಕಷ್ಟು ಸಿದ್ಧತೆ ಮಾಡಿಕೊಂಡಿದ್ದೆ. ಈ ಮಧ್ಯೆ, ಚಿತ್ರಕಥೆಯ ಜವಾಬ್ದಾರಿ ಹೊತ್ತಿದ್ದ ಬಾಲಕೃಷ್ಣ ಕಾಕತ್ಕರ್(ಚೆನ್ನದಾಸರು), ನವೀನ್ ಯಾಲಂಕಿ(ಸಿಂಧೋಳ್ಳು), ಸುಬ್ಬು ಅಡಪ (ಹಸಲರು), ನಿರಂಜನ(ಡೋಹರ) ಮುಂತಾದವರಿಗೆ ಆಯಾ ಜನಾಂಗಗಳ ವೈಶಿಷ್ಟ್ಯ, ಕಲೆಹಾಕಬೇಕಾದ ಮಾಹಿತಿ, ಸಂದರ್ಶಿಸಬೇಕಾದ ಜಾಗಗಳು, ಕಲಾವಿದರು, ಸಂಪನ್ಮೂಲ ವ್ಯಕ್ತಿಗಳ ಸಂಪರ್ಕ ನೀಡಿ ಇದನ್ನೆಲ್ಲಾ ಸೂಕ್ಷ್ಮವಾಗಿ ಒಳಗೊಳ್ಳಬೇಕಾದ ಹೊಣೆಯ ಬಗ್ಗೆಯೂ ಎಚ್ಚರಿಸಿದ್ದೆ. ಸುಬ್ಬು, ನಿರಂಜನರು ಅವರೇ ಮುಂದಾಗಿ ಸಂಗ್ರಹಿಸಿ ತಂದ ಮಾಹಿತಿಯನ್ನು ಚಿತ್ರಕಥೆ ರಚನೆಗೆ ಒದಗಿಸಿದರು. ನವೀನ್ ಮತ್ತು ಕಾಕತ್ಕರ್‌ಗಂತೂ ಗಂಟೆಗಟ್ಟಲೆ 'ಜನಾಂಗೀಯ ಅಧ್ಯಯನ ಆಕರ'ಗಳನ್ನು ಬಳಸುವ ರೀತಿ ಮತ್ತು ಸಾಧ್ಯತೆಯ ಬಗ್ಗೆಯೂ ಅನೇಕ ಸೂಕ್ಷ್ಮ ಒಳನೋಟಗಳನ್ನು ಹಂಚಿಕೊಂಡಿದ್ದೆ. ಒಟ್ಟಾರೆ ತಾವು ಮಾಡಬೇಕಾಗಿರುವ ಸಾಕ್ಷ್ಯಚಿತ್ರಕ್ಕೆ ಜೀವಸೆಲೆಯಾಗಬೇಕಾಗಿರುವ ಜನಾಂಗವನ್ನು ಕಣ್ಣಾರೆ ನೋಡಿಬರುವುದರ 'ಮಹತ್ವ'ವನ್ನು ಒತ್ತಿ ಹೇಳಿದ್ದೆ. ಅದರಂತೆಯೇ ಅವರೂ ಕೂಡ ಸಾಕಷ್ಟು ಸಾಹಸ ಮಾಡಿ ಬಂದಿದ್ದರು.

ಈ ಮಧ್ಯೆ 'ಕ್ಷೇತ್ರಕಾರ್ಯ'ದ ನಡುವಿನಿಂದಲೇ ಮಿಸ್ಟರ್ ನವೀನ್ ಯಾಲಂಕಿ ಫೋನ್ ಮಾಡಿ ಆ ಜನಾಂಗದ ಅಗೋಚರತೆ, ಅಲೆಮಾರಿತನಗಳ ಬಗ್ಗೆ ಭಾವಪೂರ್ಣ ಫೋನ್ ಭಾಷಣವನ್ನು ಮಾಡಿದ್ದರು.

> ಇ.ಪಿ.ಥರಸ್ಟನ್‌ರಂತಹ ಪ್ರಾಜ್ಞರು ಕೂಡ "ದಿ ತೆಲುಗು ಸ್ಪಿಕಿಂಗ್ ಬೆಗ್ಗರ್ ಗ್ರೂಪ್ಸ್" ಎಂಬುದಾಗಿ 'ಬುಡ್ಗ ಜಂಗಮ'ರ ಬಗ್ಗೆ ಉಲ್ಲೇಖಿಸಿರುವುದು ಒಂದು ಗ್ರಹಿಕಾದೋಷವಾಗಿಯೇ ನನಗೆ ತೋರುವುದು', ಹಾಗು ಚಿತ್ರ ನಿರ್ದೇಶಕರ ಆತುರ ಮತ್ತು ರೂಢಿಗತ ಧೋರಣೆಗಳು ಈ ಮಾದರಿ ಸಾಕ್ಷ್ಯಚಿತ್ರ ನಿರ್ಮಿಸಲು ಸಹಕಾರಿಯಾಗಲಾರವು

ಆದರೆ ಎರಡನೆಯ 'ಶಿಬಿರ' ಮುಗಿದ ನಂತರ ಫೋನ್ ಮಾಡಿ 'ನನಗೆ ಪರ್ಫೆಕ್ಟ್' ಚಿತ್ರಕತೆ ಬೇಕಿರುವುದಾಗಿಯೂ ಅದು ನನ್ನಿಂದ ಸಿಗುವ ಸಂಭವ ಇಲ್ಲವಾದ್ದರಿಂದ ಬೇರೊಬ್ಬರು, ನನ್ನ ಜತೆಗಿದ್ದವರಿಂದಲೇ 'ಪರ್ಫೆಕ್ಟ್' ಚಿತ್ರಕತೆ ಬರೆಸಿಕೊಳ್ಳುವುದಾಗಿ ನನ್ನಿಂದ ಯಾವ ಆಕ್ಷೇಪಣೆಯೂ ಇಲ್ಲದಂಥ ನೋ ಅಬ್ಜೆಕ್ಷನ್ ಸರ್ಟಿಫಿಕೇಟನ್ನು ಕೇಳಿದರು. ನಾನು ಅವರಿಗೆ ಚರ್ಚೆಯಲ್ಲಿ ಎಲ್ಲರ ಎದುರೇ ಚಿತ್ರಕತೆ ಬರೆಯಲಾರದಷ್ಟು ಗೊಂದಲಗೊಂಡಿರುವುದರಿಂದ ಆ ಹೊಣೆಯನ್ನು ನನ್ನಿಂದ ಹಿಂದೆ ಪಡೆಯುವಂತೆ ಕೇಳಿಕೊಂಡಿದ್ದೆ. ಆದ್ದರಿಂದ ನನ್ನಿಂದ ಯಾವ ಆಕ್ಷೇಪಣೆಯೂ ಬರಲಾರದೆಂದೂ 'ಆ ಇನ್ನೊಬ್ಬರು ನನ್ನ ಜೊತೆಗಿರುವವರು ಎಂದದ್ದು ಲಕ್ಷ್ಮೀಪತಿ ಕೋಲಾರ ತಾನೇ?' ಎಂದೆ. ಹೌದೆಂದರು. ಹಾಗಿದ್ದ ಮೇಲೆ ಯಾವ ಚಿಂತೆ, ಸಮಸ್ಯೆಗಳೂ ಉದ್ಭವಿಸಲಾರವೆಂದೂ... ಹಾಗೂ ಆ ಕ್ಷೇತ್ರದಲ್ಲಿ ಅವರೇ ಅತ್ಯುನ್ನತ ಮಾದರಿ ಎಂದೂ ಹೇಳಿದೆ.

ಈ 'ಪರ್ಫೆಕ್ಟ್' ಚಿತ್ರಕತೆಯ ಬೇಡಿಕೆ ಬರುವ ಮೊದಲು ಅಲೆಮಾರಿ ಸಮುದಾಯಗಳ ಅಸ್ತಿತ್ವದ ಪ್ರಶ್ನೆಗಳೊಂದಿಗೆ ಗುದ್ದಾಡುತ್ತಿರುವ ಬಾಲ ಗುರುಮೂರ್ತಿಯವರು ಈ ಬಿಕ್ಕಟ್ಟಿನಿಂದ ಹೊರಬರುವ ರೀತಿಯದೊಂದು 'ಬುಡ್ಗ ಜಂಗಮ'ರ ಮೇಲೆ ಬರೆದಿದ್ದ ಚಿತ್ರಕತೆ ಓದಿದರು. ಅದರಲ್ಲಿ ಅವರು ಕಂಡೂ ಕಾಣದಂತೆ ಮುಚ್ಚಿ ಹಾಕಲು ಯತ್ನಿಸಿದ್ದ 'ತೇಲು ನೋಟ'ವನ್ನು ನಾನು ವಿಮರ್ಶಿಸಿದ್ದೆ. ಹಾಗು ಇ.ಪಿ.ಥರಸ್ಟನ್‌ರಂತಹ ಪ್ರಾಜ್ಞರು ಕೂಡ "ದಿ ತೆಲುಗು ಸ್ಪಿಕಿಂಗ್ ಬೆಗ್ಗರ್ ಗ್ರೂಪ್ಸ್" ಎಂಬುದಾಗಿ 'ಬುಡ್ಗ ಜಂಗಮ'ರ ಬಗ್ಗೆ ಉಲ್ಲೇಖಿಸಿರುವುದು ಒಂದು ಗ್ರಹಿಕಾದೋಷವಾಗಿಯೇ ನನಗೆ ತೋರುವುದು ಎಂದೂ ವಾದಿಸಿದ್ದೆ. ಹಾಗೂ ಚಿತ್ರ ನಿರ್ದೇಶಕರ ಆತುರ ಮತ್ತು ರೂಢಿಗತ ಧೋರಣೆಗಳು ಈ ಮಾದರಿ ಸಾಕ್ಷ್ಯಚಿತ್ರ ನಿರ್ಮಿಸಲು ಸಹಕಾರಿಯಾಗಲಾರವು ಎಂದೂ ಎಚ್ಚರಿಸಿದ್ದೆ. ಇಷ್ಟೇ ಅಲ್ಲದೆ ಒಟ್ಟು ಕ್ಯಾನ್‌ವಾಸನ್ನು ಚಿಂತಿಸುವಾಗ ನಿರ್ಲಕ್ಷಿಸಲಾಗಿದ್ದ 'ಗುರುತು ರಾಜಕಾರಣ'ದ ಮುಂಬರುವ ಅಪಾಯಗಳನ್ನು ಇನ್ನಾದರೂ ಮನಗಾಣಬೇಕೆಂದು ವಿನಂತಿಸಿದ್ದೆ. 'ಸಮಾಜಶಾಸ್ತ್ರ, ಮಾನವಶಾಸ್ತ್ರಗಳು ಗೂಟಕ್ಕೆ ಕಟ್ಟಿಕೊಂಡ ಕೊತ್ತಿಮರಿಗಳಾಗಿವೆ'. ಇಂಥ ಉಪಕರಣಗಳಿಂದ ಈ ಹೊತ್ತಿನ ಬಿಕ್ಕಟ್ಟುಗಳನ್ನು ಬಿಡಿಸಿಕೊಳ್ಳಲಾಗದು ಎಂದು ಪದೇ ಪದೇ ಬಾಯಿಬಡಿದುಕೊಳ್ಳುತ್ತಲೂ ಇದ್ದೇನೆ. ನನಗೆ ವಿಶ್ವವಿದ್ಯಾನಿಲಯಗಳ ವಿದ್ವತ್ತಿನ ಗಂಟೆಗಳನ್ನು ತಂದು ಅಮಾಯಕರ ಕತ್ತಿಗೆ ಕಟ್ಟುವ ಆಟದಲ್ಲಿ ಅಷ್ಟು ವಿಶ್ವಾಸ ಇಲ್ಲ. ಆದರೆ ಸದ್ಯಕ್ಕೆ ಅದು ಬಿಟ್ಟರೆ 'ಗೋಚರ ರಾಜಕಾರಣಕ್ಕೆ' ಈ ನುಚ್ಚುನೂರಾದ ಜನಾಂಗಗಳಿಗೆ ಬೇರೆ ದಾರಿಯೂ ಇಲ್ಲ. ಇಂತಹ ಬಿಕ್ಕಟ್ಟಿನಲ್ಲಿ 'ಜನಾಂಗೀಯ ಸಾಕ್ಷ್ಯ ಚಿತ್ರ'ಗಳ ಅಂತರ್ಗತ ವೈರುಧ್ಯಗಳನ್ನು ತಾತ್ವಿಕ ತಿಳುವಳಿಕೆಗಳ ಮೂಲಕವಷ್ಟೆ ವಿವರಿಸಿಕೊಳ್ಳುವುದು ಅನಿವಾರ್ಯ. ಈ ದಿಕ್ಕಿನ ಮೊದಲ ಹೆಜ್ಜೆಯಾಗಿ ಸಿನಿಮಾ ಮಾಧ್ಯಮವನ್ನು ಕಲಾತ್ಮಕ ನೆಲೆಗಳಿಂದ ಅಧ್ಯಯನ ಮಾಡುತ್ತಾ ಬಂದಿರುವ ಪರಮೇಶ್ವರ ಗುರುಸ್ವಾಮಿಯವರು 'ನಾನೂಕ್ ಆಫ್ ದಿ ನಾರ್ತ್' ಸಾಕ್ಷ್ಯಚಿತ್ರದ ಬಗ್ಗೆ ಬೆಳಕು ಚೆಲ್ಲಿದ್ದಾರೆ.

-ಕೋ.ರಾ

ನಾವು ನೋಡಿದ ಸಿನಿಮಾ

-ಪರಮೇಶ್ವರ ಗುರುಸ್ವಾಮಿ

'ನಾನೂಕ್ ಆಫ್ ದಿ ನಾರ್ತ್'

1922ರಲ್ಲಿ ರಾಬರ್ಟ್ ಫ್ಲಾಹರ್ಟಿ, 'ನಾನೂಕ್ ಆಫ್ ದಿ ನಾರ್ತ್' ಎಂಬ ಕೆನಡಾದ ಹಿಮಪ್ರದೇಶದಲ್ಲಿ ವಾಸಿಸುವ ಎಸ್ಕಿಮೊ ಕುಟುಂಬ ಕುರಿತ ಚಿತ್ರವನ್ನು ಬಿಡುಗಡೆ ಮಾಡಿದಾಗ ಚಲನಚಿತ್ರದಲ್ಲಿ 'ಸಾಕ್ಷ್ಯಚಿತ್ರ' ಅಥವಾ ಡಾಕ್ಯುಮೆಂಟರಿ ಚಿತ್ರ ಎಂಬ ಪರಿಕಲ್ಪನೆ ಸೃಷ್ಟಿಯಾಯಿತು. ಫ್ಲಾಹರ್ಟಿಯನ್ನು ಸಾಕ್ಷ್ಯಚಿತ್ರ ಪಿತಾಮಹ ಎಂದೇ ಕರೆಯಲಾಗುತ್ತದೆ.



'ನಾನೂಕ್ ಆಫ್ ದಿ ನಾರ್ತ್' ಚಿತ್ರವು ಫ್ಲಾಹರ್ಟಿಯ ಸುಂದರ ಛಾಯಾಗ್ರಹಣ, ನಾನೂಕನ ಅಭಿನಯವಿಲ್ಲದ ಸಹಜ ನಡವಳಿಕೆಗಳು, ನಾನೂಕನ ಕುಟುಂಬವು ಹಸಿವು, ಆಹಾರ ಮತ್ತು ಉಳಿವಿಗಾಗಿ ಹಿಮಮಯ ಪ್ರದೇಶದಲ್ಲಿ ನಡೆಸಬೇಕಾದ ನಿರಂತರ ಹೋರಾಟವನ್ನು ಅದ್ಭುತವಾಗಿ ದಾಖಲಿಸಿದೆ ಎಂದು ಗುರುತಿಸಲಾಗಿದೆ. ಚಿತ್ರದ ಕೊನೆಯಲ್ಲಿ ಹಸಿವಿನಿಂದ ನಾನೂಕ್ ಸತ್ತ ಎಂಬ ಅಡಿಟಿಪ್ಪಣಿಯನ್ನು ಸೇರಿಸಲಾಗಿತ್ತು.

ಆದರೆ ಈ ಚಿತ್ರದಲ್ಲಿ ಸಾಕ್ಷ್ಯಚಿತ್ರದ ಸಂಹಿತೆಗಳನ್ನು ಮುರಿದಿರುವ ಅಂಶಗಳು ಬೆಳಕಿಗೆ ಬಂದಿವೆ. 'ನಾನೂಕ್..' ನಂತರ ಫ್ಲಾಹರ್ಟಿ ಪ್ಯಾರಮೌಂಟ್ ಸಂಸ್ಥೆಗಾಗಿ ನಿರ್ಮಿಸಿದ ಪಾಲಿನೇಶಿಯದ ಬುಡಕಟ್ಟು ಜನರ ಕುರಿತ ಚಿತ್ರ, 'ಮೋಆನ' ವಿರುದ್ಧ ಕೆಲವು ವರ್ಷಗಳ ಹಿಂದೆ ಆ ಬುಡಕಟ್ಟು ಜನಾಂಗದವರು ಚಿತ್ರದಲ್ಲಿ ತೋರಿಸಿರುವುದೆಲ್ಲಾ ಸುಳ್ಳು, ಜಗತ್ತಿನ ಕಣ್ಣಿನಲ್ಲಿ ನಮ್ಮನ್ನು ದಯನೀಯವಾಗಿ ಸುಳ್ಳು ಸುಳ್ಳೇ ತೋರಿಸಿದ್ದಾರೆ ಎಂದು ಪ್ರತಿಭಟಿಸಿದರು. ಪುರಾವೆಯಾಗಿ ಚಿತ್ರೀಕರಣದ ಕೆಲವು ಲೊಕೇಷನ್‌ಗಳು ತಮ್ಮ ಪ್ರದೇಶದಲ್ಲಿ ಇಲ್ಲವೇ ಇಲ್ಲ ಎಂಬುದನ್ನು ಸಾಬೀತು ಪಡಿಸಿದ್ದರು.

'ನಾನೂಕ್ ಆಫ್ ದಿ ನಾರ್ತ್' ಚಿತ್ರದ ಕೊನೆಯಲ್ಲಿ ನಾನೂಕ್ ಹಸಿವಿನಿಂದ ಸತ್ತ ಎಂಬ ಟಿಪ್ಪಣಿ ಇದೆ. ಆದರೆ ಅವನು ಸತ್ತದ್ದು ಕ್ಷಯ ರೋಗದಿಂದ. ಈ ಚಿತ್ರವು ಸೆರೆಹಿಡಿದಿರುವ ಬದುಕು ನಾನೂಕನ ಕುಟುಂಬದ ಬದುಕು ಎಂದು ಪ್ರೇಕ್ಷಕರು ತಿಳಿದುಕೊಳ್ಳುತ್ತಾರೆ. ಆದರೆ ನಾನೂಕ್ ಎಂದು ನಮಗೆ ತೋರಿಸುವ ವ್ಯಕ್ತಿಯ ನಿಜವಾದ ಹೆಸರು ಅಲ್ಲಕರಿಯಲ್ಲಕ್. ಕೆಲವು ಸನ್ನಿವೇಶಗಳನ್ನು ಕೃತಕವಾಗಿ ಸೃಷ್ಟಿಸಿ ಸಹಜವಾದದ್ದು ಎಂಬಂತೆ ಚಿತ್ರೀಕರಿಸಲಾಗಿದೆ. ಅಲ್ಲಕರಿಯಲ್ಲಕ್ (ನಾನೂಕ್) ನಿಜಜೀವನದಲ್ಲಿ ಬೇಟೆಗೆ ಬಂದೂಕನ್ನು ಬಳಸುತ್ತಿದ್ದ, ಆದರೆ ಫ್ಲಾಹರ್ಟಿ ಅವನ ಕೈಗೆ ಈಟಿಯನ್ನು ಕೊಟ್ಟಿದ್ದಾನೆ. ಇಗ್ಲೂ (ಎಸ್ಕಿಮೋ ಜನರ ಹಿಮಮನೆ) ಒಳಗಿನ ನಾನೂಕನ ಕುಟುಂಬ ಜೀವನದ ಚಿತ್ರೀಕರಣ ಸಹ ನಟನೆ ಮತ್ತು ಚಿತ್ರೀಕರಣಕ್ಕೆ ಅರೆಬರೆ ಇಗ್ಲೂ ರಚನೆಯೊಂದಿಗೆ ಆಗಿದೆ.

ಇದೆಲ್ಲಾ ಫ್ಲಾಹರ್ಟಿಯನ್ನು ಮೋಸಗಾರ ಸುಳ್ಳುಗಾರ ಚಿತ್ರ ತಯಾರಕ ಎಂದು ಆರೋಪಿಸುವುದಕ್ಕಲ್ಲ. ಸಾಕ್ಷ್ಯಚಿತ್ರ ಪಿತಾಮಹನೆನಿಸಿಕೊಂಡ ಫ್ಲಾಹರ್ಟಿ ಮತ್ತು ಪ್ರಥಮ ಸಾಕ್ಷ್ಯಾ ಚಿತ್ರ ಎಂದು ಗುರುತಿಸಲ್ಪಡುವ 'ನಾನೂಕ್ ಆಫ್ ದಿ ನಾರ್ತ್' ಚಿತ್ರವನ್ನು ಈ ದೃಷ್ಟಿಕೋನಗಳಿಂದ ನೋಡಿದಾಗ ಸಾಕ್ಷ್ಯಚಿತ್ರಗಳ ತಯಾರಿಕೆಯಲ್ಲಿ ಮಾಧ್ಯಮದ ತಾಂತ್ರಿಕತೆಯು ಒಡ್ಡುವ ಸವಾಲುಗಳನ್ನು ಅರ್ಥಮಾಡಿಕೊಳ್ಳಲು ಸಹಾಯವಾಗುತ್ತದೆ, ಹಲವಾರು ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ.

01. ವಸ್ತುನಿಷ್ಠತೆಯನ್ನು ತಾಂತ್ರಿಕ ಅಂಶಗಳಿಗಾಗಿ ತ್ಯಾಗ ಮಾಡಬಹುದೇ?

02. ವಾಸ್ತವತೆಯ ಭ್ರಮೆಯನ್ನು ಪ್ರೇಕ್ಷಕರಲ್ಲಿ ಮೂಡಿಸುವುದು ಸರಿಯೆ?

03. ವಾಸ್ತವತೆಯನ್ನು ಸಾಧಿಸುವಲ್ಲಿ ತಾಂತ್ರಿಕ ಮಿತಿಗಳನ್ನು ವಿಸ್ತರಿಸಿಕೊಳ್ಳಲಾಗುವುದಿಲ್ಲವೆ?

04. ಇಂತಹ ಮರೆಯಾಗುತ್ತಿರುವ ಸಂಸ್ಕೃತಿಗಳನ್ನು ಅವು ಸಂಪೂರ್ಣ ಮಾಯವಾಗುವ ಮೊದಲು ಸಾಕ್ಷ್ಯಚಿತ್ರಗಳಲ್ಲಿ ದಾಖಲಿಸಬಹುದಾದ ರೀತಿ ಹೇಗೆ?

05. ತಾಂತ್ರಿಕ ಜ್ಞಾನವನ್ನು ಹೊಂದಿರುವ ಮುಖ್ಯವಾಹಿನಿಯ ಭಾಗವಾಗಿರುವ ಮನಸ್ಸುಗಳು ಇಂತಹ ಪ್ರಯತ್ನಗಳನ್ನು ಮಾಡುವಾಗ ಆರೋಗ್ಯ ಪೂರ್ಣ ಜೀವಂತ ಸಂಸ್ಕೃತಿಗಳನ್ನು ಕೇವಲ ಪ್ರದರ್ಶನ ವಸ್ತುಗಳಾಗಿ ಮಾಡಿಬಿಡುವ ಅಪಾಯಗಳನ್ನು ನಿವಾರಿಸಿಕೊಳ್ಳುವುದು ಹೇಗೆ?

ಈ ಹಿನ್ನೆಲೆಯಲ್ಲಿ ನೋಡಿದಾಗ ನಮ್ಮಲ್ಲೀಗ ಸರ್ಕಾರದ ಇಲಾಖೆಗಳಿಗೆ ಸಂಘಸಂಸ್ಥೆಗಳಿಗೆ ಮಾಡುವ ವರದಿಚಿತ್ರಗಳನ್ನೇ ಸಾಕ್ಷ್ಯಚಿತ್ರಗಳೆಂದು ಹೇಳಲಾಗುತ್ತಿದೆ. ಸರ್ಕಾರೇತರ ಸಂಘಸಂಸ್ಥೆಗಳಿಗಾಗಿ ತಯಾರಾಗುತ್ತಿರುವ ಚಿತ್ರಗಳು ಬಹುತೇಕ ಭಿಕ್ಷಾಪಾತ್ರೆಗಳು. ಅವುಗಳ ಫಂಡ್ ರೈಸ್ ಮಾಡಲು ಅನುಕೂಲವಾಗುವಂಥ ಭಿಕ್ಷಾಪಾತ್ರೆಗಳು. ಇಲ್ಲವೆ ಅಂತರರಾಷ್ಟ್ರೀಯ ಸಂಸ್ಥೆಗಳು ನಿರ್ಧರಿಸಿದ ವಿಷಯಗಳನ್ನ ತತ್ವಗಳನ್ನ ಸಿದ್ಧಾಂತಗಳನ್ನ ಪ್ರತಿಪಾದಿಸುವ ಪ್ರಚಾರ ಮಾಡುವ ಚಿತ್ರಗಳು. ಇನ್ನು ಸರ್ಕಾರದ ಇಲಾಖೆಗಳು ಮಾಡಿಸಿರುವ ಮಾಡಿಸುತ್ತಿರುವ ಚಿತ್ರಗಳ ಬ್ರಹ್ಮಾಂಡವಂತೂ ಬಹುಶಃ ನ್ಯಾಯಮೂರ್ತಿ ಸಂತೋಷ ಹೆಗ್ಡೆಯಂಥವರ ತನಿಖೆಗೆ ಈಡಾದರೆ ಇದುವರೆಗಿನ ಹಗರಣಗಳನ್ನೆಲ್ಲ ಮೀರಿಸುವ ಕರ್ಮಕಾಂಡವಾಗುತ್ತದೆ. ಈ ಸಾಕ್ಷ್ಯಚಿತ್ರಗಳು ಕನಿಷ್ಠ ಸರ್ಕಾರದ ಸಾಧನೆಗಳ ಸರಿಯಾದ ದೃಶ್ಯವರದಿಗಳೂ ಆಗಿಲ್ಲ. ಹಿಂದೆ ಫಿಲ್ಮ್ಸ್ ಡಿವಿಷನ್ನಿನ ಚಿತ್ರಗಳನ್ನು ಕಂಡು ಮೂಗು ಮುರಿಯುತ್ತಿದ್ದವರು ಇಂದಿನ ಸರ್ಕಾರಿ ಪ್ರಾಯೋಜಿತ ಸಾಕ್ಷ್ಯಚಿತ್ರಗಳನ್ನ ಕಂಡು ಮೂಗು ಮುಚ್ಚಿಕೊಳ್ಳುವಂತಿವೆ. ○

ರಾಜೇಂದ್ರ ಸರ್ರೂ, ನಿಡುಮಾಮಿಡಿ ಅವಾರ್ಡೂ..!

ರಾಜೇಂದ್ರ ಎಂದೊಡನೆ ಗ್ರೂಪು ಫೋಟೋಗೆ ಪೋಸು ಕೊಡಲು ಬರುವಂತೆ ಹಲವು ರಾಜೇಂದ್ರರು ಸ್ಟೇಜಿಗೆ ನುಗ್ಗಿ ಬರುತ್ತಾರೆ. ಅವರಲ್ಲಿ ಇಬ್ಬರು ಎದ್ದು ಕಾಣುತ್ತಾರೆ. ಒಬ್ಬರು ಸ್ಲಂ ಬಾಲ. ಬಂದೂಕು ಹಿಡಿಯಲು ಹೋಗಿ ನೊಂದು ಬೆಂದು ಹಿಂದಿರುಗಿರುವ ರಾಜೇಂದ್ರ. ಈಗ ಅವರು ಕ್ಯಾಪ್ಟನ್ ಪ್ರಭಾಕರ್‌ರವರ ನೆನಪಿಗಾಗಿ ಪ್ರಭಾಕರ್ ರಾಜೇಂದ್ರರಾಗಿದ್ದಾರೆ! ಮತ್ತೊಬ್ಬರು ಮುಂಗೈಯಲ್ಲಿ ಬಂಗಾರದ ಬ್ರಾಸ್‌ಲೆಟ್, ಗುಂಡಿ ತೆರೆದು ಎದೆಯಲ್ಲಿ ತೂಗಾಡುವ ದೆರಳು ಗಾತ್ರದ ಬಂಗಾರ ಚೈನನ್ನು ಪ್ರದರ್ಶಿಸುವ ರಾಜೇಂದ್ರ. ಇವರು ಕೆ.ಜಿ.ಎಫ್.ನ ಮಾಜಿ ಶಾಸಕರು.

ಹೀಗೆ ಬಂಗಾರ ತೊಡುವುದರಲ್ಲಿ ಅವರಿಗೊಂದು ನ್ಯಾಯ ಇದೆ. ಯಾಕೆಂದರೆ ಇವರ ಹಿಂದಿನ ತಲೆಮಾರು ಗಣಿಗಿಳಿದು ಬಂಗಾರ ಹುದುಗಿದ ದೊಡ್ಡ ಕಲ್ಲುಗಳನ್ನು ಹೆಕ್ಕುವಲ್ಲಿ ಹೂತು ಹೋದವರು. ತಲೆದೆಸೆಗೆ ಬಂದ ಗೋರಿ ಕಲ್ಲನ್ನೂ ಕಾಣದ ಪರಂಪರೆ ಇವರದು. ಅದ್ದರಿಂದ ಅವರು ಧರಿಸಿ ಮೆರೆದರೆ ದುರಂಹಕಾರ ಎಂದುಕೊಳ್ಳದಷ್ಟು ವಿಶಾಲ ಹೃದಯಿಗಳಾಗಬೇಕಾದವರು ನಾವು. ಅವರಲ್ಲ. ಆದರೆ ನೆರೆಯಲ್ಲೇ ಇರುವ ಮಲಬಾಚುವ ಒಡಹುಟ್ಟು ಮ್ಯಾನ್ ಹೋಲ್‌ಗೆ ಬಿದ್ದು ಸತ್ತಿದ್ದರೂ ಕಣ್ಣೆತ್ತಿ ನೋಡರು. ಆಗ ನನ್ನನ್ನು ನಮ್ಮ ಜಾತಿ ಪದ್ಧತಿಯ "ಆಟಮ್ಯೇಸೇಷನ್" ಆಟದ ನರಹಂತಕ ಕ್ರೌರ್ಯ ತಟ್ಟಿತಲ್ಲಣಿಸುವಂತೆ ಮಾಡುತ್ತದೆ. ಇಂಥ ವೇಳೆ ನಮ್ಮ 'ರಾಜೇಂದ್ರ ಸರ್' ಅಂಥವರು ಸೆಂಟರ್ ಸ್ಟೇಜಿಗೆ ಜಿಗಿದಿರುತ್ತಾರೆ. 'ಮಲ' ಮುಟ್ಟುವವರನ್ನು ಮುಟ್ಟಿ ಮಾತಾಡಿಸಲು. ಆಗ ಅಲ್ಲಿ ವೈ.ಜೆ. ರಾಜೇಂದ್ರ ಮಾಯವಾಗಿ ಎಲೆ ತೋಟದ ಹಳ್ಳಿಯ ಎಲೆ ಎಲೆಯನ್ನು ಮುಟ್ಟಿ ನೋಡುತ್ತಿದ್ದ ಪೂರ್ವಿಕನೊಬ್ಬ ಪ್ರತ್ಯಕ್ಷವಾಗುತ್ತಾನೆ. ಪೂರ್ವಿಕ ಕೌಶಲ್ಯಗಳು ಮನುಷ್ಯನ ಜೀವಕೋಶಗಳನ್ನು ಭವಿಷ್ಯದಲ್ಲೂ ಹೇಗೆ ಆರೋಗ್ಯಗೊಳಿಸಬಲ್ಲವು ಅಥವಾ ಘಾತುಕಗೊಳಿಸಬಲ್ಲವು ಎಂಬುದು ಕಣ್ಮುಂದೆ ಬಂದು ಭೀತಗೊಳ್ಳುತ್ತೇನೆ. ಇಂತಹ ಭೀತಿಯನ್ನು ಯಾವತ್ತೂ ತಕ್ಕಮಟ್ಟಿಗೆ ತಗ್ಗಿಸುತ್ತಾ 'ಮಧ್ಯಮ ದಾರಿ'ಯೊಂದರ ಬಗ್ಗೆ ಪಿಸುಮಾತು ಹೇಳುತ್ತಾ ಬಂದವರು ರಾಜೇಂದ್ರ..

ಅತ್ತ ಬಂಗಾರದ ಬ್ರಾಸ್‌ಲೆಟ್ ಇಲ್ಲದ. ಇತ್ತ ಬಂದೂಕು ಇರಲಿ, ಟೂವ್ಹೀಲರ್ ಹ್ಯಾಂಡಲ್ ಹಿಡಿದು ಹಿಡಿದೂ ಕೊಂಚ ಗೂನಾಗಿರುವ ಬೆನ್ನು, ಈ ನಿರ್ಗತಿಕ ನೆಲಗಟ್ಟುಗಳನ್ನು ವಿಷ್ಲೇಷಿಸಲು ಅತ್ತ ಎನ್.ಜಿ.ಓ ಅಲ್ಲದ ಇತ್ತ ಜೀವಾ ಜೀವಾ ಕದಳಿ ಎಂದು ಭಾವಿಸಿರುವ ಮಾನವ ಹಕ್ಕುಗಳ ಗೊಂಡಾರಣ್ಯದಲ್ಲಿ ಇನ್ನೂ ಅಂಡಲೆಯುತ್ತಿರುವ ಆಶಾವಾದಿ. ಎಲ್ಲ 'ಸ್ಲಂ ಡಮ್ಮಿ'ನ ಸಾಮ್ರಾಟರಾದ ನಾಯಕರ ಬರ್ಕತ್ತನ್ನು ಬಲ್ಲ ವೃದ್ಧ ಭೀಷ್ಮರು. ತಾವು ಕಟ್ಟಿದ ಸಾಮ್ರಾಜ್ಯದ ಛತ್ರಪತಿ ಶಿವಾಜಿಗಳು ಆತ್ಮಗೌರವದ ಉಡದ ಸೊಂಟಕ್ಕೆ ಹಗ್ಗ ಕಟ್ಟಿ ವಿಧಾನಸೌಧ ಕೋಟೆಗೆ ಲಗ್ಗೆ ಹಾಕುವ ನಾನಾ ಲೀಲೆಗಳನ್ನು ಕಣ್ಣಾರೆ ಕಂಡವರಾಗಿ ಹೇಳಲಾಗದೆ, ಹೇಳದಿರಲಾಗದೆ, ಶರಶಯ್ಯೆಗೆ ತೆರಳಲು ಸಜ್ಜಾಗಿರುವ ವಾನಪ್ರಸ್ಥಾಶ್ರಮಿ. ಛೇ! ಇಂಥ ವೇಳೆ ತಂಗಾಳಿಯೊಂದು ನಿಡುಮಾಮುಡಿ ತೋಪಿನಿಂದ ಅಯ್ದು ಬಂದು ಕಿಸ್ಸೊಂದನ್ನು ಕೊಟ್ಟರೆ ಅಸೂಯೆ ಯಾಕೆ ಪಡಬೇಕು ಶಿವಾ... ಅದು ಈ ವಯಸ್ಸಿನಲ್ಲಿ ಡುಯೆಟ್ ಹಾಡುವಂತೆ ಪ್ರೇರೇಪಿಸದಿರಲಿ... ಅಷ್ಟೆ

ನನಗೂ ಅವರಿಗೂ ಈ ಎನ್.ಜಿ.ಓ. ಕಾರ್ಯಕರ್ತರ ಬಗ್ಗೆ ಬಗೆಹರಿಯದಷ್ಟು ಜಗಳ ಇದಾಗ್ಯೂ ರಾಜೇಂದ್ರ ಅದರಾಚೆಗೂ ನಿರ್ಲಕ್ಷಿತ ಸಮುದಾಯಗಳ ಸಂವಿಧಾನಬದ್ಧ ಹಕ್ಕುಗಳಿಗೆ ಹೋರಾಡುವ ಯೋಧಪಡೆ ಸಿದ್ಧವಾಗುವಲ್ಲಿ ಅಪಾರ ಭಾವನೆ ಇರುವವರು. ಯಾರೊಬ್ಬರೂ ಅದಕ್ಕೆ 'ರೆಡಿ' ಇಲ್ಲದಿದ್ದರೂ ಕೂಡ! ಇಂತಹ ಡಾನ್ ಕ್ವಿಕ್ಸೋಟ್‌ಗಳ ಬಗ್ಗೆ ನನಗೆ ಕಕ್ಕುಲಾತಿ ಹೆಚ್ಚು; ಅವರ ಅಮಾಯಕತೆಗಾಗಿ. ದಿಕ್ಕಿಲ್ಲದ ಹಕ್ಕಿಗಳು ಬಂದು ಗೂಡು ಕಟ್ಟಿಕೊಳ್ಳುವುದಕ್ಕೆಂದೇ ಇರುವ ಸೂರು ಈ ರಾಜೇಂದ್ರ. ಸದಾ ಚಸ್ಮಾಧಾರಿಯಾಗಿ ಪುಸ ಪುಸನೆ, ಬೀಡಿ ಸಿಗರೇಟು ಸೇದುತ್ತಾ ಪಾಯಿಂಟಿನ ಮೇಲೆ ಪಾಯಿಂಟು ಹುಡುಕುತ್ತಾ ಲೀಗಲ್ ಬ್ಯಾಟಲ್ ನಡೆಸುವುದಕ್ಕೆ... ಹೀಗೆ ಎಂದೂ ಸೋಲು ಶರಣಾಗದ ಶರಣತ್ವವನ್ನು ಒಳಗಿಟ್ಟುಕೊಂಡು ಅದರ ತೋರು ಲಾಂಛನಗಳನ್ನು ಕಿತ್ತೆಸೆದಿರುವ ನಿಜ ಪ್ರಜಾಪ್ರಭುತ್ವವಾದಿ. ಅದ್ದರಿಂದಲೇ 'ಹಕ್ಕು-ಪ್ರಾತಿನಿಧ್ಯ-ಸವಲತ್ತು'ಗಳ ಆಚೆ ಇವರಿಗೆ ತಲೆ ಓಡುವುದಿಲ್ಲ. ಪಾಪ ಲೋ ಬಿಪಿ ಕೇಸು. ಅದ್ದರಿಂದ ಆಗಾಗ ಸುಸ್ತು ಕೊಂಚ ತಲೆ ಸುತ್ತು ಅಷ್ಟೇ. ಹೀಗೆ ರಾಯಚೂರಿನ ಸಾಕ್ಷರತಾ ಆಂದೋಲನದ ಅಖಾಡಾದಿಂದ ಎನ್.ಜಿ.ಓ ಮತ್ತು ಜನಾಂದೋಲನಗಳ 'ಗೆಟ್‌ಕನೆಕ್ಟಿಂಗ್' ಲಿಂಕಿನಲ್ಲಿ



ವೈಯಕ್ತಿಕ ಏಳಿಗೆಯ ಮೆಟ್ಟಿಲುಗಳು ಮುಕ್ತವಾಗಿದ್ದರೂ ಹತ್ತಲೊಲ್ಲದ ಹತ್ತಾರು ಮಲ್ಟಿಪಲ್ ಪಾತ್ರಗಳಾಗಿ ಇವರ ಸ್ಲಂ ಬಾಲಾಗಳೆಲ್ಲಾ ಮುಂಬರುವಂತಾಗಲಿ ಎಂಬ ಕನಸಿನಲ್ಲಿ ಇನ್ನೂ ತೂಕಡಿಸುತ್ತಾ ಸಾಗಿರುವವರು. ಇಂಥ ರಾಜೇಂದ್ರ ಸರ್ ಅವರಿಗೆ ನಿಡುಮಾಮಿಡಿ ಮಾನವ ಧರ್ಮಪೀಠ ತನ್ನ ಧರ್ಮಕ್ಕೆ ತಕ್ಕಂತೆ ಮನ್ನಣೆ ನೀಡಿದೆ. ಸಾಕ್ಷರತೆ-ಸ್ಲಂ-ಸ್ತ್ರೀ ಪೇಂಟಿಂಗ್‌ವರೆಗೆ ಎಲ್ಲಾ ಸಾಮಾಜಿಕ ವಂಚನೆ ಮತ್ತು ದೌರ್ಜನ್ಯದ ವಿರುದ್ಧ ಸತ್ತಮಟ್ಟ ಹೋರಾಟಗಳನ್ನು ದೊಡ್ಡದೆಂದು ಭಾವಿಸಿ ತನ್ನ ಹಿಂದಿನ ದೆಳಕಾಗಿರುವವರು ಪ್ರಶಸ್ತಿಗೂ ಮೀರಿದ ಸೇವಾ ಸಾಧನೆ ಇರುವ ರಾಜೇಂದ್ರರಿಗೆ ಸಿಕ್ಕಿರುವ ಈ ಗುರುತು ನಮ್ಮೆಲ್ಲರ ಹೆಮ್ಮೆಯೂ ಆಗಿದೆ.

-ಕೋ.ರಾ

ಕರ್ನಾಟಕಕ್ಕೊಂದು ಹೂ ಹಾರ

Garlanding Karnataka

ಕರ್ನಾಟಕಕ್ಕೊಂದು ಹೂ ಹಾರ

Garlanding Karnataka

ಆದಿಮ ಕಳೆದ ಐದಾರು ವರ್ಷಗಳಿಂದ ನೆಲಸಂಸ್ಕೃತಿಯ ನಡೆಯಲ್ಲಿ ತೊಡಗಿಕೊಂಡಿರುವ ನಿರ್ಗತಿಕ ನೆಲೆಗಟ್ಟುಗಳ ಸಾಂಸ್ಕೃತಿಕ ಪರ್ಯಾಯ. ಎಪ್ಪತ್ತರ ದಶಕದ ರಾಜಕೀಯ ಪಲ್ಲಟಗಳಿಗೆ ನೆಲವನ್ನು ಹದಗೊಳಿಸಿ, ನೆಲದ ಮರೆಯ ನಿಧಾನಕ್ಕೆ ತೆರಳಿ ಇದೀಗ ಹೊಸ ತಿಳುವಳಿಕೆ ಮತ್ತು ಈ ಹೊತ್ತಿನ ನೆಲನಡೆಗೆ ಬೇಕಾದ ಉಳಿವಿನ ಪಠ್ಯಗಳೊಂದಿಗೆ ಮರಳುತ್ತಿರುವ ತೇಲುತೆಪ್ಪ.... 'ತಪ್ಪು ಚಿಕ್ಕದು ಮಾಡು, ತೆಪ್ಪ ದೊಡ್ಡದು ಮಾಡು' ಎಂಬ ಜನಪದ ವಿವೇಕವನ್ನೇ ದೀಪವಾಗಿಸಿಕೊಂಡು ನಡೆಸಲಿರುವ ಯಾನವೇ ಕರ್ನಾಟಕಕ್ಕೊಂದು ಹೂ ಹಾರ -Garlanding Karnataka. ಈ ಹೊತ್ತು ನವಆರ್ಥಿಕತೆ ಸೃಷ್ಟಿಸಿರುವ ನಿರ್ದಯಿ, ಅಮಾನುಷ ಮತ್ತು ಸ್ವಯಮಾರ್ಜಿತ ವ್ಯಕ್ತಿಗತ ಕುರುಡನ್ನು ನೀಗಿಕೊಳ್ಳುವ ಒಂದು ಪ್ರಯತ್ನವಾಗಿ ಈ ನಡೆ ಯೋಜಿತಗೊಂಡಿದೆ. ಮೂಲ ಮಾನವಘಟಕವನ್ನು ಅಸಂಖ್ಯಾತ ಸೀಳುಗಳನ್ನಾಗಿಸುತ್ತಿರುವ ಈ ಹೊತ್ತಿನ ಯಾಜಮಾನ್ಯ ಸಂಸ್ಕೃತಿಯ ಆಕ್ರಮಣಗಳನ್ನು ಅತ್ಯಂತ ನಿರ್ಗತಿಕ ಅಥವಾ ಶೂನ್ಯ ನೆಲೆಗಟ್ಟಿನ ಕಲಿಕಾಬಲಗಳ ಮೂಲಕ ಎದುರುಗೊಂಡು ಒಂದು ಮಾನವಂತ ಕಿರುಝರಿಯನ್ನು ಮರುಜೀವಗೊಳಿಸುವ 'ಭಗೀರಥ' ಪ್ರಯತ್ನ ಇದು.

1. ಈಗಾಗಲೇ ಸಾಹಿತ್ಯ, ಸಂಸ್ಕೃತಿ, ರಂಗಭೂಮಿ, ಜನಪದ ಮುಂತಾಗಿ ಹಲವು ಹತ್ತು ಸಾಂಸ್ಕೃತಿಕ ಪ್ರಯೋಗಗಳನ್ನು ನಡೆಸಿ ಅನುಭವ ಪಾಠಗಳೊಂದಿಗೆ ಸಮೃದ್ಧವಾಗಿರುವ ಆದಿಮ ಲಿವಿಂಗ್ ಸ್ಕೂಲ್ ಒಂದು ತಾತ್ವಿಕ ಶಾಲೆಯಾಗಿದ್ದು ಕೈಗಾರಿಕಾ ಕ್ರಾಂತಿಯ ದರೋಡೆಯ ಸುಗ್ಗಿಯಾದ ಎಲ್ಲ ಜ್ಞಾನಶಿಸ್ತುಗಳ ಅಂತರ್ಗತ ದ್ರೋಹವನ್ನು ಸಾರಾಸಗಟಾಗಿ ವಿರೋಧಿಸುತ್ತದೆ. ಹಾಗೂ ಭವಿಷ್ಯದ ಜ್ಞಾನಾಧಾರಿತ, ಸಮಾಜ ನಿರ್ಮಾಣದಲ್ಲಿ ಈ ನಿರ್ಗತಿಕ ನೆಲೆಗಟ್ಟುಗಳ ಅಸ್ತಿತ್ವ, ಅಸ್ಮಿತೆಯ ಗೌರಾವಾನ್ವಿತ ಗುರುತುಗಳಿಗಾಗಿ ಇದುವರೆಗಿನ ಮಿತಿಗೊಂಡಿರುವ ಐಡೆಂಟಿಟಿ ಪಾಲಿಟಿಕ್ಸ್ ಅಥವಾ ಗುರುತು 'ರಾಜಕಾರಣ'ದ ಸರಹದ್ದುಗಳನ್ನು ವಿಸ್ತರಿಸಬಯಸುತ್ತದೆ.

2. ಹೀಗಾಗಿ ಹುಸಿ ವಿಶ್ವಾತ್ಮಕತೆಯ ಬಗೆದು ಹೊಸ ಜೀವತಾಣಗಳನ್ನು ಗುರುತಿಸುವ ಉಳಿಸಿ ಬೆಳೆಸುವ, ಈ ಹೊತ್ತಿನ ಸವಾಲನ್ನು ಕೈಗೆತ್ತಿಕೊಳ್ಳಬಯಸಿದೆ. ಒಟ್ಟಾರೆ ನಮ್ಮ ನೆಲಕ್ಕೆ ತಕ್ಕ ನುಡಿಗಟ್ಟಿನಲ್ಲಿ ಹೇಳುವುದಾದರೆ ಮುಚ್ಚಿಹೋದ ಜಲದ ಕಣ್ಣುಗಳನ್ನು ಪಡೆದುಕೊಳ್ಳಲು ಹೂಳುಬಿದ್ದ ತಲಪರಿಗೆಗಳ ಹೂಳೆತ್ತುವತ್ತ ದಾರಿಕಾಣಿಸುವ ಹಂಬಲದ ನಡೆ. ಈ ಕರ್ನಾಟಕಕ್ಕೊಂದು ಹೂ ಹಾರ.

3. ತಾಯಿನೆಲವನ್ನ ಬಲಿಗೊಡುತ್ತಿದ್ದೇವೆ ಎಂಬುದನ್ನು ಅರಿಯಲಾಗದಂತಿರುವ ಈ ಹೊತ್ತು ಆ ಬಕಣಗಿಲೆ ಹಾರವನ್ನು ಕಿತ್ತೆಸೆದು ಈ ನಿಜ ಹಾರ ಹಾಕುವತ್ತಣ ನಡೆ. ಈ ಹಾರದಲ್ಲಿ ಯಾರು ಬೇಕಾದರೂ ಹೂವಾಗಬಹುದು, ಗೊಂಚಲಾಗಬಹುದು, ಹೂತೇರಿನ ಜೊತೆಗೂಡಬಹುದು. ಇದು

ಬೇಲಿ ಬೇಲ್ಯಾಗಿನ ಹೂಮಗ್ಗಿ ಈಗೀಗ
ಬಂದು ಕುಂತಾವ ಊರ ತೇರಾಗ..

ಅನ್ನುವ ಕಾಲ. ನಮ್ಮ ನಮ್ಮ ವಿಶಿಷ್ಟ ಘಮಲುಗಳಲ್ಲಿ ನಾವಿರಬೇಕಾದ್ದು ಇವತ್ತಿನ ತುರ್ತು.

4. ಸದ್ಯಕ್ಕೆ ರಂಗತಂಡವೊಂದನ್ನು ಕಟ್ಟಿಕೊಂಡು ಈ ಹೊತ್ತಿಗೆ ಬೇಕಾದ ಮೂರು ರಂಗರೂಪಗಳನ್ನು ಸಿದ್ಧಪಡಿಸಿಕೊಂಡು ಈ ನಡೆ ಆರಂಭಗೊಳ್ಳುತ್ತಿದೆ. ಇದೀಗ ಕರ್ನಾಟಕಕ್ಕೊಂದು ಹೂ ಹಾರದ ಮೊದಲ ಹಂತವಾಗಿ 'ನಾಯಿತಿಪ್ಪ' ರಂಗರೂಪ ಪ್ರದರ್ಶನಕ್ಕೆ ಸಿದ್ಧವಿದೆ. ಪ್ರಾಯೋಗಿಕ ಪ್ರದರ್ಶನಗಳಿಂದ ಕಲಿಯುವ ಹೊಸ ರೀತಿಯೊಂದನ್ನು ಮುಂದಿನ ರೆಪರ್ಟರಿಯ ಪೂರ್ವಭಾವಿ ಸಿದ್ಧತೆಗಾಗಿ ಹಾಗೂ ನಡೆಯ ಆಶಯದಂತೆ ಸ್ಥಳೀಯ ಪ್ರದರ್ಶನಗಳಿಗೆ ಸಿದ್ಧವಿದೆ. ಜೊತೆ ಜೊತೆಗೆ ಇನ್ನೂ ಎರಡು ಇಂಥ ರಂಗರೂಪಗಳ ಸಿದ್ಧತೆ ನಡೆದಿದೆ.

5. ಇದು ಆದಿಮ ಲಿವಿಂಗ್ ಸ್ಕೂಲಿನ ರಂಗ ವಿಭಾಗ. ಈ ಕಿರುಝರಿಯ ಪಯಣದ ತೊದಲು ಹೆಜ್ಜೆ. ನಮ್ಮ ಮಹಾ ವಿಶ್ವವಿದ್ಯಾಲಯದ ಪರಿಕಲ್ಪನೆಯ ಆಲದ ಬೀಜ ಈ ಮೂಲಕ ಬಿತ್ತನೆಯಾಗಲಿದೆ. ಕೈಲಾದ ನೆರವು ನೀಡುವಂತೆ ಎಲ್ಲರನ್ನೂ ಬೇಡಿಕೊಳ್ಳುತ್ತೇವೆ. ದೇಶ ವಿದೇಶಿಗರಾದರೂ ಸರಿ. ನಮ್ಮದು ಬಹಿರಂಗವಾಗಿ ಎಲ್ಲರೆದುರು ಒಡ್ಡಿರುವ ಭಿಕ್ಷಾಪಾತ್ರೆ. ಇಂಥವರೇ ನೀಡಬೇಕೆಂದು ಆದೇಶಿಸುವ ಅಥವಾ ಮಿತಿಗೊಳಿಸುವ ಹಕ್ಕು ನಮಗಿಲ್ಲ. ಹಸು ಏನು ತಿನ್ನುತ್ತದೆ ಎನ್ನುವುದಕ್ಕಿಂತ ಅದರ ಹಾಲಿನಲ್ಲೂ ಆ ಮೂಲಾಂಶ ಇದೆಯೋ ಇಲ್ಲವೋ ಅನ್ನುವ ವಿವೇಕವಷ್ಟೇ ನಮ್ಮ ಎಚ್ಚರ. ಹಾಗೂ ಹಣದ ಮೂಲವನ್ನು ನೋಡುವ ಮಾನದಂಡ. ಈ ಕೆಳಕಂಡಂತೆ ನೀವು ಈ ಹೂ ಹಾರದ ಭಾಗವಾಗಬಹುದು.

* ನಿಮ್ಮ ನಿಮ್ಮ ಊರುಗಳಲ್ಲಿ ನಾಟಕ ಪ್ರದರ್ಶನ ಏರ್ಪಡಿಸಬಹುದು.

* ಕರ್ನಾಟಕಕ್ಕೊಂದು ಹೂ ಹಾರ... ಪ್ರತೀ ಊರಿನ ಒಂದೊಂದು ಹೂವನ್ನು ಪೋಣಿಸಬಹುದು.

* ಹೂ ಹಾರ ತಂಡದ ಜೊತೆ ಬೆರೆತು ನಾಟಕ ಕಲಿಯಬಹುದು, ಕಲಿಸಬಹುದು, ಆಡಬಹುದು.


* ಸ್ಥಳೀಯ ತಂಡಗಳು, ಅಜ್ಞಾತ ರಂಗಕರ್ಮಿಗಳು, ಜನಪದ ಪ್ರದರ್ಶನ ಕಲಾಪ್ರಕಾರಗಳ ಕಲಾವಿದರನ್ನು ಗುರುತಿಸಿಕೊಡಬಹುದು.

* ರಂಗತಂಡಕ್ಕೆ ನಿಮ್ಮ ಕುಟುಂಬದ ನೆಲೆಗಳಲ್ಲಿ ತಂಗಲು ಮತ್ತು ಕಲಿಯಲು ಆಸ್ಪದ ನೀಡಬಹುದು.

* ನಿಮ್ಮಲ್ಲಿರುವ ಸಾಂಸ್ಕೃತಿಕ ಪರಿಕರಗಳನ್ನು ಬಳಕೆಗಾಗಿ ಕೊಡಬಹುದು. ಉದಾ. ಪುಸ್ತಕಗಳು, ವಾದ್ಯ ಪರಿಕರಗಳು ಇತ್ಯಾದಿ.

ಇದು ನಮ್ಮೆಲ್ಲರ ನಡೆ, ಉಳಿವಿನ ಕಡೆ ಕೈ ಜೋಡಿಸಿ...ಹರಸಿ...ಹಾರೈಸಿ...

-ಆದಿಮ ಲಿವಿಂಗ್ ಸ್ಕೂಲ್



Editor, Publisher, Printer : Kotiganahalli Ramaiah, Address:1007, Sidhartha layout, channasandra Raod, Kadugodi. Bangalore- 67. Phone No : 9972193392, email: adimalivingschool@gmail.com